# ಯೋಜನಾ

ಜುಲೈ 2014 ಅಭಿವೃದ್ಧಿ ಮಾಸಪತ್ರಿಕೆ ₹ 10/-

## ಪ್ರಜಾತಂತ್ರ ಮತ್ತು ಚುನಾವಣಾ ಸುಧಾರಣೆ

ಚುನಾವಣಾ ಸುಧಾರಣೆ : ಒಂದು ನೋಟ
ಜಗದೀಪ್ ಛೋಕರ್

ಚುನಾವಣಾ ಸುಧಾರಣೆ ನಡೆದು ಬಂದ ದಾರಿ
ಎಸ್.ವೈ. ಖುರೇಷಿ

ಅಭ್ಯರ್ಥಿಗಳು ಮತ್ತು ನಿಯಂತ್ರಣ
ಕೌಶಿಕ್ ಭಟ್ಟಾಚಾರ್ಯ

ಪ್ರಜಾಸತ್ತೆ ಮತ್ತು ಚುನಾವಣಾ ಸುಧಾರಣೆ
ನ್ಯಾಯಮೂರ್ತಿ ಕೋ. ಚೆನ್ನಬಸಪ್ಪ

ವಿಶೇಷ ಲೇಖನ
ಅಂಗದಾನ : ದುರ್ಗಮ ಹಾದಿ
ಸುಭದ್ರಾ ಮೆನನ್



Yojana (Kannada) Monthly/ July 2014
"Registered" Reg.No.RNP/KA/BGS/2024/2013-2015
Date of Publication 3rd July, Posted at Bangalore GPO on 10th July
Total No. of Pages : 52 + IV Cover Pages
ISSN 0971-8737
Regd.No. RNI 43034/85




# New Cheer,
# New Hope,
# New Leaf.........

## ....filled with enjoyable reading

**Publications Division**
Ministry of Information & Broadcasting
Government of India
e-mail: dpd@sb.nic.in, businesswng@gmail.com
website: publicationsdivision.nic.in
Now on Facebook at www.facebook.com/publicationsdivision

Printed & Published by **Ira Joshi, Additional Director General and Head** on behalf of Publications Division
& Printed at Omkar Offset Printers, 3/3, 1st Main Road, New Tharagupet, Bangalore - 560 002. Ph. : 080-26708186/7
and Published at 1st Floor, 'F' Wing, Kendriya Sadana, Koramangala, Bangalore - 560 034. Ph : 080 2553 7244
Chief Editor : Rajesh K. Jha, Senior Editor : B.S. Meenakshi.

ಜುಲೈ 2014

ಸಂಚಿಕೆ – 12 ಸಂಪುಟ – 29

# ಯೋಜನಾ

ಮುಖ್ಯ ಸಂಪಾದಕ
**ರಾಜೇಶ್ ಕೆ. ಝಾ**

ಹಿರಿಯ ಸಂಪಾದಕಿ
**ಬಿ.ಎಸ್. ಮೀನಾಕ್ಷಿ**

ಸಂಪಾದಕಿ
**ಬಿ.ಕೆ. ಕಿರಣ್ಮಯಿ**

ವಿಳಾಸ
ಯೋಜನಾ – ಕನ್ನಡ,
ಪ್ರಕಾಶನ ವಿಭಾಗ,
ಸಮಾಚಾರ ಮತ್ತು ಪ್ರಸಾರ ಸಚಿವಾಲಯ,
ಭಾರತ ಸರ್ಕಾರ,
ಮೊದಲನೆಯ ಅಂತಸ್ತು, 'ಎಫ್'ವಿಂಗ್,
ಕೇಂದ್ರೀಯ ಸದನ, ಕೋರಮಂಗಲ,
ಬೆಂಗಳೂರು – 560 034.
ದೂರವಾಣಿ : 080 – 25537244.
E-mail : yojanakannada@yahoo.com

## ಈ ಸಂಚಿಕೆಯಲ್ಲಿ ...........

ಸಂಪಾದಕೀಯ .................... 2

ರಾಷ್ಟ್ರಪತಿಗಳ ಭಾಷಣ .................... 3

ಚುನಾವಣಾ ಸುಧಾರಣೆ : ಒಂದು ನೋಟ .................... 5
**– ಜಗದೀಪ್ ಎಸ್. ಛೋಕರ್**

ಚುನಾವಣಾ ಸುಧಾರಣೆ ನಡೆದು ಬಂದ ದಾರಿ .................... 10
**– ಎಸ್. ವೈ. ಖುರೇಷಿ**

ಅಭ್ಯರ್ಥಿಗಳು ಮತ್ತು ನಿಯಂತ್ರಣ .................... 15
**– ಕೌಶಿಕ್ ಭಟ್ಟಾಚಾರ್ಯ**

ಪ್ರಜಾತಂತ್ರ : ಚುನಾವಣೆ – ಸುಧಾರಣೆ ಹೇಗೆ? .................... 19
**– ಸುಬ್ರತಾ ಕೆ. ಮಿತ್ರಾ**

ಅಂಗದಾನ : ದುರ್ಗಮ ಹಾದಿ .................... 24
**– ಸುಭದ್ರಾ ಮೆನನ್**

ಪ್ರಜಾಸತ್ತೆ ಮತ್ತು ಚುನಾವಣಾ ಸುಧಾರಣೆ .................... 30
**– ನ್ಯಾಯಮೂರ್ತಿ ಕೋ. ಚೆನ್ನಬಸಪ್ಪ**

ಚುನಾವಣೆಗಳಲ್ಲಿ ನಿರಂತರ ಸುಧಾರಣೆ .................... 34
**– ಎಂ. ಉಮಾಪತಿ**

ಚುನಾವಣೆಯ ಮಹತ್ವ ಮತ್ತು ಸುಧಾರಣೆ .................... 40
**– ಪ್ರೊ. ಯಮುನಾ ಎ. ಕೋಣೇಸರ**

ಸಂವಿಧಾನ ಮತ್ತು ಮಹಿಳೆ .................... 43
**– ಎಚ್.ಆರ್. ಲಮಾಣಿ**

ಆಟೋ ದಕ್ಷತೆ ಹೆಚ್ಚಳದ ಕೈಚಳಕ .................... 47
**– ಸಿಬ್ ಸಂಕರ್ ಮಂಡಲ್**

ದೋಣಿ ದವಾಖಾನೆ : ಭರವಸೆಯ ಆಶಾಕಿರಣ .................... 49
**– ಅಜೀರ ಪರ್ವೀನ್ ರಹಮಾನ್**

ನಿಮಗಿದು ತಿಳಿದಿದೆಯೇ? .................... 51

ವಾರ್ತಾ ವಿಶೇಷ .................... 52

ಮುಖಪುಟ ವಿನ್ಯಾಸ : ಗಜಾನನ ಪಿ. ಧೋಪೆ

ಯೋಜನೆಯ ಸಂದೇಶವನ್ನು ಎಲ್ಲ ಜನಗಳಿಗೆ ಮುಟ್ಟಿಸಲು, ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಯ ಎಲ್ಲ ಸಮಸ್ಯೆಗಳ ಬಗ್ಗೆ ಪ್ರಾಮಾಣಿಕ ಚರ್ಚೆ ಕೈಗೊಳ್ಳುವುದನ್ನು ಯೋಜನಾ ಉತ್ತೇಜಿಸುತ್ತದೆ. ಭಾರತ ಸರ್ಕಾರದ ಸಮಾಚಾರ ಮತ್ತು ಪ್ರಸಾರ ಸಚಿವಾಲಯದಿಂದ ಪ್ರಕಟಿತವಾದರೂ, ಯೋಜನಾ ಕೇವಲ ಅಧಿಕೃತ ದೃಷ್ಟಿಕೋನವನ್ನು ಬಿಂಬಿಸುವುದಕ್ಕೆ ಮಾತ್ರ ಸೀಮಿತವಾಗಿಲ್ಲ. ಕನ್ನಡ, ಇಂಗ್ಲೀಷ್, ಹಿಂದಿ, ಅಸ್ಸಾಮಿ, ಗುಜರಾತಿ, ಬಂಗಾಲಿ, ಮಲಯಾಳಂ, ಮರಾಠಿ, ತಮಿಳು, ತೆಲುಗು, ಒರಿಯಾ, ಪಂಜಾಬಿ ಮತ್ತು ಉರ್ದು ಭಾಷೆಯಲ್ಲಿ ಯೋಜನಾ ಪ್ರಕಟವಾಗುತ್ತಿದೆ.

**ಚಂದಾ ವಿವರ**

| | |
|---|---|
| ಒಂದು ವರ್ಷಕ್ಕೆ | 100.00 |
| ಎರಡು ವರ್ಷಗಳಿಗೆ | 180.00 |
| ಮೂರು ವರ್ಷಗಳಿಗೆ | 250.00 |

**ಚಂದಾ ಹಣವನ್ನು ಮನಿಯಾರ್ಡರ್ ಮೂಲಕವೇ ನಮ್ಮ ವಿಳಾಸಕ್ಕೆ ಕಳಿಸಿರಿ.**

**ಒಂದು ಪಕ್ಷ ಡಿಮಾಂಡ್ ಡ್ರಾಫ್ಟ್ ಕಳಿಸುವುದಾದರೆ ಅದನ್ನು PUBLICATIONS DIVISION, MINISTRY OF I & B, GOVERNMENT OF INDIA ಹೆಸರಿನಲ್ಲಿ CHENNAI ನಲ್ಲಿ ಸಂದಾಯವಾಗುವಂತೆ ಪಡೆದು ಅದನ್ನು ನಮ್ಮ ವಿಳಾಸಕ್ಕೆ ಕಳುಹಿಸಬೇಕು.**

**ಲೇಖನಗಳಲ್ಲಿ ವ್ಯಕ್ತವಾದ ಅಭಿಪ್ರಾಯಗಳು ಲೇಖಕರವು. ಅವರು ಪ್ರತಿನಿಧಿಸುವ ಸಂಸ್ಥೆ ಅಥವಾ ಸರ್ಕಾರದ ಅಭಿಪ್ರಾಯವಲ್ಲ. ಯೋಜನಾ ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹಿರಾತುಗಳ ಯಥಾರ್ಥತೆ ಆಯಾ ಸಂಸ್ಥೆಗಳ ಹೊಣೆಗಾರಿಕೆಯಾಗಿರುತ್ತದೆ.**

ಮುಖ್ಯ ಸಂಪಾದಕರ ಲೇಖನಿಯಿಂದ

## ಜನರ ಆಶಯ.....



ಜನರು ತಮ್ಮ ಬಯಕೆಗಳಿಗೆ ಅನುಗುಣವಾಗಿಯೆ ನಾಯಕರನ್ನು ಪಡೆಯುತ್ತಾರೆ ಎನ್ನುವ ಮಾತಿದೆ. ಇದು ಪ್ರಜಾತಂತ್ರ ವ್ಯವಸ್ಥೆಯ ನೈಜ ಕಾರ್ಯಾಚರಣೆಯನ್ನು ಬಹಿರಂಗಪಡಿಸಿದ ಪ್ರಮಾಣದಲ್ಲೆ ಸಂಗತಿಗಳನ್ನು ಅವಗುಂಠನಗೊಳಿಸುತ್ತದೆ – ಆಚ್ಛಾದಿಸುತ್ತದೆ.

ಚುನಾವಣಾ ಪ್ರಕ್ರಿಯೆಯನ್ನು ಸಾಂಕೇತಿಕವಾಗಿ ಬಣ್ಣಿಸುವುದಾದರೆ 'ಹಿಂದೊಮ್ಮೆ ಗೋಡೆ ಇದ್ದ ಕಡೆ ಕಿಟಕಿಗಳನ್ನು ಹಾಕಿಸುವುದು' ಎನ್ನಬಹುದು. ಪ್ರಜಾಪ್ರಭುತ್ವದ ಇತರ ಅಂಗಗಳಿಂದ ಸುಧಾರಣೆ ಅಸಾಧ್ಯ; ಆದರೆ ಇದು ಜನರಿಂದ ಸಂಪೂರ್ಣ ಸಾಧ್ಯ. ಅಂದರೆ ಪ್ರಜಾಪ್ರಭುತ್ವದ ಅಸ್ತಿತ್ವ ಇರುವುದೇ ಚುನಾವಣೆಗಳಲ್ಲಿ. ಪ್ರಜಾತಂತ್ರ ಕುಸಿದ ಹಲವು ಪ್ರಕರಣ ಹಾಗೂ ಜಯಭೇರಿ ಬಾರಿಸಿದ ವಿವಿಧ ಅನುಭವಗಳನ್ನು ಅವಲೋಕಿಸಿದಾಗ, ಚುನಾವಣೆಗಳೇ ಪ್ರಜಾತಂತ್ರದ ಭವಿಷ್ಯ ಬರೆಯುವ ಅಂಶವೆನ್ನುವುದು ವೇದ್ಯವಾದ ವಿಷಯವಾಗಿದೆ.

ರಾಜಕೀಯ ವ್ಯವಸ್ಥೆಯಲ್ಲಿ ಚುನಾವಣೆಯೆಂದರೆ, ಆರ್ಥಿಕತೆಯಲ್ಲಿ ಚಲಾವಣೆ ನಾಣ್ಯವಿದ್ದಂತೆ. ಜನರ ವಿಶ್ವಾಸವೇ ಪ್ರಜಾಪ್ರಭುತ್ವದ ತಳಹದಿಯಾಗಿದೆ. ರಾಜಕೀಯ ವ್ಯವಸ್ಥೆ ಮೆರೆಯಲು ಚುನಾವಣಾ ಪ್ರಕ್ರಿಯೆಯಲ್ಲಿ ಜನರು ಸಕ್ರಿಯವಾಗಿ ಪಾಲ್ಗೊಳ್ಳುವುದು ಅತಿ ಮುಖ್ಯ. ಜನರು ಸಕ್ರಿಯವಾಗಿ ಭಾಗವಹಿಸದ ಪ್ರಜಾತಂತ್ರಗಳಲ್ಲಿ ಬಿಕ್ಕಟ್ಟು ತಲೆದೋರಿದ ಉದಾಹರಣೆಗಳು ನಮ್ಮ ಮುಂದೆಯೇ ಇದೆ.

ಸಾರ್ವತ್ರಿಕ, ವಯಸ್ಕರ ಮತದಾನ, ಮತದಾನದ ವಯಸ್ಸಿನಲ್ಲಿ ಇಳಿಕೆ, ಸ್ಥಳೀಯ ಸರ್ಕಾರ–ಪಂಚಾಯತ್ ಮಟ್ಟದಲ್ಲಿಯೂ ಜನರ ಪಾಲ್ಗೊಳ್ಳುವಿಕೆ – ಹೀಗೆ ಯಾವುದೇ ವಿಚಾರದಲ್ಲಿ ಭಾರತದ ಉದಾಹರಣೆ ಮಾದರಿಯಾಗಿದೆ. ಇತ್ತೀಚೆಗೆ ನಡೆದ ಲೋಕಸಭಾ ಚುನಾವಣೆ ಸ್ವಾತಂತ್ರ್ಯಾನಂತರದಲ್ಲಿ ಅತಿ ಹೆಚ್ಚು ಮತದಾನ ದಾಖಲಿಸಿರುವುದು ಭಾರತೀಯ ಪ್ರಜಾಪ್ರಭುತ್ವದ ಸಾಧನೆಯ ದ್ಯೋತಕವಾಗಿದೆ.

ಹೀಗಿದ್ದರೂ ಪ್ರಜಾಪ್ರಭುತ್ವ ಪರಿಕಲ್ಪನೆಯ ಮೌಲ್ಯದ ಅರ್ಥವನ್ನು ಹದಗೆಡಿಸುವ ಇತರ ಚುನಾವಣಾ ಪ್ರಕ್ರಿಯೆಯ ಅಂಶಗಳಿವೆ. ಚುನಾವಣೆ ಪ್ರಕ್ರಿಯೆ ಸಂಪೂರ್ಣ ಪಾರದರ್ಶಕವಾಗಿರಬೇಕು. ಜನರಿಗೆ ಮತದಾನ, ಆಯ್ಕೆ ಮಾಡಲು ಮುಕ್ತ ಅವಕಾಶ ಇರಬೇಕು. ಜನರು ಸ್ವಪ್ರೇರಣೆಯಿಂದ ಭಾಗವಹಿಸುವ ವಾತಾವರಣ ಇರಬೇಕು. ಹೆದರಿಕೆ – ಬೆದರಿಕೆ ಇಲ್ಲದ ನ್ಯಾಯಸಮ್ಮತ, ಧರ್ಮಬೀರು ಅಭಿವ್ಯಕ್ತಿಗೆ ಮುಕ್ತ ಪರಿಸರ ಇರಬೇಕು. ನ್ಯಾಯಾಂಗ, ಕಾರ್ಯಾಂಗ, ಮಾಧ್ಯಮ ಪ್ರಜಾಪ್ರಭುತ್ವದ ನೈಜ ಸತ್ವವನ್ನು ಬೆಳೆಸಬಲ್ಲವು. ಜನರ ಆಶೋತ್ತರಗಳನ್ನು ಪೂರೈಸಬಲ್ಲ ಪ್ರಜಾಪ್ರಭುತ್ವ ನಿಂತ ನೀರಾಗದೆ, ಹೊಸ ವಿಚಾರಧಾರೆ, ಚಟುವಟಿಕೆಗಳನ್ನು ಪ್ರತಿಫಲಿಸುವ ಹರಿಯುವ ನೀರಾಗಬೇಕು. ಜನಸ್ಪಂದನೆಯ ವೇದಿಕೆಯಾಗಬೇಕು.

ಪ್ರಜಾಪ್ರಭುತ್ವ ಮುಂಚೂಣಿಯಲ್ಲಿ ಇರುವಂತೆ ಚುನಾವಣಾ ಸುಧಾರಣೆಗಳನ್ನು ತರಬೇಕಾಗುತ್ತದೆ. ಆ ಬಗ್ಗೆ ನಮ್ಮ ಪ್ರಾಜ್ಞ ರಾಜಕೀಯ ಧುರೀಣರು ಒಲವು ವ್ಯಕ್ತಪಡಿಸುತ್ತಿರುವುದು ಸಕಾರಾತ್ಮಕ ವಿಚಾರ.

ಭ್ರಷ್ಟಾಚಾರ, ಹಣಬಲ, ತೋಳ್ಬಲ, ಪ್ರಜಾತಂತ್ರದ ಹೆಮ್ಮರಕ್ಕೆ ವಿಷವಾಗಬಲ್ಲ ಅಂಶಗಳು. ನಮ್ಮ ಪ್ರಜಾತಂತ್ರ ಈ ಎಲ್ಲ ಕಹಿ–ದೌರ್ಬಲ್ಯಗಳನ್ನು ನೀಗಿ, ನೈತಿಕ ಅಡಿಪಾಯದ ಆಧಾರದಲ್ಲಿ ಬೆಳಗಲಿ. ಅದೇ ನಮ್ಮ ಜನರ ಆಶೋತ್ತರ, ಅದಕ್ಕೆ ಅವರು ಅರ್ಹರೂ ಕೂಡ.

❑



# ರಾಷ್ಟ್ರಪತಿಗಳ ಭಾಷಣ

**16ನೇ ಲೋಕಸಭೆ ಸಂಘಟನೆ ಸಂದರ್ಭದಲ್ಲಿ ಸಂಸತ್ತಿನ ಉಭಯ ಸದನಗಳನ್ನು ಉದ್ದೇಶಿಸಿ ರಾಷ್ಟ್ರಪತಿ ಶ್ರೀ ಪ್ರಣಬ್ ಮುಖರ್ಜಿಯವರು ಮಾಡಿದ ಭಾಷಣದ ಮುಖ್ಯಾಂಶ**

- ಉತ್ತಮ ಆಡಳಿತದ ಮೂಲಕ ಅಭಿವೃದ್ಧಿ.
- ಬಡತನ ನಿರ್ಮೂಲನೆಗೆ ಮೊದಲ ಆದ್ಯತೆ.
- ರೂರ್ಬನ್– ಅಂದರೆ ನಗರಗಳಲ್ಲಿ ಲಭ್ಯವಿರುವ ಸೌಲಭ್ಯಗಳನ್ನು ಗ್ರಾಮೀಣ ಪ್ರದೇಶಗಳಲ್ಲೂ ದೊರಕುವಂತೆ ಮಾಡುವುದು.
- ಕೃಷಿ ಮೂಲ ಸೌಕರ್ಯ. ಕೃಷಿ ತಂತ್ರಜ್ಞಾನ ಮತ್ತು ಹೂಡಿಕೆಗಳ ಅಭಿವೃದ್ಧಿ.
- ಕೃಷಿಗೆ ಬಳಸುವ ಭೂಮಿಗಳ ಅಭಿವೃದ್ಧಿ.
- ಪ್ರಧಾನ ಮಂತ್ರಿ ಕೃಷಿ ಸಿಂಚಾಯೀ ಯೋಜನಾ– ಪ್ರತಿ ಭೂಮಿಗೆ ನೀರು ಪೂರೈಕೆ, ಇದಕ್ಕಾಗಿ ಜಲ ಸಂಚಯ ಮತ್ತು ಜಲ ಸಿಂಚನ ಯೋಜನೆಗಳು. ಪ್ರತಿ ಹನಿಗೆ ಅಧಿಕ ಬೆಳೆ. ಕಿರು ನೀರಾವರಿ ಯೋಜನೆಗಳು.
- ಪ್ರತಿ ಕೈಗೂ ಕೆಲಸ.
- ಔಪಚಾರಿಕ ಶಿಕ್ಷಣ ಹಾಗೂ ಕೌಶಲ್ಯ ಅಭಿವೃದ್ಧಿಗಳ ನಡುವಣ ತಡೆಗಳನ್ನು ಮುರಿದು ಯುವ ಜನತೆಗೆ ಕೆಲಸ ಒದಗಿಸಿ ಕೌಶಲ್ಯಯುತ ಭಾರತದ ನಿರ್ಮಾಣ. ಇದಕ್ಕಾಗಿ 'ರಾಷ್ಟ್ರೀಯ ಬಹು ಕೌಶಲ್ಯ ಅಭಿಯಾನ' ದ ಆರಂಭ.
- ಮಕ್ಕಳು ಹಾಗೂ ಯುವಕರ ಮನರಂಜನೆಗಾಗಿ 'ರಾಷ್ಟ್ರೀಯ ಕ್ರೀಡಾ ಪ್ರತಿಭಾ ವ್ಯವಸ್ಥೆ'ಯ ಆರಂಭ.
- ಹೊಸ ಆರೋಗ್ಯ ನೀತಿ: ಇದರಡಿ 'ರಾಷ್ಟ್ರೀಯ ಆರೋಗ್ಯ ಭದ್ರತಾ ಅಭಿಯಾನ'. ಪ್ರತಿ ರಾಜ್ಯಗಳಲ್ಲಿ ಎಐಐಎಮ್‌ಎಸ್ ನಂತಹ ಸಂಸ್ಥೆಗಳು. ಆರೋಗ್ಯ ಶಿಕ್ಷಣ ತರಬೇತಿ. ಯೋಗ ಮತ್ತು ಆಯುಷ್‌ಗೆ ಉತ್ತೇಜನ.
- ಸ್ವಚ್ಛ ಭಾರತ ಅಭಿಯಾನ : 2019ರಲ್ಲಿ ನಡೆಯಲಿರುವ ಮಹಾತ್ಮಾ ಗಾಂಧಿ ಅವರ 150 ನೇ ಜನ್ಮ ವಾರ್ಷಿಕೋತ್ಸವದ ಸಂದರ್ಭದಲ್ಲಿ ಅವರಿಗೆ ಗೌರವ ಸಲ್ಲಿಸಲು ಈ ಕಾರ್ಯಕ್ರಮ. ಇದರ ಅಡಿಯಲ್ಲಿ 'ಶೌಚಾಲಯವಿಲ್ಲದ ಮನೆಯನ್ನು ನಾವು ಸಹಿಸುವುದಿಲ್ಲ' ಎಂಬ ಮಾಹಿತಿ ರವಾನೆ. ಜತೆಗೆ ದೇಶಾದ್ಯಂತ ಸ್ವಚ್ಛತಾ ಕಾರ್ಯಕ್ರಮ. ಕಸ ವಿಲೇವಾರಿ ಹಾಗೂ ಶುದ್ಧ ಪರಿಸರ ನಿರ್ಮಾಣ.
- ಪರಿಶಿಷ್ಟ ಜಾತಿ/ಪಂಗಡಗಳು, ಇತರ ಹಿಂದುಳಿದ ವರ್ಗಗಳು ಮತ್ತು ಸಮಾಜದ ದುರ್ಬಲ ವರ್ಗದವರಿಗಾಗಿ ಹಲವಾರು ಕಾರ್ಯಕ್ರಮಗಳು.
- ಪರಿಶಿಷ್ಟ ಪಂಗಡದವರಿಗಾಗಿ 'ವನಬಂಧು ಕಲ್ಯಾಣ ಯೋಜನೆ'. ಇದರಲ್ಲಿ ಗುಡ್ಡಗಾಡು ಪ್ರದೇಶಗಳ ವಸತಿಗಳಿಗಾಗಿ ವಿದ್ಯುತ್ ಸೌಲಭ್ಯ ಹಾಗೂ ಸರ್ವಋತು ರಸ್ತೆಗಳ ನಿರ್ಮಾಣ.
- ಅಲ್ಪ ಸಂಖ್ಯಾತ ವರ್ಗದವರಿಗಾಗಿ ರಾಷ್ಟ್ರೀಯ ಮದರಸ ಆಧುನೀಕರಣ ಕಾರ್ಯಕ್ರಮ.
- ವಿಶೇಷ ಚೇತನರಿಗಾಗಿ ಅವರು ಬೇಕಾದ ಎಲ್ಲಾ ಕ್ಷೇತ್ರಗಳಲ್ಲಿ ಭಾಗವಹಿಸಲು 'ಸಶಕ್ತೀಕರಣ' ಕಾರ್ಯಕ್ರಮ.
- 'ಬೇಟಿ ಬಚಾವೋ–ಬೇಟಿ ಪಢಾವೋ' – ಹೆಣ್ಣು ಮಗುವಿನ ಶಿಕ್ಷಣಕ್ಕಾಗಿ ಕಾರ್ಯಕ್ರಮಗಳು.
- ಸಂಸತ್ತು ಹಾಗೂ ರಾಜ್ಯ ಶಾಸನ ಸಭೆಗಳಲ್ಲಿ ಶೇ.33 ಮಹಿಳಾ ಮೀಸಲಾತಿ ಜಾರಿಗೆ ತರಲು ಬದ್ಧತೆ.
- ಮಹಿಳೆಯ ಮೇಲಿನ ಹಿಂಸೆ ತಡೆಗಾಗಿ ಶೂನ್ಯ ತಾಳ್ಮೆ.
- ನ್ಯಾಯ ಪಾಲನೆಗಾಗಿ ಸಮರ್ಥ ವ್ಯವಸ್ಥೆ.
- 'ಟೀಂ ಇಂಡಿಯಾ'–ಕೇಂದ್ರ ಹಾಗೂ ರಾಜ್ಯಗಳು ಒಂದು ತಂಡವಾಗಿ ಕಾರ್ಯ ನಿರ್ವಹಿಸಬೇಕು. ಇದಕ್ಕಾಗಿ ರಾಷ್ಟ್ರೀಯ ಅಭಿವೃದ್ಧಿ ಮಂಡಳಿ ಮತ್ತು ಅಂತರರಾಜ್ಯ ಮಂಡಳಿಗಳನ್ನು ಬಲ ಪಡಿಸಬೇಕು.

- ಸಚಿವಾಲಯಗಳು/ಸರ್ಕಾರಗಳು /ಇಲಾಖೆಗಳು ಮತ್ತು ಸರ್ಕಾರದ ವಿವಿಧ ಅಂಗಗಳ ಸೇರ್ಪಡೆ.
- ಸರ್ಕಾರಿ ದಾಖಲೆಗಳ 'ಡಿಜಿಟಲೀಕರಣ'.
- ಹಳೆಯ ಅನಾವಶ್ಯಕ ಕಾನೂನುಗಳ ವಿಸರ್ಜನೆ.
- ಪಾರದರ್ಶಕ ಮತ್ತು ಕಾಲಮಿತಿಯಲ್ಲಿ ಸರ್ಕಾರಿ ಸೇವೆಗಳ ಪೂರೈಕೆ. ಉತ್ತಮ ಅಧಿಕಾರ ವರ್ಗ. ಭ್ರಷ್ಟಾಚಾರಕ್ಕೆ ಲೋಕಪಾಲದ ಮೂಲಕ ತಡೆ.
- ಸಮಾನತೆ ಮತ್ತು ಸಾಮರ್ಥ್ಯಕ್ಕಾಗಿ ಶಕ್ತಿಯುತ ಇ–ಆಡಳಿತದ ಮೂಲಕ 'ಡಿಜಿಟಲ್ ಇಂಡಿಯಾ'ದ ನಿರ್ಮಾಣ. ಇದಕ್ಕಾಗಿ ಸೋಶಿಯಲ್ ಮೀಡಿಯಾ (ಸಾಮಾಜಿಕ ತಾಣ)ಗಳ ಬಳಕೆ.
- ನ್ಯಾಯಾಲಯಗಳಲ್ಲಿ ಪ್ರಕರಣಗಳ ಶೀಘ್ರ ವಿಲೇವಾರಿಗಾಗಿ ಕ್ರಮಗಳು.
- ದೇಶದ ಆರ್ಥಿಕತೆ ಸುಧಾರಣೆಗೆ ಅಗತ್ಯ ಕ್ರಮಗಳು: ಇದಕ್ಕಾಗಿ ಉತ್ತಮ ನೀತಿ ಪರಿಸರದ ನಿರ್ಮಾಣ. ಹೂಡಿಕೆಗೆ ಪ್ರೋತ್ಸಾಹ.
- ಉದ್ಯೋಗ ವಿನಿಮಯ ಕೇಂದ್ರಗಳನ್ನು 'ಕೆರಿಯರ್ ಸೆಂಟರ್' ಗಳಾಗಿ ಮಾರ್ಪಡಿಸುವ ಮೂಲಕ ಯುವಜನತೆ ಉದ್ಯೋಗಾವಕಾಶಗಳ ನಿರ್ಮಾಣ.
- ಕೌಶಲ್ಯ ಅವಕಾಶ ಮತ್ತು ವೇಗದಿಂದ ಕೂಡಿದ ತಯಾರಿಕಾ ಕ್ಷೇತ್ರಗಳ ನಿರ್ಮಾಣ. ಜಾಗತಿಕವಾಗಿ ಸ್ಪರ್ಧಾತ್ಮಕವಾಗುವಂತಹ ವಿಶ್ವ ದರ್ಜೆಯ ಹೂಡಿಕೆ ಮತ್ತು ಕೈಗಾರಿಕಾ ಪ್ರದೇಶಗಳು. ಇದಕ್ಕಾಗಿ ದೇಶಾದ್ಯಂತ ಡೆಡಿಕೇಟೆಡ್ ಫ್ರೈಟ್ ಕಾರಿಡಾರ್ ಮತ್ತು ಕೈಗಾರಿಕಾ ಕಾರಿಡಾರ್‌ಗಳು.
- ಮೂಲಸೌಕರ್ಯ ಕಾರ್ಯಕ್ರಮ ಅಭಿವೃದ್ಧಿಯಲ್ಲಿ ಅತಿ ವೇಗದ ರೈಲಿಗೆ ಆದ್ಯತೆ.
- ಕೃಷಿ ಉತ್ಪನ್ನಗಳ ಶೀಘ್ರ ಸಾಗಣೆಗೆ 'ಅಗ್ರಿ–ರೈಲ್ ನೆಟ್‌ವರ್ಕ್'.
- ವಿಶ್ವ ದರ್ಜೆಯ ಬಂದರುಗಳ ನಿರ್ಮಾಣ. ಬಂದರುಗಳ ಆಧುನೀಕರಣ. ರಸ್ತೆ ಮತ್ತು ರೈಲು ಮಾರ್ಗಗಳ ಮೂಲಕ ಹಿಂದುಳಿದ ಪ್ರದೇಶಗಳ ಜತೆ ಬಂದರುಗಳನ್ನು ಸಂಪರ್ಕಿಸಲು 'ಸಾಗರ್ ಮಾಲಾ' ಯೋಜನೆ.
- ಸಂಪರ್ಕ ಮಾರ್ಗಗಳಾಗಿ ಕರಾವಳಿ ಜಲಮಾರ್ಗಗಳು ಮತ್ತು ದ್ವೀಪಗಳ ಅಭಿವೃದ್ಧಿ.
- ಇಂಧನ ಸಂಪರ್ಕಿತ ಮೂಲಸೌಕರ್ಯ, ಮಾನವ ಸಂಪನ್ಮೂಲ ಮತ್ತು ತಂತ್ರಜ್ಞಾನಗಳ ಅಭಿವೃದ್ಧಿಗೆ 'ರಾಷ್ಟ್ರೀಯ ಇಂಧನ ನೀತಿ'.
- ದೇಶವು 75 ನೇ ಸ್ವಾತಂತ್ರ್ಯೋತ್ಸವವನ್ನು ಆಚರಿಸುವ ಸಂದರ್ಭದಲ್ಲಿ ಪ್ರತಿ ಕುಟುಂಬಕ್ಕೊಂದು ಮನೆ.
- ವಿಶ್ವ ದರ್ಜೆಯ ಸೌಕರ್ಯಗಳುಳ್ಳ 100 ನಗರಗಳ ನಿರ್ಮಾಣ.
- ಹಿಮಾಲಯ ರಾಷ್ಟ್ರೀಯ ಅಭಿಯಾನ: ಹಿಮಾಲಯದ ಸಂರಕ್ಷಣೆ ಸರ್ಕಾರದ ಆದ್ಯತೆಗಳಲ್ಲೊಂದು. ಸೆಂಟ್ರಲ್ ಯುನಿವರ್ಸಿಟಿ ಆಫ್ ಹಿಮಾಲಯನ್ ಸ್ಟಡೀಸ್ ಸ್ಥಾಪನೆ.
- ಗಂಗಾ ಶುದ್ಧೀಕರಣಕ್ಕೆ ಕ್ರಮಗಳು.
- ಇ–ಭಾಷಾ: ಭಾರತದ ಪ್ರಾದೇಶಿಕ ಭಾಷೆಗಳ ಸಂರಕ್ಷಣೆಗೆ 'ಇ –ಭಾಷಾ' ಅಭಿಯಾನದ ದ ಮೂಲಕ ಡಿಜಿಟಲ್ ತಂತ್ರಜ್ಞಾನದ ಬಳಕೆ.
- ಪ್ರವಾಸೋದ್ಯಮಕ್ಕೆ ಒತ್ತು ನೀಡಲು ದೇಶದಲ್ಲೆಡೆ 50 ಟೂರಿಸ್ಟ್ ಸರ್ಕ್ಯೂಟ್‌ಗಳ ಸ್ಥಾಪನೆ.
- ಭಯೋತ್ಪಾದನೆ, ದಂಗೆ, ಅಪರಾಧಗಳಿಗೆ ಶೂನ್ಯ ತಾಳ್ಮೆ. ನಾರ್ಕೋ ಟೆರರಿಸಂ ಮತ್ತೆ ಸೈಬರ್ ಅಪರಾಧಗಳ ತಡೆಗೆ ಕಾನೂನುಗಳು.
- ಕರಾವಳಿ ಪ್ರದೇಶಗಳ ಭದ್ರತೆಗೆ 'ರಾಷ್ಟ್ರೀಯ ಮೆರಿಟೈಮ್ ಪ್ರಾಧಿಕಾರ' ಸ್ಥಾಪನೆ.
- ವೀರ ಯೋಧರ ಗೌರವಾರ್ಥ 'ರಾಷ್ಟ್ರೀಯ ಯುದ್ಧ ಸ್ಮಾರಕ' ಸ್ಥಾಪನೆ.
- ನೆರೆಹೊರೆಯ ರಾಷ್ಟ್ರಗಳೊಂದಿಗೆ ಶಾಂತಿಯುತ, ಸ್ಥಿರ, ಮತ್ತು ಆರ್ಥಿಕ ಸಂಪರ್ಕ. ಸಾರ್ಕ್ ದೇಶಗಳ ಜತೆಗಿನ ಸಂಬಂಧ ವೃದ್ಧಿ.
- ಟ್ರೆಡಿಶನ್, ಟ್ಯಾಲೆಂಟ್, ಟೂರಿಸಂ, ಟ್ರೇಡ್ ಮತ್ತು ಟೆಕ್ನಾಲಜಿ (5 ಟಿ) ಆಧರಿಸಿ 'ಬ್ರಾಂಡ್ ಇಂಡಿಯಾದ' ನಿರ್ಮಾಣ.

(ಕೃಪೆ : ಪಿ.ಐ.ಬಿ. ಬೆಂಗಳೂರು)

# ಚುನಾವಣಾ ಸುಧಾರಣೆ : ಒಂದು ನೋಟ

ಜಗದೀಶ್ ಎಸ್. ಛೋಕರ್
ಕನ್ನಡಕ್ಕೆ : ಹರತೀಲುತ




**ನಾಗರಿಕ ಸಮಾಜವೇ ಸುಧಾರಣೆಯಲ್ಲಿ ಪ್ರಮುಖ ಪಾತ್ರ ವಹಿಸಬೇಕು, ಅದಕ್ಕೆ ನ್ಯಾಯಾಂಗದ ನೆರವನ್ನು ಪಡೆಯಬೇಕು. ಕಾರ್ಯಾಂಗ ಮತ್ತು ಶಾಸಕಾಂಗವನ್ನು ಹೊರತುಪಡಿಸಿ ರಾಜಕೀಯ ವ್ಯವಸ್ಥೆಯನ್ನು ಸುಧಾರಿಸಲು ಅವಕಾಶಗಳಿವೆ. ಆ ಮೂಲಕ ಚುನಾವಣಾ ಪದ್ಧತಿಯಲ್ಲಿಯೂ ಸುಧಾರಣೆಗಳನ್ನು ತರಬಹುದಾಗಿದೆ.**

"ಇತ್ತೀಚಿನ ದಿನಗಳಲ್ಲಿ ರಾಜ್ಯಾಡಳಿತವನ್ನು ಗಮನಿಸಿದಾಗ ಮುಕ್ತ ಮತ್ತು ನ್ಯಾಯ ಸಮ್ಮತ ಚುನಾವಣೆ ನಡೆಸಲು ಸಾಕಷ್ಟು ಅಡ್ಡಿ, ಆತಂಕಗಳು ಇರುವುದು ಕಂಡು ಬರುತ್ತದೆ ಎಂಬ ಮಾತುಗಳು ಇವೆ."

ಇವು ನಿಮಗೆ ಏನನ್ನು ನೆನಪಿಸುತ್ತವೆ?

ಹಣ ಮತ್ತು ತೋಳ್ಬಲ ಇಂದಿನ ಚುನಾವಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಇದು ಎಲ್ಲರೂ ಒಪ್ಪುವಂತಹ ಪ್ರಜಾಪ್ರಭುತ್ವದ ಮೌಲ್ಯವನ್ನು ಕಳೆಯುತ್ತಿದೆ. ಇಡೀ ವ್ಯವಸ್ಥೆಯನ್ನು ಭ್ರಷ್ಟ ಮಾಡುತ್ತಿದೆ. ರಾಜಕೀಯ ಅಪರಾಧೀಕರಣದಿಂದಾಗಿ ಮತಗಟ್ಟೆ ಅಪಹರಣ, ರಿಗ್ಗಿಂಗ್, ಗಲಭೆಗಳು, ಇದರ ಜತೆಗೆ ಅಧಿಕಾರದ ಅಂದರೆ ಅಧಿಕೃತ ಮಾಧ್ಯಮ ಹಾಗೂ ಸಚಿವಾಲಯಗಳ ದುರುಪಯೋಗ: ಇದಲ್ಲದೇ ಚುನಾವಣೆಯನ್ನು ಗಂಭೀರವಾಗಿ ತೆಗೆದುಕೊಳ್ಳದ ಅಭ್ಯರ್ಥಿಗಳ ಸ್ಪರ್ಧೆ ಹೆಚ್ಚುತ್ತಿರುವುದು: ಚುನಾವಣಾ ಪ್ರಕ್ರಿಯೆಯಲ್ಲಿನ ಲೋಪಗಳು. ತುರ್ತಾಗಿ ಕೆಲವು ಸುಧಾರಣಾ ಕ್ರಮಗಳನ್ನು ಕೈಗೊಳ್ಳದೇ ಹೋದಲ್ಲಿ ಇಡೀ ವ್ಯವಸ್ಥೆಯೇ ಕುಸಿಯುವ ಅಪಾಯವಿದೆ.

ಚುನಾವಣಾ ವ್ಯವಸ್ಥೆಯ ಸುಧಾರಣೆ ಎಂಬುದು ನಿರಂತರ ಪ್ರಕ್ರಿಯೆ. ಆದರೆ ಇದುವರೆವಿಗೂ ನಡೆದಿರುವ ಪ್ರಯತ್ನಗಳು ಈಕ್ಷೇತ್ರದಲ್ಲಿನ ಸಮಸ್ಯೆಯನ್ನು ಹೋಗಲಾಡಿಸಲು ಸಾಧ್ಯವಾಗಿಲ್ಲ. ಇತ್ತೀಚೆಗೆ ತೆಗೆದುಕೊಂಡಿರುವ ಕೆಲ ಸುಧಾರಣಾ ಕ್ರಮಗಳೆಂದರೆ ಮತದಾನದ ವಯಸ್ಸಿನ ಇಳಿಕೆ ಮತ್ತು ಪಕ್ಷಾಂತರ ನಿಷೇಧ ಕಾಯ್ದೆಯ ಜಾರಿ. ಇವು ಖಂಡಿತವಾಗಿ ಕೆಲ ಮಟ್ಟಿಗೆ ಸುಧಾರಣೆ ತಂದಿವೆ. ಆದರೆ ಚುನಾವಣಾ ಕ್ಷೇತ್ರದ ಇತರ ಪ್ರಮುಖ ವಲಯ ಸಂಪೂರ್ಣ ನಿರ್ಲಕ್ಷ್ಯಕ್ಕೆ ಒಳಗಾಗಿದೆ.

ಸುಧಾರಣಾ ಕ್ರಮಗಳನ್ನು ಇಂದು ಅಳವಡಿಸಿಕೊಳ್ಳಬಹುದಾಗಿದೆ. ಆದರೆ ಒಂದು ಶತಮಾನದ ಕಾಲು ಭಾಗದಷ್ಟು ಅವಧಿಯಲ್ಲೂ ಇನ್ನೂ ಸುಧಾರಣೆ ಕ್ರಮಗಳನ್ನು ತೆಗೆದುಕೊಳ್ಳಲು ಸಾಧ್ಯವಾಗದೆ ಇರುವುದು ತಪ್ಪು. 1990ರ ಮೇ ತಿಂಗಳಿನಲ್ಲಿ ಗೋಸ್ವಾಮಿ ಕಮಿಟಿ ವರದಿ ನೀಡಿತು. ಇದು ಅಧಿಕೃತವಾಗಿ ಚುನಾವಣಾ ಸುಧಾರಣೆಗಾಗಿಯೇ ರಚನೆಯಾಗಿರುವ ಸಮಿತಿ. ಇದು ಹೇಳಿದ್ದೇನೆಂದರೆ "1967ರ ನಂತರದ ನಾಲ್ಕು ದಶಕಗಳಲ್ಲಿ ಚುನಾವಣಾ ಸುಧಾರಣೆಯ ಬಗ್ಗೆ ಒತ್ತಾಯ ಇದೆ."

ನಾಲ್ಕು ದಶಕಗಳ ಚುನಾವಣಾ ಸುಧಾರಣೆಗಳ ಬೇಡಿಕೆಯ ಹಿನ್ನೆಲೆಯಲ್ಲಿ ಆಗಿನ ಪ್ರಧಾನ ಮಂತ್ರಿ ವಿ.ಪಿ. ಸಿಂಗ್ ಅವರು 1990ರ ಜನವರಿ 9ರಂದು ಸರ್ವ ಪಕ್ಷ ಸಭೆ ನಡೆಸಿದರು. ಆ ಸಭೆಯ ಪರಿಣಾಮವಾಗಿಯೇ ಆಗಿನ ಕಾನೂನು ಸಚಿವ ದಿನೇಶ್ ಗೋಸ್ವಾಮಿ ಅಧ್ಯಕ್ಷತೆಯಲ್ಲಿ ಸಮಿತಿ ರಚನೆ ಮಾಡಲಾಯಿತು. ಆ ಸಮಿತಿಯಲ್ಲಿ ಮುಂಚೂಣಿಯ ರಾಜಕೀಯ ನೇತಾರರಾದ ಎಲ್.ಕೆ. ಆದ್ವಾಣಿ, ಸೋಮನಾಥ ಚಟರ್ಜಿ, ಈರ ಸೇರಿಯೀಯಾನ್, ಇದಲ್ಲದೇ ದಕ್ಷ ಅಧಿಕಾರಿಗಳಾದ ಮಾಜಿ ರಾಜ್ಯಪಾಲ ಎಲ್.ಪಿ. ಸಿಂಗ್, ಚುನಾವಣಾ ಆಯೋಗದ ನಿವೃತ್ತ ಮುಖ್ಯ ಆಯುಕ್ತ ಎಸ್.ಎಲ್ ಶಕ್ಧರ್ ಇದ್ದರು. ಈ ಸಮಿತಿಯೂ 107 ಶಿಫಾರಸುಗಳನ್ನು ಮಾಡಿತು. ಈ 107 ಶಿಫಾರಸುಗಳಲ್ಲಿ ಎಷ್ಟು ಜಾರಿಯಾಗಿವೆ ಎಂಬುದನ್ನು ನಾನು ಈಗ ಲೆಕ್ಕ ಹಾಕಲು ಹೋಗುವುದಿಲ್ಲ. ಆದರೆ ಈ

ನಿವೃತ್ತ ಪ್ರಾಧ್ಯಾಪಕ, ಐಐಎಂ ಅಹಮದಾಬಾದ್. Email : jchhokar@gmail.com

ಶಿಫಾರಸುಗಳಲ್ಲಿ ಬಹಳಷ್ಟು ಜಾರಿಗೆ ಬಂದಿಲ್ಲ ಎಂಬುದನ್ನು ಮಾತ್ರ ಹೇಳಬಲ್ಲೆ. ಇವುಗಳನ್ನು ಗಂಭೀರವಾಗಿಯು ಪರಿಗಣಿಸಿಲ್ಲ.

ಈ ನಿಟ್ಟಿನಲ್ಲಿ ಮತ್ತೊಂದು ಪ್ರಮುಖ ಹೆಜ್ಜೆಯೆಂದರೆ ನೇರವಾಗಿ ಚುನಾವಣಾ ಸುಧಾರಣೆಗೆ ಸಂಬಂಧಿಸಿಲ್ಲವಾದರೂ 1993ರಲ್ಲಿ ವೋರಾ ಕಮಿಟಿ ನೀಡಿದ ವರದಿ. ಕೇಂದ್ರ ಸರ್ಕಾರದ ಗೃಹ ಸಚಿವಾಲಯದ ಕಾರ್ಯದರ್ಶಿಯಾಗಿದ್ದ ಎನ್.ಎನ್. ವೋರಾ ಅವರು ವರದಿ ಸಿದ್ಧಪಡಿಸಿದರು. ಆ ನಂತರ ಅವರು ಜಮ್ಮು ಮತ್ತು ಕಾಶ್ಮೀರದ ರಾಜ್ಯಪಾಲರು ಆಗಿದ್ದರು. ಈ ಸಮಿತಿಯಲ್ಲಿ ಐವರು ಹಿರಿಯ ಅಧಿಕಾರಿಗಳಿದ್ದರು ಸ್ವತಃ ವೋರಾ ವರದಿ ಸಿದ್ಧಪಡಿಸಿದ್ದರು. ಸಮತಿಯು ಅಪರಾಧ ಚಟುವಟಿಕೆ ನಡೆಸುವವರು, ಮಾಫಿಯಾ ಹಾಗೂ ಇದರಿಂದ ರಾಜಕೀಯ ಮತ್ತು ಅಧಿಕಾರಿಗಳಿಗೆ ಇರುವ ತೊಂದರೆಗಳೇನು ಎಂಬ ಬಗ್ಗೆಯೂ ಮಾಹಿತಿ ಸಂಗ್ರಹಿಸಿತ್ತು.

ಆದರೆ ಈ ವರದಿ ಸಾರ್ವಜನಿಕವಾಗಿ ಸಿಗದಿದ್ದರೂ ಅಂತರ್ಜಾಲದಲ್ಲಿ ಲಭ್ಯವಾಗುತ್ತದೆ. ಇದರಲ್ಲಿನ ಅಂಶಗಳನ್ನು ಯಾರೂ ತಿರಸ್ಕರಿಸುವಂತಿಲ್ಲ. ಈ ವರದಿಯ ಪ್ರಮುಖ ಅಂಶಗಳೆಂದರೆ ಚುನಾವಣಾ ಸುಧಾರಣೆಗೆ ಸಂಬಂಧಿಸಿದ್ದವೆ ಆಗಿವೆ. ರಾಜಕೀಯ ಅಪರಾಧೀಕರಣದ ಬಗ್ಗೆ ಹೆಚ್ಚಿನ ಒತ್ತು ನೀಡಲಾಗಿತ್ತು. ಅಪರಾಧ ಹೇಗೆ ಸಂಘಟಿತ ಹಾಗೂ ಅಸಂಘಟಿತವಾಗಿ ನಡೆಯುತ್ತದೆ ಎಂಬುದನ್ನು ವಿವರಿಸಲಾಗಿತ್ತು. ಆ ಮೂಲಕ ಚುನಾವಣೆ ಪ್ರಕ್ರಿಯೆಯಲ್ಲಿ ಅಪರಾಧ ಹೇಗೆ ನಡೆಯುತ್ತದೆ ಎಂಬುದನ್ನು ಬಹಿರಂಗ ಪಡಿಸಲಾಗಿತ್ತು.

ಆ ನಂತರ ಚುನಾವಣೆ ಸುಧಾರಣೆಗೆ ಸಂಬಂಧಿಸಿದಂತೆ ಅಧಿಕೃತವಾಗಿ ನಡೆದ ಪ್ರಯತ್ನವೆಂದರೆ 1998ರಲ್ಲಿ ರಚನೆಯಾದ ಇಂದ್ರಜಿತ್ ಗುಪ್ತ ಸಮಿತಿ ವರದಿ. ಈ ಸಮಿತಿಯನ್ನು ಅಧಿಕೃತವಾಗಿಯೇ 'ಸರ್ಕಾರಿ ನೆರವಿನ ಚುನಾವಣಾ ಸಮಿತಿ' ಎಂದೆ ಕರೆಯಲಾಗುತ್ತದೆ. ಈ ಸಮಿತಿಗೆ ಪ್ರಮುಖರಾದ ಇಂದ್ರಜಿತ್ ಗುಪ್ತ, ಸೋಮನಾಥ ಚಟರ್ಜಿ, ಡಾ. ಮನಮೋಹನ್ ಸಿಂಗ್, ಪ್ರೊ. ವಿಜಯ್‌ಕುಮಾರ್ ಮಲ್ಹೋತ್ರಾ ಹಾಗೂ ದಿಗ್ವಿಜಯಸಿಂಗ್ ಸದಸ್ಯರಾಗಿದ್ದರು. ಈ ಸಮಿತಿಯ ವರದಿಯು ಚುನಾವಣೆ ಸುಧಾರಣೆಗಳ ಬಗ್ಗೆ ಅದರಲ್ಲೂ ಸರ್ಕಾರದ




ನೆರವು ನೀಡುವ ಬಗ್ಗೆಯೂ ಹೇಳಿತ್ತು. ಈ ವರದಿಯ ಉಪ ಸಂಹಾರದ ಪ್ಯಾರದ ಆರಂಭದಲ್ಲಿ ಹೇಳಿರುವುದೇನೆಂದರೆ, "ಮುಕ್ತಾಯಕ್ಕೆ ಮುನ್ನ, ಸಮಿತಿಯು ಕೇವಲ ಚುನಾವಣಾ ಸುಧಾರಣೆಯ ವಿಷಯದಲ್ಲಿ ಮಾತ್ರ ಶಿಫಾರಸು ಮಾಡುತ್ತದೆ. ಚುನಾವಣೆಯಲ್ಲಿ ಕೆಲ ಬದಲಾವಣೆ ಮಾಡಬೇಕಾಗಿದೆ. ಇದರಲ್ಲಿ ಪ್ರಮುಖವಾಗಿ ರಾಜಕೀಯ ಅಪರಾಧೀಕರಣವನ್ನು ಕಡಿಮೆ ಮಾಡುವುದು. ಹಣ ಬಲ ಮತ್ತು ತೋಳ್ಬಲವನ್ನು ಕಡಿಮೆ ಮಾಡುವುದು, ಆ ಮೂಲಕ ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆ ನಡೆಯುವಂತಾಗಬೇಕು. ಆದರಿಂದಾಗಿಯೇ ತುರ್ತಾಗಿ ಚುನಾವಣೆಯ ಸುಧಾರಣೆಗಳಾಗಬೇಕಾಗಿದೆ."

ನಂತರದ ಅದರಲ್ಲೂ ನನ್ನ ದೃಷ್ಟಿಯಲ್ಲಿ ಚುನಾವಣಾ ಸುಧಾರಣೆಗೆ ಸಂಬಂಧಿಸಿದಂತೆ ಅತ್ಯಂತ ಪ್ರಮುಖವಾದ ಶಿಫಾರಸು ಎಂದರೆ 1997ರಲ್ಲಿ ಕಾನೂನು ಸಚಿವ ರಾಮ್ ಜೇಠ್ಮಲಾನಿ ಅವರಿಗೆ ಕಾನೂನು ಆಯೋಗ ಸಲ್ಲಿಸಿದ 170ನೇ ವರದಿ. ಈ ವರದಿಯ ಶೀರ್ಷಿಕೆಯೆ 'ಚುನಾವಣಾ ಕಾನೂನುಗಳ ಸುಧಾರಣೆ'. ಈ ವರದಿಯೂ 15ನೇ ಕಾನೂನ ಆಯೋಗದ ಅಧ್ಯಕ್ಷ ನ್ಯಾ. ಬಿ.ಪಿ. ರೆಡ್ಡಿ ಅವರು ಸಿದ್ಧಪಡಿಸಿದ್ದು. ರೆಡ್ಡಿ ಸುಪ್ರೀಂಕೋರ್ಟ್‌ನ ನಿವೃತ್ತ ನ್ಯಾಯಾಧೀಶರು. ಚುನಾವಣಾ ಪದ್ಧತಿಯಲ್ಲಿ ಸಾಕಷ್ಟು ಸುಧಾರಣಾ ಕ್ರಮಗಳನ್ನು ಕೈಗೊಂಡರು ಅದರಿಂದ ಯಾವುದೇ ಫಲ ಸಿಕ್ಕಿಲ್ಲ ಎಂಬುದನ್ನು ಮನಗಂಡೆ ಕಾನೂನು ಆಯೋಗ ಸಮಗ್ರವಾದ ಬದಲಾವಣೆಯ ಬಗ್ಗೆ ಸಲಹೆಗಳನ್ನು ನೀಡಿದ್ದು, ಸಮಾಜದ ಅಗತ್ಯತೆಗೆ ತಕ್ಕಂತೆ ಸುಧಾರಣೆಯ ಬಗ್ಗೆ ಹೇಳಿದೆ. ಪ್ರತಿಯೊಂದು ಸುಧಾರಣಾ ಕ್ರಮಗಳಿಗೂ ನ್ಯಾಯವೊದಗಿಸಿದೆ. ಅನುಷ್ಠಾನವಾಗದಾದ ಶಿಫಾರಸುಗಳೇನು ಅಲ್ಲ.

ನ್ಯಾ. ಎಂ. ಎನ್. ವೆಂಕಟಾಚಲಯ್ಯ ಅವರ ಅಧ್ಯಕ್ಷತೆಯಲ್ಲಿ 2000ರ ಫೆಬ್ರವರಿ 23ರಲ್ಲಿ ರಚನೆಯಾಗಿದ್ದ ಸಂವಿಧಾನ ಸುಧಾರಣೆಯ ರಾಷ್ಟ್ರೀಯ ಆಯೋಗ ಸಹ ಕೆಲವು ಸಲಹೆಗಳನ್ನು ನೀಡಿದೆ. ಈ ಆಯೋಗದಲ್ಲಿಯೂ ಸುಪ್ರೀಂಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಆರ್.ಎಸ್. ಸರ್ಕಾರಿಯಾ, ಮಾಜಿ ಲೋಕಸಭಾಧ್ಯಕ್ಷ ಪಿ.ಎ. ಸಂಗ್ಮಾ, ಅಟಾರ್ನಿ ಜನರಲ್ ಸೋಲಿ ಸೊರಾಬ್ಜಿ, ಸ್ಟೇಟ್ಸ್‌ಮನ್ ಪತ್ರಿಕೆಯ ಮುಖ್ಯಸಂಪಾದಕ ಸಿ.ಆರ್. ಇರಾನಿ, ಅಮೆರಿಕಾದ ಮಾಜಿ ರಾಯಭಾರಿ ಡಾ. ಅಬಿದ್ ಹುಸ್ಸೇನ್‌ರಂತಹ ಪ್ರಮುಖರು ಸದಸ್ಯರಾಗಿದ್ದರು.

ಈ ರಾಷ್ಟ್ರೀಯ ಆಯೋಗವು 2002ರ ಮಾರ್ಚ್ 31ಕ್ಕೆ ತನ್ನ ವರದಿ ಸಲ್ಲಿಸಿತು. ಈ ವರದಿಯಲ್ಲಿ ಪ್ರತ್ಯೇಕ ಅಧ್ಯಾಯ (ಅಧ್ಯಾಯ 4) "ಚುನಾವಣಾ ಪ್ರಕ್ರಿಯೆ ಮತ್ತು ರಾಜಕೀಯ ಪಕ್ಷಗಳು" ಎಂಬ ಅಧ್ಯಾಯವೇ ಇದೆ. ಇದರಲ್ಲಿ ಚುನಾವಣಾ ಸುಧಾರಣೆಗೆ ಸಂಬಂಧಿಸಿದಂತೆ 38 ಶಿಫಾರಸು ಮಾಡಿದೆ. ಆದರೆ ವಿಷಾದದ ಸಂಗತಿ ಎಂದರೆ ಯಾವುದೇ ಶಿಫಾರಸು ಅನುಷ್ಠಾನವಾಗಿಲ್ಲ.

ಭಾರತ ಚುನಾವಣಾ ಆಯೋಗ ಸಹ ಕಾಲಕಾಲಕ್ಕೆ ಚುನಾವಣಾ ಸುಧಾರಣೆಗೆ ಸಂಬಂಧಿಸಿದಂತೆ ಶಿಫಾರಸುಗಳನ್ನು ಮಾಡುತ್ತ ಬರುತ್ತಿದೆ. ಆದರೆ ಚುನಾವಣೆ ನಡೆಸುವ ಆಯೋಗ ಸ್ವತಃ ಯಾವುದೇ ಸುಧಾರಣೆ ಜಾರಿಗೆ ತರಲು ಸಾಧ್ಯವಿಲ್ಲ. ಆಯೋಗವು ಚುನಾವಣಾ ನಿಯಮಗಳು 1961, ಜನಪ್ರತಿನಿಧಿ ಕಾಯ್ದೆ 1951 ಮತ್ತು ಇದೇ ರೀತಿಯ ನಿಯಮ ಮತ್ತು ಕಾನೂನುಗಳಲ್ಲಿ

ಬದಲಾವಣೆಯ ಬಗ್ಗೆ ಆಯೋಗ ಹೇಳಿದೆ. ಸರ್ಕಾರ ಸಹ ಕಾಲಕಾಲಕ್ಕೆ ಕೆಲ ಬದಲಾವಣೆ ಮಾಡಿದೆ. ಆದರೆ ಪ್ರಮುಖ ತೀರ್ಮಾನಗಳನ್ನು ಕೈಗೊಂಡಿಲ್ಲ. ಕೇಂದ್ರ ಸರ್ಕಾರ ಆಯೋಗದ 22 ಶಿಫಾರಸುಗಳನ್ನು ಒಪ್ಪಿಲ್ಲ. 2004ರ ಜುಲೈ 5ರಂದು ಮುಖ್ಯ ಚುನಾವಣಾ ಆಯುಕ್ತರು ಪ್ರಧಾನಿಗೆ ಪತ್ರ ಬರೆದು ಈ ಶಿಫಾರಸುಗಳ ಬಗ್ಗೆ ಮಾಹಿತಿ ನೀಡಿದರು. ಇವುಗಳನ್ನು 2004ರ ಜುಲೈ 30 ರಂದು ಸಾರ್ವಜನಿಕರಿಗಾಗಿ ಪ್ರಕಟಿಸಿದರು. ಆದರೆ ಈ ಶಿಫಾರಸುಗಳ ಬಗ್ಗೆ ಕೇಂದ್ರ ಸರ್ಕಾರದಿಂದ ಯಾವುದೇ ನಿರ್ದಿಷ್ಟ ಪ್ರತಿಕ್ರಿಯೆ ಏನು ಬಂದಿಲ್ಲ.

2008ರಲ್ಲಿ ಬಂದ ಎರಡನೇ ಆಡಳಿತ ಸುಧಾರಣಾ ಆಯೋಗದ ವರದಿ ಸಹ ಚುನಾವಣಾ ಪದ್ಧತಿಯ ಬಗ್ಗೆ ಕೆಲ ಪ್ರಮುಖ ಅಭಿಪ್ರಾಯಗಳ್ನು ವ್ಯಕ್ತಪಡಿಸಿದೆ. ಚುನಾವಣಾ ಪದ್ಧತಿಯಲ್ಲಿನ ಸುಧಾರಣೆಗಳ ಬಗ್ಗೆಯೂ ಕೆಲ ಗಂಭೀರವಾದ ಶಿಫಾರಸುಗಳನ್ನು ಮಾಡಿದೆ. ಆದರೆ ದುಃಖದ ವಿಚಾರವೆಂದರೆ ಸರ್ಕಾರ ಇವುಗಳ ಅನುಷ್ಠಾನಕ್ಕೆ ಯಾವುದೇ ಪ್ರಯತ್ನವನ್ನೇನು ಮಾಡಿಲ್ಲ.

ಅಂತಿಮವಾಗಿ 2010ರ ಡಿಸೆಂಬರ್ 9 ರಂದು ಆಗಿನ ಕಾನೂನು ಸಚಿವ ಎಂ. ವೀರಪ್ಪ ಮೊಯಿಲಿ ಮತ್ತು ಆಗಿನ ಮುಖ್ಯ ಚುನಾವಣಾ ಆಯುಕ್ತ ಎಸ್.ವೈ. ಖುರೇಶಿ ಜಂಟಿ ಪತ್ರಿಕಾಗೋಷ್ಠಿ ನಡೆಸಿ, ಚುನಾವಣಾ ಸುಧಾರಣೆಗೆ ಸಂಬಂಧಿಸಿದಂತೆ ಏಳು ಪ್ರಾದೇಶಿಕ ಹಾಗೂ ಒಂದು ರಾಷ್ಟ್ರೀಯ ಸಮಾವೇಶ ನಡೆಸಿ ಸಾರ್ವಜನಿಕ ಅಭಿಪ್ರಾಯ ಪಡೆಯುವುದಾಗಿ ಪ್ರಕಟಿಸಿದರು. ಈ ಸಮಾವೇಶಗಳಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳನ್ನು ಆಧರಿಸಿ ಚುನಾವಣಾ ಸುಧಾರಣೆಗೆ ಸಂಬಂಧಿಸಿದಂತೆ ಸಮಗ್ರ ಕಾನೂನು ರೂಪಿಸುವುದಾಗಿ ಹೇಳಿದರು. ಏಳು ಪ್ರಾದೇಶಿಕ ಸಮಾವೇಶಗಳನ್ನು 2011ರಲ್ಲಿ ನಡೆಸಲಾಯಿತು. ಆದರೆ ರಾಷ್ಟ್ರ ಮಟ್ಟದ ಸಮಾವೇಶ ನಡೆಯಲಿಲ್ಲ. ಚುನಾವಣಾ ಸುಧಾರಣೆಗೆ ಸಂಬಂಧಿಸಿದಂತೆ ಒಂದು ಕರಡು ವಿಧೇಯಕವನ್ನು ತಯಾರಿಸಲಾಗಿತ್ತು, ಕಾನೂನು ಸಚಿವರು ಈ ವಿಷಯದಲ್ಲಿ ಪ್ರಧಾನಮಂತ್ರಿ ಜತೆಗೆ ಚರ್ಚಿಸಿದ್ದರು ಎಂಬ ಮಾಹಿತಿಯೂ ಇದೆ.

ಈ ವಿಷಯದಲ್ಲಿ ಇತ್ತೀಚಿನ ವಿದ್ಯಮಾನವೆಂದರೆ ಮುಖ್ಯ ಚುನಾವಣಾ ಆಯುಕ್ತರಾಗಿದ್ದ ಡಾ. ಎಸ್.ವೈ. ಖುರೇಶಿ 2012ರ ಏಪ್ರಿಲ್ 13 ರಂದು ಪ್ರಧಾನಮಂತ್ರಿಗೆ ಪತ್ರ ಬರೆದಿರುವುದು. ಅವರು ಆಯುಕ್ತರ ಹುದ್ದೆಯಿಂದ 2012ರ ಜೂನ್ 10ರಂದು ನಿವೃತ್ತರಾದರು. ಕಾನೂನು ಸಚಿವರಾಗಿದ್ದ ವೀರಪ್ಪ ಮೊಯಿಲಿ ಅವರ ಜತೆಗೆ ಖುರೇಶಿ ಈ ವಿಷಯದಲ್ಲಿ ಸಾಕಷ್ಟು ಚರ್ಚೆ ನಡೆಸಿದ್ದರು. ಅನೇಕ ತಜ್ಞರು ಸಹ ಚುನಾವಣಾ ಸುಧಾರಣೆಗೆ ಸಲಹೆಗಳನ್ನು ನೀಡಿದ್ದರು. ಆದರೆ ಅವು ಜಾರಿಯಾಗದೆ ಹತಾಶರಾಗಿರುವುದು ಪತ್ರದಲ್ಲಿ ವ್ಯಕ್ತವಾಗುತ್ತದೆ.



"ಅಗತ್ಯವಾದ ಕಾನೂನು ರೂಪಿಸುವ ವಿಚಾರದಲ್ಲಿ ಯಾವುದೇ ತೀರ್ಮಾನವಾಗದೆ ಇರುವುದು ಆಯೋಗಕ್ಕೆ ತೀವ್ರ ಅತೃಪ್ತಿ ಇದೆ."

"ಚುನಾವಣಾ ಪದ್ಧತಿಯಲ್ಲಿರುವ ಕೆಲ ದೌರ್ಬಲ್ಯಗಳಿಂದ ಚುನಾವಣೆಯ ಗುಣಮಟ್ಟವನ್ನೇ ಪ್ರಶ್ನಿಸುವಂತಾಗಿದೆ. ಈ ನಿಟ್ಟಿನಲ್ಲಿಯೇ ಆಯೋಗವು ಸುಧಾರಣೆಗಾಗಿ ಪ್ರಸ್ತಾವನೆ ಸಲ್ಲಿಸಿದ್ದು. ಇದರಲ್ಲಿ ಸಣ್ಣ ಪ್ರಮಾಣದ ಸುಧಾರಣೆಗಳನ್ನು ಸರ್ಕಾರ ಮತ್ತು ಸಂಸತ್ ಜಾರಿಗೆ ತಂದಿವೆ. ಆದರೆ ಪ್ರಮುಖವಾದ ಶಿಫಾರಸುಗಳನ್ನು ಕೈಬಿಡಲಾಗಿದೆ......

"ಕೆಲವು ಸುಧಾರಣೆಗಳು ತಾಂತ್ರಿಕ ಅಂಶಗಳನ್ನು ಮಾತ್ರ ಒಳಗೊಂಡಿವೆ. ಅವುಗಳಿಗೆ ಕಾನೂನು ಮತ್ತು ನ್ಯಾಯ ಸಚಿವಾಲಯದಲ್ಲಿ ಕೇವಲ ನಿಯಮಗಳಲ್ಲಿ ತಿದ್ದುಪಡಿ ಆದರೆ ಸಾಕು, ಇಂತಹ ಸಣ್ಣ ವಿಚಾರಗಳು ಸಹ ಬಹಳಷ್ಟು ಕಾಲದಿಂದ ಬಾಕಿ ಉಳಿದಿವೆ."

1967 ರಿಂದ 47 ವರ್ಷಗಳಷ್ಟು ಕಾಲ ಚುನಾವಣಾ ಸುಧಾರಣೆಗಳು ಬಾಕಿ ಇರುವುದು ದೊಡ್ಡ ಇತಿಹಾಸವೇ ಸರಿ. ಈಗ ಏನಾಗಿದೆ, ಏನಾಗಬೇಕಾಗಿದೆ ಎಂಬ ಕಡೆ ನೋಡೋಣ.

**ಈಗಿನ ಪರಿಸ್ಥಿತಿ**

ಚುನಾವಣಾ ಸುಧಾರಣೆಗೆ ಸಂಬಂಧಿಸಿದಂತೆ 2013 ಪ್ರಮುಖವಾದ ವರ್ಷ. ಅನೇಕ ಬೆಳವಣಿಗೆಗಳು ಈ ವರ್ಷದಲ್ಲಿ ಘಟಿಸಿವೆ. ಅವುಗಳಲ್ಲಿ ಕೆಲವೊಂದು ಧನಾತ್ಮಕವಾಗಿವೆ. ಅದರಲ್ಲಿ ನ್ಯಾಯಾಂಗ ಮತ್ತು ಶಾಸನಬದ್ಧ ಸಂಸ್ಥೆಗಳಿಂದ ಈ ಕೆಲಸ ಆಗಿದೆ. 2013ರ ಜುಲೈ 3 ರಿಂದ ಈ ಕಾರ್ಯ ಆರಂಭವಾಯಿತು.


ಕೇಂದ್ರ ಮಾಹಿತಿ ಆಯೋಗ ಆರು ರಾಷ್ಟ್ರೀಯ ಪಕ್ಷಗಳನ್ನು ಮಾಹಿತಿ ಹಕ್ಕು ಅಧಿನಿಯಮದಡಿ ತಂದು, ಈ ತೀರ್ಪು ಪ್ರಕಟವಾದ ಆರು ವಾರಗಳಲ್ಲಿ ಮಾಹಿತಿ ಹಕ್ಕು ಅಧಿಕಾರಿ ನೇಮಿಸುವಂತೆ ಆದೇಶಿಸಿತು. ಈ ಆದೇಶ ಬಂದು ಒಂದು ವರ್ಷವಾಗುತ್ತ ಬಂದರೂ ರಾಜಕೀಯ ಪಕ್ಷಗಳು ಇನ್ನೂ ಅನುಷ್ಠಾನಕ್ಕೆ ಮುಂದಾಗಿಲ್ಲ. ಆದರೆ ಈ ಆದೇಶವನ್ನೇ ರದ್ದು ಪಡಿಸುವ ರೀತಿಯಲ್ಲಿ ಮಾಹಿತಿ ಹಕ್ಕು ಅಧಿನಿಯಮಕ್ಕೆ ತಿದ್ದುಪಡಿ ತರುವ ಪ್ರಯತ್ನ ನಡೆಯಿತು. ಆದರೆ ಇದುವರೆವಿಗೂ ಯಶಸ್ವಿಯಾಗದೇ ಯಥಾಸ್ಥಿತಿ ಮುಂದುವರೆದಿದೆ.

ಮುಂದಿನ ಬೆಳವಣಿಗೆ ಎಂದರೆ ಸುಪ್ರೀಂಕೋರ್ಟ್‌ನ ತೀರ್ಪು. ಲಿಲ್ಲಿ ಥಾಮಸ್ ಮತ್ತು ಲೋಕ್ ಪ್ರಹಾರಿ ತೀರ್ಪು ಎಂದೇ ಕರೆಯಲ್ಪಡುವ ಈ ತೀರ್ಪು ಶಾಸಕ ಅಥವಾ ಸಂಸದ ಯಾವುದೇ ಕ್ರಿಮಿನಲ್ ಪ್ರಕರಣದಲ್ಲಿ ಜೈಲು ವಾಸ ಅನುಭವಿಸಿದರೆ ತಕ್ಷಣ ಸದಸ್ಯತ್ವ ರದ್ದಾಗುತ್ತದೆ. ಮೇಲಿನ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸುವುದಕ್ಕೂ ಸದಸ್ಯತ್ವ ರದ್ದಾಗುವುದಕ್ಕೂ ಸಂಬಂಧವಿರುವುದಿಲ್ಲ.

ನ್ಯಾಯಾಲಯವು ಸೆಕ್ಷನ್ 8 (4) ರಡಿಯಲ್ಲಿ 2013ರ ಜುಲೈ 10ರಂದು ನೀಡಿದ ತೀರ್ಪಿನಲ್ಲಿ ಜನ ಪ್ರತಿನಿಧಿ ಕಾಯ್ದೆಯೇ ಅಸಂವಿಧಾನಿಕ ಎಂದು ಹೇಳಿತ್ತು. ಈ ಆದೇಶವನ್ನು ರದ್ದು ಮಾಡಲು ಜನಪ್ರತಿನಿಧಿ ಕಾಯ್ದೆಗೆ ತಿದ್ದುಪಡಿ ತರುವ ಪ್ರಯತ್ನಗಳು ನಡೆದವಾದರೂ ಯಶಸ್ವಿಯಾಗಲಿಲ್ಲ. ಆದರೆ ಆದೇಶವು ಯಥಾಸ್ಥಿತಿಯಲ್ಲಿ ಮುಂದುವರೆದಿದೆ. ಈ ಆದೇಶದ ಪರಿಣಾಮ ಮೂವರು ಸಂಸದರು ತಮ್ಮ ಅಧಿಕಾರ ಕಳೆದುಕೊಂಡರು.

ಅತ್ಯಂತ ಕಠಿಣವಾದಂತಹ ಸುಪ್ರೀಂಕೋರ್ಟ್‌ನ ತೀರ್ಪು 2013ರ ಸೆಪ್ಟಂಬರ್ 13ರಂದು ಹೊರ ಬಂತು. ರೆಸರ್ಜೆನ್ಸ್ ಇಂಡಿಯಾ ಎಂಬ ನಾಗರಿಕ ಸಮಾಜದ ಸಂಘಟನೆಯೊಂದು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿತ್ತು. ಅಭ್ಯರ್ಥಿಗಳು ಪ್ರಮಾಣಪತ್ರದಲ್ಲಿ ಯಾವುದೇ ಕಾಲಂ ಖಾಲಿ ಬಿಟ್ಟಿದ್ದರೆ, ಅಂತಹ ನಾಮಪತ್ರವನ್ನು ತಿರಸ್ಕರಿಸುವ ಹಕ್ಕು ಚುನಾವಣಾಧಿಕಾರಿಗೆ ಇದೆ ಎಂದು ನ್ಯಾಯಾಲಯ ಹೇಳಿತ್ತು1. ಈ ತೀರ್ಪಿನ ಪರಿಣಾಮ 2014ರ ಲೋಕಸಭಾ ಚುನಾವಣೆಯಲ್ಲಿ ಅನೇಕ ರಾಜಕೀಯ ಪಕ್ಷಗಳ ಪ್ರಮುಖರ ಮಾಹಿತಿಗಳು ಹೊರ ಬಂದವು. ಹಿಂದಿನ ಕೆಲ ಚುನಾವಣೆಗಳಲ್ಲಿ ಈ ಕಾಲಂಗಳನ್ನೇ ಅಂತಹ ನಾಯಕರು ತುಂಬಿರಲಿಲ್ಲ.

ಮತ್ತೊಂದು ಪ್ರಮುಖ ತೀರ್ಪು 2013ರ ಸೆಪ್ಟಂಬರ್ 27ರಂದು ಸುಪ್ರೀಂಕೋರ್ಟ್‌ನಲ್ಲಿ ಹೊರ ಬಂತು. ಪೀಪಲ್ಸ್ ಯೂನಿಯನ್ ಆಫ್ ಸಿವಿಲ್ ಲಿಬರ್ಟೀಸ್ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಾಲಯ ವಿದ್ಯುನ್ಮಾನ ಮತಯಂತ್ರಗಳಲ್ಲಿಯೂ "ಮೇಲಿನ ಯಾರಿಗೂ ಅಲ್ಲ' (ನೋಟಾ) ಬಟನ್ ಇರಬೇಕೆಂದು ಚುನಾವಣಾ ಆಯೋಗಕ್ಕೆ



ಸೂಚಿಸಿತು. ಇದರಿಂದ ಮತದಾರರು ತಮಗೆ ಇಷ್ಟವಿಲ್ಲದ ಅಭ್ಯರ್ಥಿಗಳಿಗೆ ಮತ ಚಲಾಯಿಸದೆ ಇರುವುದು ತಪ್ಪಿತು. ಈ ತೀರ್ಪು ನೀಡುವುದಕ್ಕೆ ಕಾರಣವನ್ನು ನ್ಯಾಯಾಲಯ ಈ ಮುಂದಿನಂತೆ ನೀಡಿದೆ.

"ಈ ಅವಕಾಶವನ್ನು ಮತದಾರರಿಗೆ ನೀಡುವುದರಿಂದ ಅಭ್ಯರ್ಥಿಗಳ ಬಗ್ಗೆ ಇರುವ ಅಭಿಪ್ರಾಯವನ್ನು ವ್ಯಕ್ತಪಡಿಸಲು ಸಾಧ್ಯವಾಗುತ್ತದೆ. ಹೆಚ್ಚಿನ ಮತದಾರರು ಈ ಅಭಿಪ್ರಾಯ ವ್ಯಕ್ತಪಡಿಸಿದರೆ ತಮ್ಮ ಅಭ್ಯರ್ಥಿಗಳ ಬಗ್ಗೆ ಮತದಾರರ ಅನಿಸಿಕೆ ಏನು ಎಂಬುದು ರಾಜಕೀಯ ಪಕ್ಷಗಳಿಗೂ ಅರಿವಾಗುತ್ತದೆ. ಇದರಿಂದ ಸುಧಾರಣೆ ತಾನೇ ತಾನಾಗಿ ಬರುತ್ತದೆ.

ರಾಜಕೀಯ ಪಕ್ಷಗಳು ಸಾರ್ವಜನಿಕ ಅಭಿಪ್ರಾಯದಂತೆ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಬೇಕಾಗುತ್ತದೆ. ಅಭ್ಯರ್ಥಿಗಳ ಬದ್ಧತೆಯನ್ನು ಕಾಣಬಹುದು." (ಪ್ಯಾರ 55)

ಚುನಾವಣಾ ಸುಧಾರಣೆಗೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್‌ನ ಪ್ರಯತ್ನಗಳು 2014ರಲ್ಲೂ ಮುಂದುವರೆದವು. ಪಬ್ಲಿಕ್ ಇಂಟೆರೆಸ್ಟ್ ಫೌಂಡೇಷನ್ ಸಲ್ಲಿಸಿದ್ದ ಪಿಐಎಲ್‌ಗೆ ಸಂಬಂಧಿಸಿದಂತೆ 2014ರ ಮಾರ್ಚ್ 10ರಂದು ನೀಡಿದ ತೀರ್ಪಿನಲ್ಲಿ ಯಾವುದೇ ಹಾಲಿ ಶಾಸಕ ಅಥವಾ ಸಂಸದರ ವಿರುದ್ಧ ಇರುವ ಕ್ರಿಮಿನಲ್ ಮೊಕದ್ದಮೆಗಳನ್ನು ಒಂದು ವರ್ಷದಲ್ಲಿ ಇತ್ಯರ್ಥಪಡಿಸುವಂತೆ ಕೆಳಹಂತದ ನ್ಯಾಯಾಲಯಗಳಿಗೆ ಸೂಚನೆ ನೀಡಿತು. ಸಂಬಂಧಿಸಿದ ಹೈಕೋರ್ಟ್‌ಗಳು ಮೇಲ್ವಿಚಾರಣೆ ನಡೆಸಬೇಕೆಂದು ಸೂಚಿಸಿತು.

ಮತ್ತೊಂದು ಪ್ರಮುಖ ತೀರ್ಪು ಹೊರ ಬಂದಿದ್ದು 2014ರ ಮೇ 5 ರಂದು. ಅದು ಅಶೋಕ್ ಚವ್ಹಾಣ್ ಮೇಲಿನ ಪಾವತಿ ಸುದ್ದಿ ಪ್ರಕರಣದಲ್ಲಿ ಮಹಾರಾಷ್ಟ್ರದ ನಾಂದೇಡ್‌ನ ಭೋಕರ್ ವಿಧಾನಸಭಾ ಕ್ಷೇತ್ರದಲ್ಲಿ 2009ರಲ್ಲಿ ಸೋತ ಮಾಧವರಾವ್ ಕಿನ್ಹಾಳ್ಕರ್ ಚುನಾವಣಾ ಆಯೋಗಕ್ಕೆ ಸಲ್ಲಿಸಿದ ದೂರಿನಲ್ಲಿ

ಅಶೋಕ್ ಚವ್ಹಾಣ್ ಅವರು 'ಲೋಕಮತ' ಪತ್ರಿಕೆಯಲ್ಲಿ ಹಣ ನೀಡಿ ಹೊರ ತಂದಿರುವ ವಿಶೇಷ ಪುರವಣಿಗಳ ಮಾಹಿತಿಯನ್ನು ಚುನಾವಣಾ ವೆಚ್ಚದಲ್ಲಿ ಸೇರಿಸಿಲ್ಲವೆಂದು ಆಕ್ಷೇಪಿಸಿದ್ದರು. ಚುನಾವಣಾ ಆಯೋಗ ವಿಚಾರಣೆ ನಡೆಸಿ ಅಶೋಕ್ ಚವ್ಹಾಣ್ ಅವರಿಗೆ ಜನಪ್ರತಿನಿಧಿ ಕಾಯ್ದೆಯ ಸೆಕ್ಷನ್ 10 ಎ ಪ್ರಕಾರನೋಟಿಸ್ ಜಾರಿ ಮಾಡಿತ್ತು. ಚವ್ಹಾಣ್ ಹೈಕೋರ್ಟ್ ಮೆಟ್ಟಿಲೇರಿದ್ದರು. ಆದರೆ ಅಲ್ಲಿ ಅವರು ಯಶಸ್ವಿಯಾಗಿರಲಿಲ್ಲ. ಆ ನಂತರ ಸುಪ್ರೀಂಕೋರ್ಟ್ ಮೆಟ್ಟಿಲೇರಿದ್ದರು. ಜನಪ್ರತಿನಿಧಿ ಕಾಯ್ದೆ 10 ಎ ಪ್ರಕಾರ ಚುನಾವಣಾ ಆಯೋಗ ಕೇವಲ ಚುನಾವಣಾ ವೆಚ್ಚದ ಮಾಹಿತಿ ಪಡೆಯಬಹುದೇ ಹೊರತು ಪರಿಶೀಲನೆ ಮಾಡುವ ಹಕ್ಕಿಲ್ಲ ಎಂದು ಚವ್ಹಾಣ್ ವಾದಿಸಿದ್ದರು. ಆದರೆ ಸುಪ್ರೀಂಕೋರ್ಟ್ ಈ ವಾದವನ್ನು ಒಪ್ಪಲಿಲ್ಲ. ಚುನಾವಣಾ ಆಯೋಗ ಲೆಕ್ಕ ಪರಿಶೀಲನೆ ಮಾಡಬಹುದೆಂದು ತೀರ್ಪು ನೀಡಿತು. ಇದರಿಂದ ಯಾವುದೇ ಅಭ್ಯರ್ಥಿ ತಪ್ಪು ಲೆಕ್ಕ ಕೊಟ್ಟರೆ ಚುನಾವಣಾ ಆಯೋಗಕ್ಕೆ ಕ್ರಮ ಕೈಗೊಳ್ಳುವ ಅಧಿಕಾರ ಸಿಕ್ಕಂತಾಗಿದೆ.



ನಾಮಪತ್ರಗಳ ಜತೆ ಪ್ರಮಾಣ ಪತ್ರಗಳನ್ನು ಸಲ್ಲಿಸುವ ಪದ್ಧತಿ 2002–03 ರಿಂದ ಆರಂಭವಾಯಿತು. ಇದು ದೆಹಲಿ ಹೈಕೋರ್ಟ್ ಹಾಗೂ ಸುಪ್ರೀಂಕೋರ್ಟ್‌ಗಳು ಪ್ರಜಾಪ್ರಭುತ್ವ ಸುಧಾರಣಾ ಸಂಘಟನೆಯ ಪಿಐಎಲ್‌ನ ಪರಿಣಾಮ. ನಾಗರಿಕ ಸಮಾಜದ ಸಂಘಟನೆಗಳು ಸಲ್ಲಿಸಿದ್ದ ಮತ್ತೊಂದು ಪ್ರಕರಣದಲ್ಲೂ ಈ ತೀರ್ಪು ಹೊರಬಂದಿತ್ತು.

**ಭವಿಷ್ಯ**

ಇದರಿಂದ ಅರ್ಥವಾಗುವುದೇನೆಂದರೆ ನಾಗರಿಕ ಸಮಾಜವೇ ಸುಧಾರಣೆಯಲ್ಲಿ ಪ್ರಮುಖ ಪಾತ್ರ ವಹಿಸಬೇಕು, ಅದಕ್ಕೆ ನ್ಯಾಯಾಂಗದ ನೆರವನ್ನು ಪಡೆಯಬೇಕು. ಕಾರ್ಯಾಂಗ ಮತ್ತು ಶಾಸಕಾಂಗವನ್ನು ಹೊರತುಪಡಿಸಿ ರಾಜಕೀಯ ವ್ಯವಸ್ಥೆಯನ್ನು ಸುಧಾರಿಸಲು ಅವಕಾಶಗಳಿವೆ. ಆ ಮೂಲಕ ಚುನಾವಣಾ ಪದ್ಧತಿಯಲ್ಲಿಯೂ ಸುಧಾರಣೆಗಳನ್ನು ತರಬಹುದಾಗಿದೆ.

ಇಡೀ ರಾಜಕೀಯ ವ್ಯವಸ್ಥೆ ಹಾಳಾಗಿದೆ ಎಂದರ್ಥವಲ್ಲ. ಆದರೆ ಕೆಲ ಬದಲಾವಣೆಗಳು ಮಾಡದೆ ಮುಂದುವರೆದರೆ ಇದೇ ಪರಿಸ್ಥಿತಿ ಇರುತ್ತದೆ. ಆದ್ದರಿಂದ ವ್ಯವಸ್ಥೆಯಲ್ಲಿ ಬದಲಾವಣೆ ಅಗತ್ಯವಿದೆ.

ಇದೀಗ ಕೇಂದ್ರ ಸರ್ಕಾರದಲ್ಲಿ ಹೊಸ ರಾಜಕೀಯ ವ್ಯವಸ್ಥೆ ಬಂದಿದೆ. 2014ರ ಏಪ್ರಿಲ್–ಮೇ ನಲ್ಲಿ ನಡೆದ ಲೋಕಸಭಾ ಚುನಾವಣೆಯ ಪ್ರಚಾರದಲ್ಲಿ ಚುನಾವಣಾ ವ್ಯವಸ್ಥೆಯ ಸುಧಾರಣೆಯ ಬಗ್ಗೆಯೂ ಮಾತನಾಡಿದ್ದಾರೆ. ರಾಜಕೀಯ ಅಪರಾಧೀಕರಣ ಸಹ ಗಮನ ಸೆಳೆದಿದೆ.

ಹಾಲಿ ಪ್ರಧಾನಮಂತ್ರಿ ಸಹ ಯಾವುದೇ ಸಂಸದರ ವಿರುದ್ಧ ಬಾಕಿ ಇರುವ ಕ್ರಿಮಿನಲ್ ಮೊಕದ್ದಮೆಯನ್ನು ಒಂದು ವರ್ಷದೊಳಗೆ ಇತ್ಯರ್ಥಪಡಿಸುವಂತೆ ಸುಪ್ರೀಂಕೋರ್ಟ್‌ಗೆ ಮನವಿ ಮಾಡಿದ್ದಾರೆ. ಒಂದು ವೇಳೆ ಮೊಕದ್ದಮೆ ಸಾಬೀತಾದರೆ ಅಂತಹವರನ್ನು ಸಂಸತ್ತಿನಿಂದ ಹೊರ ಹಾಕುವುದು ಇದರ ಉದ್ದೇಶ ಇರಬಹುದು.

ಇದರಿಂದ ಲೋಕಸಭೆಯಲ್ಲಿ ಯಾವುದೇ ಕ್ರಿಮಿನಲ್ ಮೊಕದ್ದಮೆ ಎದುರಿಸುವ ಸಂಸದರಿಲ್ಲದೇ ಮುಕ್ತವಾಗುತ್ತದೆ.

ಲೋಕಸಭಾ ಚುನಾವಣೆಯ ಫಲಿತಾಂಶ ಹೊಸ ಸುದ್ದಿಯನ್ನು ನೀಡಲಿಲ್ಲ. 2014ರ ಲೋಕಸಭಾ ಚುನಾವಣೆಯಲ್ಲಿ ಗೆದ್ದ 186 ಜನರ ವಿರುದ್ಧ ಕ್ರಿಮಿನಲ್ ಮೊಕದ್ದಮೆಗಳು ವಿಚಾರಣೆಗೆ ಬಾಕಿ ಇರುವುದು ಅವರ ಪ್ರಮಾಣಪತ್ರಗಳಿಂದಲೇ ತಿಳಿಯುತ್ತದೆ. ಹಿಂದಿನ ಲೋಕಸಭೆಗಳಲ್ಲಿ ಈ ಸಂಖ್ಯೆ ಕ್ರಮವಾಗಿ 125 ಮತ್ತು 162 ಇತ್ತು.

ಲೋಕಸಭೆಗೆ 2015ರ ಜೂನ್ 3ಕ್ಕೆ ಒಂದು ವರ್ಷ ತುಂಬುತ್ತದೆ. ಆ ವೇಳೆಗೆ ಕ್ರಿಮಿನಲ್ ಮೊಕದ್ದಮೆ ಎದುರಿಸುವವರೊಬ್ಬರು ಲೋಕಸಭೆಯಲ್ಲಿ ಕೂರದಂತಾದರೆ ಪ್ರಧಾನಿ ಮಂತ್ರಿ ಚುನಾವಣಾ ಪ್ರಚಾರದಲ್ಲಿ ನೀಡಿದ ಭರವಸೆಯ ಬಗ್ಗೆ ದೇಶ ಹೆಮ್ಮೆ ಪಡುತ್ತದೆ. ❑

## ಶ್ರದ್ಧಾಂಜಲಿ

ಪ್ರಕಾಶನ ವಿಭಾಗದ ದೆಹಲಿ ಮುಖ್ಯ ಕಛೇರಿಯಲ್ಲಿ ಸಂಪಾದಕರಾಗಿ ಸೇವೆ ಸಲ್ಲಿಸುತ್ತಿದ್ದ ಆರ್. ಅನುರಾಧ ಇನ್ನಿಲ್ಲ. ದಕ್ಷ, ಪ್ರಾಮಾಣಿಕ ಅಧಿಕಾರಿ, ಲೇಖಕಿ, ಕ್ಯಾನ್ಸರ್ ಪಿಡುಗಿನ ವಿರುದ್ಧದ ಹೋರಾಟಗಾರ್ತಿ.... ವೃತ್ತಿ ಬದುಕಿನಲ್ಲಿ ಉತ್ಕೃಷ್ಟ ಸೇವೆ ಸಲ್ಲಿಸಿದ ಅನುರಾಧ ತನ್ನ ಸಹೋದ್ಯೋಗಿ ಮಿತ್ರರನ್ನು ಮಾತ್ರವಲ್ಲದೆ, ಅಪಾರ ಅಭಿಮಾನಿಗಳನ್ನೂ ಕೂಡ ಅಗಲಿದ್ದಾರೆ.

ಪ್ರಕಾಶನ ವಿಭಾಗದ ಸಿಬ್ಬಂದಿ ವರ್ಗದ ನಡುವೆ ಅನುರಾಧ ಇಲ್ಲದ ಕೊರತೆ ಎದ್ದು ಕಾಣುತ್ತಿದೆ. ಸ್ನೇಹಿತರ, ಸಹೋದ್ಯೋಗಿಗಳ, ಮತ್ತವರು ಹೃದಯ ತಟ್ಟಿದ ಅಸಂಖ್ಯಾತ ಬಂಧು–ಬಳಗಕ್ಕವರು ಎಂದಿನಂತೆ ಸ್ಫೂರ್ತಿಯ ಚಿಲುಮೆಯಾಗಿರುತ್ತಾರೆ. ಅಗಲಿದ ಚೇತನಕ್ಕೆ ಪ್ರಕಾಶನ ವಿಭಾಗದ ಹೃದಯಪೂರ್ವಕ ಶ್ರದ್ಧಾಂಜಲಿ.


ಆರ್. ಅನುರಾಧ

# ಚುನಾವಣಾ ಸುಧಾರಣೆ ನಡೆದು ಬಂದ ದಾರಿ

ಎಸ್. ವೈ. ಖುರೇಷಿ
ಕನ್ನಡಕ್ಕೆ : ಎಸ್. ಸಿದ್ಧರಾಮಪ್ಪ



ಚುನಾವಣಾ ಸುಧಾರಣೆಯಲ್ಲಿ 'ಕಡ್ಡಾಯ ಮತದಾನ' ವಿಷಯವು ಆಗಿಂದಾಗ್ಗೆ ಚರ್ಚೆಯಾಗುತ್ತಿದೆ. ಇದರಿಂದಾಗಿ ನಗರ ಪ್ರದೇಶದ ಹಾಗೂ ಇತರೆ ಮತದಾರರ ನಿರಾಸಕ್ತಿಯನ್ನು ಹೋಗಲಾಡಿಸಬಹುದು ಎಂಬುದು ಆಶಯ. ಆದರೆ ಬಲವಂತದ ಕ್ರಿಯೆ ಮತ್ತು ಸಂವಿಧಾನಗಳು ಒಟ್ಟಿಗೆ ಸಾಗಲು ಆಗುವುದಿಲ್ಲ.

ಭಾರತದ ಚುನಾವಣೆಗಳು ವರುಷದಿಂದ ವರುಷಕ್ಕೆ ಹಲವಾರು ಬದಲಾವಣೆಗಳನ್ನು ಕಂಡುಕೊಂಡು ಬಲಗೊಳ್ಳುತ್ತಾ ಬಂದಿವೆ. ಆದರೂ ಸಹ ಈ ಕ್ಷೇತ್ರದಲ್ಲಿನ ಇನ್ನೂ ಹಲವಾರು ಸಂಗತಿಗಳನ್ನು ಗುರುತಿಸಿ ಅವುಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಕ್ರಿಯಾಶೀಲವಾಗಬೇಕಾಗಿದೆ.

ಚುನಾವಣಾ ಶಾಸನವು ಹೊಸ ಸವಾಲುಗಳು ಮತ್ತು ಬದಲಾದ ಸಂದರ್ಭಗಳನ್ನು ಗಮನದಲ್ಲಿಟ್ಟುಕೊಂಡು ಹಲವಾರು ತಿದ್ದುಪಡಿಗಳನ್ನು ಕಂಡಿದೆ. ಇವುಗಳಲ್ಲಿ ಪ್ರಮುಖವಾದವುಗಳೆಂದರೆ 1989ನೇ ಇಸವಿಯಲ್ಲಿ ಮತದಾನದ ವಯಸ್ಸನ್ನು 21 ರಿಂದ 18 ಕ್ಕೆ ಕಡಿಮೆಗೊಳಿಸಿದ್ದು, ರಾಜ್ಯಸಭಾ ಚುನಾವಣೆಗಳ ಮುಕ್ತ ಮತದಾನ ಪದ್ಧತಿ ಮತ್ತು 2003ರಲ್ಲಿ ಸೇನೆ ಹಾಗೂ ಅರೆ ಮಿಲಿಟರಿ ಪಡೆಗಳಿಗೆ ಬದಲಿ ಮತದಾನ ಪದ್ಧತಿಯನ್ನು ಜಾರಿಗೊಳಿಸಿದ್ದು ಸೇರಿವೆ. 2011ನೇ ಇಸವಿಯಲ್ಲಿ ಜಾರಿಗೊಳಿಸಿದ ಅನಿವಾಸಿ ಭಾರತೀಯರು ತಮ್ಮ ಹೆಸರುಗಳನ್ನು ಮತಪಟ್ಟಿಯಲ್ಲಿ ನೋಂದಾಯಿಸುವ ತಿದ್ದುಪಡಿಯೂ ಸಹ ಪ್ರಮುಖವಾದುದಾಗಿದೆ. ಚುನಾವಣಾ ಆಯೋಗವು ವಿದ್ಯುನ್ಮಾನ ಮತಯಂತ್ರಗಳನ್ನು ಬಳಸಲು ಹಾಗೂ ಚುನಾವಣೆಯ ಕೆಲಸಗಳಿಗೆ ನಿಯುಕ್ತಿಗೊಂಡ ಅಧಿಕಾರಿಗಳು ಹಾಗೂ ಪೊಲೀಸರ ಮೇಲೆ ನಿಯಂತ್ರಣವನ್ನಿರಿಸಿಕೊಳ್ಳುವಂತಹ ಕ್ರಮಗಳೂ ಸಹ ಆಯೋಗವನ್ನು ಬಲಪಡಿಸಿವೆ. ಮೊದಲು ಬಳಕೆಯಲ್ಲಿದ್ದ ಮುದ್ರಿತ ಮತಪಟ್ಟಿಗಳ ಬದಲಿಗೆ ಗಣಕೀಕೃತ ಹಾಗೂ ಭಾವಚಿತ್ರಗಳನ್ನೊಳಗೊಂಡ ಮತ ಬಳಕೆಗೆ ಬಂದಿವೆ. ಮತದಾರರ ಗುರುತು ಪತ್ರವು ಇದೀಗ ಪ್ರಮುಖ ದಾಖಲೆಗಾಗಿ ಬಳಕೆಯಾಗುತ್ತಿದೆ.

### ಚುನಾವಣಾ ಸುಧಾರಣೆಗಳಿಗೆ ದೊರಕಿದ ನ್ಯಾಯಾಂಗದ ಬೆಂಬಲ

ನ್ಯಾಯಾಲಯಗಳೂ ಸಹ ಶಾಸನವನ್ನು ಸರಿಯಾದ ಮಾರ್ಗದಲ್ಲಿ ವಿಶ್ಲೇಷಿಸಿ ಚುನಾವಣಾ ಆಯೋಗದ ಕೈಗಳನ್ನು ಬಲಪಡಿಸಿವೆ. ಇದರಲ್ಲಿ ಪ್ರಥಮವಾದ ಮತ್ತು ಬಹು ಪ್ರಮುಖವಾದ ತೀರ್ಪು 1952ರಲ್ಲಿಯೇ ದಾಖಲಾಯಿತು. (ಎನ್.ಪಿ.ಪೊನ್ನುಸ್ವಾಮಿ ವರ್ಸಸ್ ಚುನಾವಣಾಧಿಕಾರಿ, ನಾಮಕ್ಕಲ್, ಸಂವಿಧಾನದ ಪರಿಚ್ಛೇದ 329(ಬಿ) ಅನ್ನು ಉಲ್ಲೇಖಿಸಿದ ಉಚ್ಚನ್ಯಾಯ ಪೀಠವು ಚುನಾವಣಾ ಪ್ರಕ್ರಿಯೆಯು ಮುಕ್ತಾಯವಾಗುವ ತನಕ ಯಾವುದೇ ಚುನಾವಣೆಗಳನ್ನು ಪ್ರಶ್ನಿಸಿ ದಾವೆಗಳನ್ನು ಹೂಡುವಂತಿಲ್ಲ ಎಂದು ಸಾರಿತು. ಮುಂದುವರೆದು, 1978ರಲ್ಲಿ ಅಪೆಕ್ಸ್ ನ್ಯಾಯಾಲಯವು (ಮೊಹಿಂದರ್ ಸಿಂಗ್ ಗಿಲ್ ವರ್ಸಸ್ ಮುಖ್ಯ ಚುನಾವಣಾ ಆಯುಕ್ತರು ಮತ್ತಿತರರು) ಈ ವಾದವನ್ನು ಎತ್ತಿ ಹಿಡಿಯಿತು.

1995ನೇ ಇಸವಿಯಲ್ಲಿ ಎಲ್ಲಾ ರಾಜಕೀಯ ಪಕ್ಷಗಳಿಗೆ ತಮ್ಮ ಆದಾಯ ತೆರಿಗೆ ವಿವರಗಳನ್ನು ಆಯೋಗಕ್ಕೆ ಸಲ್ಲಿಸುವಂತೆ ನಿರ್ದೇಶನ ನೀಡಿತು. 2003ನೇ ಇಸವಿಯಲ್ಲಿ ಮತ್ತೊಂದು ಮಹತ್ವದ ತೀರ್ಪನ್ನು ನೀಡಿದ ಉಚ್ಚನ್ಯಾಯಾಲಯವು ಪ್ರತಿಯೊಬ್ಬ ಮತದಾರನಿಗೂ ತನ್ನ ಅಭ್ಯರ್ಥಿಯ ಪೂರ್ವಾಪರಗಳನ್ನು ತಿಳಿದುಕೊಳ್ಳುವ

ಮಾಜಿ ಮುಖ್ಯ ಚುನಾವಣಾ ಆಯುಕ್ತರು ಹಾಗೂ ಸದಸ್ಯರು, ಸಲಹಾ ಮಂಡಳಿ, ಅಂತಾರಾಷ್ಟ್ರೀಯ ಪ್ರಜಾತಂತ್ರ ಮತ್ತು ಚುನಾವಣಾ ನೆರವು ಸಂಸ್ಥೆ – ಐಡಿಎಇ ಸ್ಟಾಕ್‌ಹೋಮ್. Email : syquraishi@gmail.com

ಹಕ್ಕಿರುವುದರಿಂದ, ಅಭ್ಯರ್ಥಿಯು ತನ್ನ ಹಿನ್ನೆಲೆ, ಆಸ್ತಿ, ಶೈಕ್ಷಣಿಕ ಅರ್ಹತೆಗಳನ್ನು ಅಫಿಡವಿಟ್ ಮೂಲಕ ಸಲ್ಲಿಸಬೇಕೆಂದು ಆದೇಶಿಸಿತು.

### ಚುನಾವಣಾ ಆಯೋಗದ ಪ್ರಮುಖ ಹೆಜ್ಜೆಗಳು

ಚುನಾವಣೆಗಳ ಸುಧಾರಣೆಗಾಗಿ ಆಯೋಗವೂ ಸಹ ಹಲವಾರು ಸುಧಾರಣಾ ಕ್ರಮಗಳನ್ನು ಜಾರಿಗೆ ತಂದಿದೆ. ಅವುಗಳೆಂದರೆ – ಮಾದರಿ ಚುನಾವಣಾ ನೀತಿ ಸಂಹಿತೆಯನ್ನು 1990 ನೇ ಇಸವಿಯಿಂದಲೇ ರೂಪಿಸಿ, ಎಲ್ಲಾ ರಾಜಕೀಯ ಪಕ್ಷಗಳೂ ಸಹ ಇದನ್ನೇ ಕಡ್ಡಾಯವಾಗಿ ಪಾಲಿಸಬೇಕೆಂದು ಸೂಚನೆ ನೀಡಿದೆ. ಚುನಾವಣಾ ಶಾಸನವು ರಾಜಕೀಯ ಪಕ್ಷಗಳ ನೋಂದಣಿ ಹಾಗೂ ಅವರಿಗೆ ಚಿಹ್ನೆಗಳನ್ನು ನೀಡುವ ಕುರಿತು ಯಾವುದೇ ವಿಶೇಷ ವಿಚಾರಗಳನ್ನು ಪ್ರಸ್ತಾಪಿಸಿಲ್ಲವಾದರೂ ಸಹ, ಆಯೋಗವು 1951–52ರ ಪ್ರಥಮ ಸಾರ್ವತ್ರಿಕ ಚುನಾವಣೆಗಳಿಗೆ ಮುನ್ನವೇ ಈ ಕಾರ್ಯವನ್ನು ಪ್ರಾರಂಭಿಸಿತು.

ಮುಂದುವರೆದು,1968ನೇ ಇಸವಿಯಲ್ಲಿ ಆಯೋಗವು ಚುನಾವಣಾ ಚಿಹ್ನೆಗಳ ಮೀಸಲು ಮತ್ತು ಹಂಚಿಕೆ ಅಧ್ಯಾದೇಶವನ್ನು ಜಾರಿಗೊಳಿಸಿತು. 1970 ರ ದಶಕದ ಅಂತ್ಯದಲ್ಲಿಯೇ ಎಲ್ಲಾ ಚುನಾವಣೆಗಳನ್ನು ವಿದ್ಯುನ್ಮಾನ ಮತಯಂತ್ರಗಳ ಮೂಲಕವಾಗಿ ನಡೆಸುವ ಕುರಿತು ಆಯೋಗವು ಕ್ರಮ ಕೈಗೊಂಡಿತಾದರೂ 2000ರ ಇಸವಿಯ ನಂತರ ಇದು ಸಾಕಾರಗೊಂಡಿತು.

1990ರ ಅಂತ್ಯದ ಹೊತ್ತಿಗೆ ಎಲ್ಲಾ ಕ್ಷೇತ್ರಗಳ ಮತಪಟ್ಟಿಗಳನ್ನು ಗಣಕೀಕರಣಗೊಳಿಸಲಾಯಿತಲ್ಲದೆ ಈ ವ್ಯವಸ್ಥೆಯನ್ನು ಮತ್ತಷ್ಟು ಸುಧಾರಿಸಲು ಆಯೋಗವು ಪ್ರತೀಮತಗಟ್ಟೆಯ ವ್ಯಾಪ್ತಿಗೆ ಒಬ್ಬರು ಮತಗಟ್ಟೆ ಅಧಿಕಾರಿಯನ್ನು ನೇಮಿಸುವ ಪ್ರಕ್ರಿಯೆಗೆ ಚಾಲನೆ ನೀಡಿತು.

ಈ ಪ್ರಕ್ರಿಯೆಯಲ್ಲಿ ರಾಜಕೀಯ ಪಕ್ಷಗಳೂ ಸಹ ಭಾಗವಹಿಸಲು ಅನುವು ಮಾಡಿಕೊಟ್ಟ ಆಯೋಗವು ಮತಗಟ್ಟೆ ಏಜೆಂಟ್‌ರನ್ನು ನೇಮಿಸುವ ಅಧಿಕಾರವನ್ನು ಅವರಿಗೆ ನೀಡಿತು.

ನಕಲಿ ಮತದಾನವನ್ನು ತಡೆಯುವ ಸಲುವಾಗಿ 1993ನೇ ಇಸವಿಯಲ್ಲಿ ಆಯೋಗವು ಮತದಾರರ ಗುರುತಿನ



ಚೀಟಿಗಳನ್ನು ವಿತರಿಸುವ ವ್ಯವಸ್ಥೆಯನ್ನು ಜಾರಿಗೊಳಿಸಿತು. 1990ನೇ ಇಸವಿಯಿಂದಲೇ ಆಯೋಗವು ಕೇಂದ್ರ ಚುನಾವಣಾ ವೀಕ್ಷಕರನ್ನು ನೇಮಿಸುವ ಪ್ರಕ್ರಿಯೆಗೆ ಚಾಲನೆ ನೀಡಿತಲ್ಲದೆ, ಇವರು ಇಡೀ ಚುನಾವಣಾ ಪ್ರಕ್ರಿಯೆಯನ್ನು ಗಮನಿಸಲಾರಂಭಿಸಿದರು. ಸೂಕ್ಷ್ಮ ಮತಗಟ್ಟೆಗಳಿಗೆ ವೀಕ್ಷಕರನ್ನು ನೇಮಿಸುವ ಸಂಪೂರ್ಣ ಪ್ರಕ್ರಿಯೆಯನ್ನು ಚಿತ್ರೀಕರಿಸುವ ಹಾಗೂ ಅಗತ್ಯವಿರುವೆಡೆಗೆ ಕೇಂದ್ರೀಯ ಮೀಸಲು ಪಡೆಯನ್ನು ನಿಯೋಜಿಸುವ ಕಾರ್ಯಕ್ಕೂ ಸಹ ಚಾಲನೆ ಸಿಕ್ಕಿತು.

### ಗಮನಿಸಬೇಕಾದ ಸಂಗತಿಗಳು

ಜನಸಮುದಾಯ, ನಾಗರಿಕ ಸಂಘಟನೆಗಳು, ಸ್ವಯಂ–ಸೇವಾ ಸಂಸ್ಥೆಗಳು ಸಾಮಾಜಿಕ ಕಾರ್ಯಕರ್ತರು ಹಾಗೂ ರಾಜಕೀಯ ಪಕ್ಷಗಳೂ ಸಹ ಗಮನಿಸಬೇಕಾದ ಹಲವಾರು ಸಂಗತಿಗಳಿವೆ. ಇವುಗಳಲ್ಲಿ ಪ್ರಮುಖವಾಗಿ ಮೂರು ಕ್ಷೇತ್ರಗಳಿವೆ. ಅವುಗಳೆಂದರೆ

1. ಚುನಾವಣಾ ಆಯೋಗದ ಸ್ವಾಯತ್ತತೆಯನ್ನು ಬಲಪಡಿಸುವುದು
2. ರಾಜಕೀಯ ಕ್ಷೇತ್ರವನ್ನು ಸ್ವಚ್ಛವಾಗಿಡುವುದು
3. ರಾಜಕೀಯ ಪಕ್ಷಗಳು ಪಾರದರ್ಶಕವಾಗಿ ಕೆಲಸ ನಿರ್ವಹಿಸುವಂತೆ ಮಾಡುವುದು.

**1. ಚುನಾವಣಾ ಆಯೋಗದ ಸ್ವಾಯತ್ತತೆಯನ್ನು ಬಲಪಡಿಸುವುದು :** ಕೇಂದ್ರ ಕ್ಯಾಬಿನೆಟ್‌ನ ಶಿಫಾರಸ್ಸುಗಳ ಮೇಲೆ ರಾಷ್ಟ್ರಪತಿಗಳು ಮುಖ್ಯ ಚುನಾವಣಾ ಆಯುಕ್ತರು ಮತ್ತು ಇತರೇ ಆಯುಕ್ತರನ್ನು ನೇಮಕ ಮಾಡುತ್ತಾರೆ.

ಸರ್ಕಾರವು ಮುಖ್ಯ ಚುನಾವಣಾ ಆಯುಕ್ತರ ನೇಮಕವನ್ನು ಮಾಡುವುದರಿಂದ ಅವರ ಪ್ರಾಮಾಣಿಕತೆಯನ್ನು ಪ್ರಶ್ನಿಸಲು ಇದು ಒಂದು ಕಾರಣವಾಗುತ್ತದೆ. ಈ ಹುದ್ದೆಯ ನೇಮಕ ಪ್ರಕ್ರಿಯೆಯು ವಿಸ್ತೃತವಾಗಿರಬೇಕಲ್ಲದೆ ಯಾವುದೇ ಸಂದೇಹಗಳಿಗೆ ಎಡೆ ಮಾಡಿಕೊಡುವಂತಿರಬಾರದು. ಆದರೆ ಈ ಹುದ್ದೆಗೆ ಪದೋನ್ನತಿಯನ್ನು ನೀಡುವಾಗ, ನ್ಯಾಯಾಂಗ ವ್ಯವಸ್ಥೆಯು ಅನುಸರಿಸುವ ಸೇವಾ ಜ್ಯೇಷ್ಠತೆ ಪದ್ಧತಿಯನ್ನು ಅನುಸರಿಸಬೇಕು. ಅಂದರೆ ನಿರ್ಗಮಿತ ಮುಖ್ಯ ಚುನಾವಣಾ ಆಯುಕ್ತರು ಆ ಸಮಿತಿಯಲ್ಲಿದ್ದು, ತಮ್ಮ ಅಭಿಪ್ರಾಯವನ್ನು ನೀಡುವಂತಿರಬೇಕು. ವಾಗ್ದಂಡನೆಯ ಮೂಲಕ ಮುಖ್ಯ ಚುನಾವಣಾ ಆಯುಕ್ತರನ್ನು ಹೇಗೆ ಬದಲಾಯಿಸಲು ಬರುವುದಿಲ್ಲವೋ, ಅದೇ ಪದ್ಧತಿಯು ಇತರೆ ಆಯುಕ್ತರುಗಳಿಗೂ ಸಹ ಅನ್ವಯವಾಗಬೇಕು.

**2. ರಾಜಕೀಯ ಕ್ಷೇತ್ರವನ್ನು ಸ್ವಚ್ಛಗೊಳಿಸುವುದು :** ರಾಜಕೀಯ ಕ್ಷೇತ್ರವನ್ನು ಅಪರಾಧೀಕರಣದಿಂದ ಮುಕ್ತವಾಗಿರಿಸಲು 1998ನೇ ಇಸವಿಯಲ್ಲಿ ಆಯೋಗವು ಒಂದು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿತಲ್ಲದೆ, ಇದರಲ್ಲಿ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿರುವರೆಂದು ಹೇಳಲಾಗುವ ವ್ಯಕ್ತಿಗಳು ಚುನಾವಣೆಗಳಲ್ಲಿ ಸ್ಪರ್ಧಿಸುವಂತಿಲ್ಲ ಎಂದು ಹೇಳಿತ್ತು. ಆದರೆ, ಈ ಪ್ರಸ್ತಾವನೆಯನ್ನೇ

ವಿರೋಧಿಸಿದ ರಾಜಕೀಯ ಪಕ್ಷಗಳು, ಎದುರಾಳಿಗಳು ಉದ್ದೇಶಪೂರ್ವಕವಾಗಿ ಅಭ್ಯರ್ಥಿಗಳ ವಿರುದ್ಧ ಪ್ರಕರಣಗಳನ್ನೇ ದಾಖಲಿಸಬಹುದು. ಅಲ್ಲದೇ ಆಡಳಿತ ಪಕ್ಷವು ಈ ಅವಕಾಶವನ್ನು ನಮ್ಮ ಗೆಲುವಿಗೆ ಬಳಸಿಕೊಳ್ಳಬಹುದು ಎಂದವು ಹಾಗೂ ಇದು ವಾಸ್ತವವೂ ಹೌದು. ಆದರೆ, ಚುನಾವಣಾ ಆಯೋಗವು ಮುಂದುವರೆದು, ಮೂರು ವಿಚಾರಗಳನ್ನು ತಿಳಿಸಿತು ಅವುಗಳೆಂದರೆ,

★ ಕೊಲೆ, ದರೋಡೆ, ಅತ್ಯಾಚಾರ, ಅಪಹರಣದಂತಹ ಹೀನ ಕೃತ್ಯಗಳನ್ನು ಹೊರತು ಪಡಿಸಿ ಇತರೇ ಪ್ರಕರಣಗಳ ಆರೋಪಗಳು.

★ ಪ್ರಕರಣಗಳು ಚುನಾವಣಾ ದಿನಾಂಕಗಳಿಗಿಂತ 6 ತಿಂಗಳು ಮೊದಲು ದಾಖಲಾಗಿರಬೇಕು.

★ ನ್ಯಾಯಾಲಯಗಳಿಗೆ ದೋಷಾರೋಪ ಪಟ್ಟಿಗಳು ಸಲ್ಲಿಕೆಯಾಗಿರಬೇಕು.

ಆರೋಪಿ ವ್ಯಕ್ತಿಗಳು ಚುನಾವಣೆಗಳಲ್ಲಿ ಸ್ಪರ್ಧಿಸದಂತೆ ತಡೆಯುವುದು ಸಾರ್ವಜನಿಕ ಹಿತ ದೃಷ್ಟಿಯಿಂದ ಪ್ರಮುಖವಾದುದು. ಈ ಪ್ರಸ್ತಾವನೆಯನ್ನು ವಿರೋಧಿಸಿದವರು ಪ್ರತಿಪಾದಿಸಿದ ಅಂಶವೆಂದರೆ ನ್ಯಾಯಾಲಯವು ಅವನನ್ನು/ಳನ್ನು ದೋಷಿ ಎಂದು ತೀರ್ಮಾನಿಸುವವರೆಗೆ ಅವನು ಮುಗ್ಧನು ಹಾಗೂ ನಿರಪರಾಧಿ ಎಂಬುದು.

ಇಲ್ಲಿ ನಾನು ಇನ್ನೊಂದು ಅಂಶವನ್ನು ಪ್ರತಿಪಾದಿಸಬಯಸುತ್ತೇನೆ. ನಮ್ಮ ಜೈಲುಗಳಲ್ಲಿ ಬಂಧಿಯಾಗಿರುವವರೆಲ್ಲ ಮುಕ್ಕಾಲು ಪಾಲು ವಿಚಾರಣಾಧೀನ ಖೈದಿಗಳು ಅಂದರೆ ಮುಗ್ಧರು. ಇವರನ್ನು ಜೈಲುಗಳಲ್ಲಿ ಬಂಧಿಸಿಡುವ ಮೂಲಕವಾಗಿ ಅವರ ಚಲನೆ, ಗೌರವ ಮತ್ತು ವೃತ್ತಿಗೆ ತಡೆಯೊಡ್ಡಬಹುದಾದರೆ, ಇತರೆ ಆರೋಪಿಗಳನ್ನು ಚುನಾವಣೆಗಳಲ್ಲಿ ಸ್ಪರ್ಧಿಸದಂತೆ ತಾತ್ಕಾಲಿಕವಾಗಿರುವುದರಿಂದ ಏನೂ ಹಾನಿಯಾಗುವುದಿಲ್ಲ.

ಆದರೆ, ಚುನಾವಣಾ ವ್ಯವಸ್ಥೆಯನ್ನು ಸ್ವಚ್ಛಗೊಳಿಸುವ ಇಂತಹ ಪ್ರಮುಖ ಕೆಲಸಕ್ಕೆ ನಮ್ಮ ಸರ್ಕಾರ ಮತ್ತು ಲೋಕಸಭೆಗಳು ಸಹಮತ ವ್ಯಕ್ತಪಡಿಸುತ್ತಿಲ್ಲ. ಇದರಿಂದಾಗಿ ಲೋಕಸಭೆ ಮತ್ತು ವಿಧಾನ ಮಂಡಳಗಳಲ್ಲಿ ಉತ್ತಮ ವ್ಯಕ್ತಿಗಳು ಪ್ರವೇಶಿಸಲು ಅಡ್ಡಿಯುಂಟಾಗಿದೆ.



**3. ರಾಜಕೀಯ ಪಕ್ಷಗಳಲ್ಲಿ ಪಾರದರ್ಶಕತೆಯನ್ನು ತರುವುದು :** ದೇಶದ ಎಲ್ಲಾ ರಾಜಕೀಯ ಪಕ್ಷಗಳು ಜನತಾ ಪ್ರಾತಿನಿಧ್ಯ ಕಾಯ್ದೆ–1951ರ ಅಡಿಯಲ್ಲಿ ಚುನಾವಣಾ ಆಯೋಗದಲ್ಲಿ ನೋಂದಣಿಯಾಗುತ್ತವೆ. ಯಾವುದೇ ರಾಜಕೀಯ ಪಕ್ಷವು ಮೇಲಿನ ಕಾಯ್ದೆಯಡಿಯಲ್ಲಿ ನೋಂದಣಿಯಾಗಬೇಕಾದಲ್ಲಿ, ಆ ಕಾಯ್ದೆಯ ಪರಿಚ್ಛೇದ 29ಎ ರನ್ವಯ, ಪಕ್ಷದ ಸಂವಿಧಾನವು, ಸಮಾಜವಾದ, ಜಾತ್ಯಾತೀತ ಮತ್ತು ಪ್ರಜಾಪ್ರಭುತ್ವದ ಸಂರಕ್ಷಣೆಯ ಹಾಗೂ ದೇಶದ ಏಕತೆ ಮತ್ತು ಸಮಗ್ರತೆಯನ್ನು ಎತ್ತಿ ಹಿಡಿಯುವ ಅಂಶಗಳನ್ನು ಹೊಂದಿರಬೇಕು.

ರಾಜಕೀಯ ಪಕ್ಷಗಳು ತಮ್ಮ ನೋಂದಣಿಯ ಸಮಯದಲ್ಲಿ ನೀಡಿದ ಮುಚ್ಚಳಿಕೆಯಂತೆ, ಮೇಲಿನ ಯಾವುದಾದರೂ ವಿಷಯಗಳನ್ನು ಉಲ್ಲಂಘಿಸಿದಲ್ಲಿ, ಅವರ ನೋಂದಣಿಯನ್ನು ರದ್ದುಪಡಿಸುವ ಅಥವಾ ಅವರ ಮೇಲೆ ಕ್ರಮ ಕೈಗೊಳ್ಳುವ ಶಾಸನ ಬದ್ಧ ಅವಕಾಶಗಳು ಚುನಾವಣಾ ಆಯೋಗಕ್ಕೆ ಇಲ್ಲ. ಆಯೋಗವು ಈ ಸಂಬಂಧ ಕಾಯ್ದೆಗೆ ತಿದ್ದುಪಡಿ ತರಲು ಮತ್ತು ಆಯೋಗವನ್ನು ಬಲಪಡಿಸುವ ಸಂಬಂಧ ಸರ್ಕಾರಕ್ಕೆ ಶಿಫಾರಸ್ಸುಗಳನ್ನು ಸಲ್ಲಿಸಿದ್ದರೂ ಸಹ ಅವು ಕಾರ್ಯರೂಪಕ್ಕೆ ಬಂದಿಲ್ಲ.

ರಾಜಕೀಯ ಪಕ್ಷಗಳು ಚುನಾವಣಾ ಆಯೋಗದಲ್ಲಿ ನೋಂದಣಿ ಮಾಡಿಸಿಕೊಳ್ಳಬೇಕೆಂದರೆ ಅವುಗಳು ಆಂತರಿಕ ಪ್ರಜಾಪ್ರಭುತ್ವವನ್ನೇ ಹೊಂದಿರಬೇಕು, ತೀರ್ಮಾನಗಳನ್ನು ಚರ್ಚಿಸಿ ಕೈಕೊಳ್ಳಬೇಕು ಹಾಗೂ ಸಮಿತಿ, ಉಪಸಮಿತಿಗಳ ರಚನೆಯು ನಿರ್ದಿಷ್ಟ ಅವಧಿಯೊಳಗೆ ನಡೆಯಬೇಕೆಂಬುದು. ಆದರೆ, ಚುನಾವಣಾ ಆಯೋಗವು ಈ ಎಲ್ಲ ಅಂಶಗಳನ್ನು ಗಮನಿಸಲು ಸಾಧ್ಯವಾಗುತ್ತಿಲ್ಲ.

### ರಾಜಕೀಯ ಪಕ್ಷಗಳ ಖರ್ಚು – ವೆಚ್ಚಗಳ ಪಾರದರ್ಶಕತೆ

ಪ್ರಸ್ತುತ, ಶಾಸನವು ಅಭ್ಯರ್ಥಿಗಳ ಚುನಾವಣಾ ವೆಚ್ಚ ಕುರಿತು ನಿಗಾವಹಿಸುತ್ತದೆಯೇ ಹೊರತು ಪಕ್ಷಗಳ ಖರ್ಚು–ವೆಚ್ಚಗಳನ್ನಲ್ಲ. ಅವುಗಳು ಸಂಗ್ರಹಿಸುವ ದೇಣಿಗೆ ಮತ್ತು ಖರ್ಚು ವೆಚ್ಚಗಳ ಕುರಿತಾದ ಯಾವುದೇ ವಿವರಗಳು ಸಾರ್ವಜನಿಕರಿಗೆ ಲಭ್ಯವಾಗುವುದಿಲ್ಲ. ಇವರಲ್ಲಿ ಪಾರದರ್ಶಕತೆಯನ್ನು ತರುವ ಸಲುವಾಗಿ ಖರ್ಚು ವೆಚ್ಚಗಳ ಪರಿಶೀಲನೆಯು ಆಯೋಗವು ಗುರ್ತಿಸಿರುವ ಲೆಕ್ಕಪರಿಶೋಧಕರಿಂದ ಆಗಬೇಕು ಹಾಗೂ ವಿವರಗಳು ಸಾರ್ವಜನಿಕರಿಗೆ ಲಭ್ಯವಾಗಬೇಕು ಎಂಬು ಶಿಫಾರಸ್ಸನ್ನು ಸರ್ಕಾರಕ್ಕೆ ಮಾಡಿತ್ತಾದರು ಅದು ಕಾರ್ಯರೂಪಕ್ಕೆ ಬಂದಿಲ್ಲ.

### ಅಭ್ಯರ್ಥಿಗಳನ್ನು ತಿರಸ್ಕರಿಸುವ ಹಕ್ಕು

ದೇಶದಾದ್ಯಂತ ಸಮಾಜ ಕಾರ್ಯಕರ್ತರು, ಮತದಾರರಿಗೆ ತಮ್ಮ

ಅಭ್ಯರ್ಥಿಯು ಸೂಕ್ತವಲ್ಲ ಎಂದು ಕಂಡು ಬಂದರೆ ಅವರನ್ನು ತಿರಸ್ಕರಿಸುವ ಹಕ್ಕನ್ನು ನೀಡಬೇಕು ಎಂದು ಪ್ರತಿಪಾದಿಸಿದ್ದರ ಫಲವಾಗಿ ಉಚ್ಚ ನ್ಯಾಯಾಲಯವು 2013ರಲ್ಲಿ ಈ ಅವಕಾಶವನ್ನು 'NOTA' (None of the above) ಒದಗಿಸುವ ತೀರ್ಪು ನೀಡಿತು. ಪ್ರತಿ ವಿದ್ಯುನ್ಮಾನ ಮತಯಂತ್ರಗಳಲ್ಲಿ 'NOTA' ಗುಂಡಿಯನ್ನು ಒದಗಿಸುವುದರೊಂದಿಗೆ ಮತದಾರರಿಗೆ ಈ ಆಯ್ಕೆಯ ಅವಕಾಶವನ್ನು ನೀಡುವುದಾಗಿದೆ.


ಇಲ್ಲಿ ಗಮನಿಸಬೇಕಾದ ಅಂಶವೆಂದರೆ 'NOTA' ಆಯ್ಕೆಯು ಅಭ್ಯರ್ಥಿಯನ್ನು ತಿರಸ್ಕರಿಸುವ ಹಕ್ಕನ್ನು ಮತದಾರರಿಗೆ ನೀಡುವುದಿಲ್ಲ. ಉದಾಹರಣೆಗೆ ಒಬ್ಬ ಅಭ್ಯರ್ಥಿಯ ವಿರುದ್ಧ 99 ಜನರು 'NOTA' ಚಲಾಯಿಸಿ, ಒಬ್ಬ ಮತದಾರರು ಪರವಾಗಿ ಮತವನ್ನು ಚಲಾಯಿಸಿದರೆ ಆ ಅಭ್ಯರ್ಥಿಯು ಆಯ್ಕೆಯಾಗುತ್ತಾನೆ. ಆಗ 99 ಮತಗಳು ಅಸಿಂಧುವಾಗುತ್ತವೆ. ಚುನಾವಣಾ ಆಯೋಗವು 'NOTA' ಆಯ್ಕೆಯ ಶಿಫಾರಸ್ಸು ಮಾಡುವಾಗ, ಜನರು ಮತದಾನ ಪ್ರಕ್ರಿಯೆಯಲ್ಲಿ ಭಾಗವಹಿಸುವಂತಾಗಲಿ ಎಂಬ ಅಂಶದ ಕುರಿತು ಗಮನ ಹರಿಸಿತ್ತು.

### ಪ್ರತಿನಿಧಿಗಳನ್ನು ವಾಪಾಸು ಕರೆಸಿಕೊಳ್ಳುವ ಹಕ್ಕು

ಪ್ರತಿನಿಧಿಗಳನ್ನು ವಾಪಾಸು ಕರೆಸಿಕೊಳ್ಳುವ ಹಕ್ಕು ಮತ್ತೊಂದು ಚುನಾವಣಾ ಸುಧಾರಣಾ ಕ್ರಮವಾಗಿದ್ದು, ಶ್ರೀ ಅಣ್ಣಾ ಹಜಾರೆ ಮತ್ತಿತರೆ ಸಾಮಾಜಿಕ ಕಾರ್ಯಕರ್ತರು ಈ ಅಂಶವನ್ನು ಪ್ರತಿಪಾದಿಸುತ್ತಿದ್ದಾರೆ. ಅಂದರೆ ಆಯ್ಕೆಯಾದ ಪ್ರತಿನಿಧಿಯು ತಮಗೆ ಸೂಕ್ತವಲ್ಲ ಎಂಬುದು ಮತದಾರರಿಗೆ ಮನವರಿಕೆಯಾದರೆ, ಅವರು ಆ ಪ್ರತಿನಿಧಿಯನ್ನು ಈ ಪ್ರಕ್ರಿಯೆಯಲ್ಲಿ ವಾಪಾಸು ಕರೆಸಿಕೊಳ್ಳಬಹುದು. ಇದರಿಂದಾಗಿ ಪರಾಜಿತ ಅಭ್ಯರ್ಥಿಯು ಆಯ್ಕೆಯಾಗುವ ಪ್ರಬಲ ಅವಕಾಶಗಳನ್ನು ನೀಡಿದಂತಾಗುತ್ತದೆ. ಅಂದರೆ ಚುನಾಯಿತ ಅಭ್ಯರ್ಥಿಗೆ ತಾನು ವಸ್ತು–ವಿಷಯವನ್ನು ಅರಿತುಕೊಂಡು, ಕಾರ್ಯೋನ್ಮುಖವಾಗಲು ಅವಕಾಶವನ್ನು ನೀಡುವಂತಾಗುವುದಿಲ್ಲ.

### ಕಡ್ಡಾಯ ಮತದಾನ

ಚುನಾವಣಾ ಸುಧಾರಣೆಯಲ್ಲಿ 'ಕಡ್ಡಾಯ ಮತದಾನ' ವಿಷಯವು ಆಗಿಂದಾಗ್ಗೆ




ಚರ್ಚೆಯಾಗುತ್ತಿದೆ. ಇದರಿಂದಾಗಿ ನಗರ ಪ್ರದೇಶದ ಹಾಗೂ ಇತರೆ ಮತದಾರನ ನಿರಾಸಕ್ತಿಯನ್ನು ಹೋಗಲಾಡಿಸಬಹುದು ಎಂಬುದು. ಆದರೆ ಬಲವಂತದ ಕ್ರಿಯೆ ಮತ್ತು ಸಂವಿಧಾನಗಳು ಒಟ್ಟಿಗೆ ಸಾಗಲು ಆಗುವುದಿಲ್ಲ. ಆದುದರಿಂದ ಆಯೋಗವು ಮತದಾರರ ಜಾಗೃತಿ ಕಾರ್ಯಕ್ರಮಗಳ ಮೂಲಕವಾಗಿ ಅವರನ್ನೇ ಮತದಾನ ಪ್ರಕ್ರಿಯೆಯಲ್ಲಿ ಭಾಗವಹಿಸುವಂತೆ ಮಾಡಬಹುದು ಎಂಬ ನಂಬಿಕೆಯಿಂದ 2010ನೆ ಇಸವಿಯಲ್ಲಿ ದೇಶದ 22 ರಾಜ್ಯಗಳಲ್ಲಿ ಜರುಗಿದ ವಿಧಾನಸಭಾ ಚುನಾವಣೆಗಳಲ್ಲಿ ಈ ಪ್ರಯೋಗವನ್ನು ಪ್ರಾರಂಭಿಸಿತು. ಅಲ್ಲದೆ, 2014ರ ಸಾರ್ವತ್ರಿಕ ಚುನಾವಣೆಗಳನ್ನು ಕೆಲವು ಪ್ರದೇಶಗಳಲ್ಲಿ ಕೆಲವು ಪ್ರದೇಶಗಳಲ್ಲಿ ಮತದಾನವು ಶೇ. 80ಕ್ಕೂ ಅಧಿಕಾಗಿ ದಾಖಲಾಯಿತು. ಈ ಕ್ರಮಗಳಿಂದಾಗಿ, 60 ವರ್ಷಗಳ ಚುನಾವಣಾ ಇತಿಹಾಸದಲ್ಲಿ ದಾಖಲಾಗದ ಮತದಾನವು ಸಾಧ್ಯವಾಯಿತು. ನನ್ನ ಪ್ರಕಾರ ಜನಸಮುದಾಯವನ್ನು ಒತ್ತಾಯಿಸುವುದರ ಬದಲಿಗೆ ಪ್ರೇರೇಪಿಸುವುದರಿಂದ, ಹಲವಾರು ಉತ್ತಮ ಕೆಲಸಗಳಲ್ಲಿ ಅವರು ಭಾಗಯಾಗುವಂತೆ ಮಾಡಬಹುದು.

### ಎಫ್‌ಪಿಟಿಪಿ ಪದ್ಧತಿಯ ಪ್ರಸ್ತುತತೆ

ಕಡಿಮೆ ಮತದಾನದ ಪ್ರಮಾಣದಲ್ಲಿಯೂ ಸಹ ಅಭ್ಯರ್ಥಿಗಳು ಕೇವಲ 10 ರಿಂದ 20 ಶೇಕಡಾ ಮತ ಪಡೆದು ಆಯ್ಕೆಯಾಗುವುದು ಇಂದಿನ ಚುನಾವಣಾ ವ್ಯವಸ್ಥೆಯಲ್ಲಿ ಸಾಮಾನ್ಯವಾಗಿದ್ದು, ಇದೂ ಸಹ ಗಂಭೀರವಾಗಿ ಯೋಚಿಸಬೇಕಾದ ಸಂಗತಿಯಾಗಿದೆ. ಪ್ರಸ್ತುತ ಚಾಲ್ತಿಯಲ್ಲಿರುವ ಎಫ್‌ಪಿಟಿಪಿ ಪದ್ಧತಿಯನ್ನು ಪ್ರಶ್ನಿಸಬೇಕಾದಂತಹ ಪರಿಸ್ಥಿತಿಯು ಇದೀಗ ಉದ್ಭವಿಸಿದೆ.

ಲೋಕಸಭೆ ಮತ್ತು ವಿಧಾನ ಸಭೆಗಳಿಗೆ ಶಾಸನ ಸಭೆಗಳ ಕೆಳಮನೆಗಳಿಗೆ ನೇರ ಚುನಾವಣೆಗಳು ನಡೆಯುತ್ತವೆ. ಈ ಚುನಾವಣೆಗಳಲ್ಲಿ ಎಫ್‌ಪಿಟಿಪಿ ಪದ್ಧತಿಯನ್ನು ಅನುಸರಿಸಲಾಗುತ್ತದೆ. ರಾಜ್ಯ ಸಭೆ ಮತ್ತು ವಿಧಾನ ಪರಿಷತ್ತುಗಳಿಗೆ ಚುನಾವಣೆಗಳು ಏಕ ವರ್ಗಾವಣೆಯ ಮತದ ಮೂಲಕ ಸರಾಸರಿ ಪ್ರತಿನಿಧಿತ್ವ ಪದ್ಧತಿಯ ಪ್ರಕಾರ ನಡೆಯುತ್ತವೆ. ಭಾರತದ ಎಫ್‌ಪಿಟಿಪಿ ಪದ್ಧತಿಯಲ್ಲಿ ಮತದಾರರು ತಮ್ಮ ಕ್ಷೇತ್ರದಲ್ಲಿ ಸ್ಪರ್ಧಿಸಿರುವ ಅಭ್ಯರ್ಥಿಗಳಲ್ಲಿ ಯಾರಾದರೂ ಒಬ್ಬರ ಪರ ಮತವನ್ನು ಚಲಾಯಿಸುತ್ತಾರೆ.

ಚಲಾವಣೆಯಾದ ಮತಗಳಲ್ಲಿ ಯಾವ ಅಭ್ಯರ್ಥಿಯು ಅತ್ಯಧಿಕ ಮತಗಳನ್ನು ಗಳಿಸಿಕೊಳ್ಳುತ್ತಾರೋ, ಅವರನ್ನು ವಿಜೇತರೆಂದು ಘೋಷಿಸಲಾಗುತ್ತದೆ.

ಇಲ್ಲಿ ವಿಜೇತ ಅಭ್ಯರ್ಥಿಯ ಸರಾಸರಿ ಮತಗಳು ಪ್ರಸ್ತುತವಾಗಿರುವುದಿಲ್ಲ. ವಿಜೇತರು ಸ್ಪಷ್ಟವಾದ ಬಹುಮತವನ್ನು ಪಡೆದಿರಬೇಕೆಂದೇನೂ ಇರುವುದಿಲ್ಲ. ಎರಡು ಅಥವಾ ಮೂರು ಅಭ್ಯರ್ಥಿಗಳು ಸಮಪ್ರಮಾಣದ ಮತಗಳನ್ನು ಪಡೆದಲ್ಲಿ, ಅವರಲ್ಲಿ ಒಬ್ಬರನ್ನು ಲಾಟರಿ ಮೂಲಕ ಆಯ್ಕೆ

ಮಾಡಲಾಗುತ್ತದೆ. ಎಫ್‌ಪಿಟಿಪಿ ಪದ್ಧತಿಯ ಅನುಕೂಲಗಳು ಮುಂದಿನಂತಿವೆ.

- ಎಣಿಕೆಯು ಸುಲಭವಾಗುತ್ತದೆ.
- ವಿಜೇತರನ್ನು ತಕ್ಷಣದಲ್ಲಿಯೇ ತಿಳಿದುಕೊಳ್ಳಬಹುದು.
- ಮತದಾರರು ತಮ್ಮ ಆಯ್ಕೆಯ ಪ್ರತಿನಿಧಿಯನ್ನು ಚುನಾಯಿಸಬಹುದು.
- ಪ್ರತೀ ಕ್ಷೇತ್ರದಲ್ಲಿ ತನ್ನ ಮತದಾರರಿಗೆ ಉತ್ತರದಾಯಿತ್ವವನ್ನು ಹೊಂದಿರುವ ಪ್ರತಿನಿಧಿಗಳ ಆಯ್ಕೆಯಾಗುತ್ತದೆ.
- ಪ್ರತಿ ಅಭ್ಯರ್ಥಿಯೂ ಸಹ ತನ್ನ ಮತಕ್ಷೇತ್ರದಲ್ಲಿ ತನಗಿರುವ ಬೆಂಬಲವನ್ನು ಅರಿಯಲು ಸಾಧ್ಯವಾಗುತ್ತದೆ.
- ರಾಜ್ಯ ಮತ್ತು ಕೇಂದ್ರಗಳಲ್ಲಿ ಸ್ಥಿರ ಸರ್ಕಾರಗಳನ್ನು ನೀಡಲು ಈ ಪದ್ಧತಿಯಿಂದ ಸಹಾಯಕವಾಗುತ್ತದೆ.

**ಪ್ರಮಾಣಾನುಸಾರ ಪ್ರತಿನಿಧಿತ್ವ ಪದ್ಧತಿ**

ಎಫ್‌ಪಿಟಿಪಿ ಪದ್ಧತಿಯನ್ನು ವಿರೋಧಿಸುವವರು, ತಮ್ಮ ನಿಖರವಾದ ಅಭಿಪ್ರಾಯಗಳನ್ನು ತಿಳಿಸದಿದ್ದರೂ ಸಹ ಪ್ರಮಾಣಾನುಸಾರ ಪ್ರತಿನಿಧಿತ್ವ ಪದ್ಧತಿಯ ಪರವಾಗಿ ಮಾತನಾಡುತ್ತಾರೆ. 2014ರ ಸಾರ್ವತ್ರಿಕ ಚುನಾವಣೆಗಳಲ್ಲಿ ಬಹುಜನ ಸಮಾಜ ಪಕ್ಷವು ಶೇ. 20 ಮತಗಳನ್ನು ಗಳಿಸಿಯೂ ಸಹ ತನ್ನ ಒಬ್ಬ ಅಭ್ಯರ್ಥಿಯೂ ಸಹ ಲೋಕಸಭೆಗೆ ಆಯ್ಕೆಯಾಗದ ಹಿನ್ನೆಲೆಯಲ್ಲಿ ಈ ಪದ್ಧತಿಯ ಪರವಾಗಿ ಧ್ವನಿಯು ಹೆಚ್ಚಾಗುತ್ತಿದೆ. ಇದರಿಂದಾಗಿ ಅಸಂಗತ ಸನ್ನಿವೇಶವು ಸೃಷ್ಟಿಯಾಗುವ ಸಾಧ್ಯತೆಗಳು ಹೆಚ್ಚಿದೆ. ಪ್ರಮಾಣಾನುಸಾರ ಪ್ರತಿನಿಧಿತ್ವ ಪದ್ಧತಿಯ ಹಲವು ಭಿನ್ನತೆಗಳನ್ನು ಹೊಂದಿದೆ. ಅವುಗಳಲ್ಲಿ ಒಂದು ಪ್ರಮುಖ ಭಿನ್ನತೆಯೆಂದರೆ, ರಾಜ್ಯ ಸಭೆ ಅಥವಾ ವಿಧಾನಪರಿಷತ್ತುಗಳ ಚುನಾವಣೆಗಳಲ್ಲಿ ಅನುಸರಿಸುವ ಏಕವರ್ಗಾವಣೆ ಮತ ಪದ್ಧತಿಯಾಗಿದೆ.

ಚುನಾವಣಾ ಲಾಭಕ್ಕಾಗಿ ಧರ್ಮವನ್ನು ಬಳಸಿಕೊಳ್ಳುವುದು ಮತ್ತೊಂದು ಗಮನಿಸಬೇಕಾದ ಸಂಗತಿಯಾಗಿದೆ.

ರಾಜಕೀಯ ಪಕ್ಷಗಳು ತಮ್ಮ ಲಾಭಕ್ಕಾಗಿ ಧರ್ಮವನ್ನು ಬಳಸುವುದರ ಕುರಿತು ನಿರ್ಬಂಧ ಹೇರುವ ಸಲುವಾಗಿ 1994 ನೇ ಇಸವಿಯಲ್ಲಿ ಮಸೂದೆಯೊಂದನ್ನು ಮಂಡಿಸಲಾಗಿದೆ. (ಆರ್.ಪಿ. (ಎರಡನೇ ತಿದ್ದುಪಡಿ) ಮಸೂದೆ, 1994).

1996ನೇ ಇಸವಿಯಲ್ಲಿ ಲೋಕಸಭೆಯು ವಿಸರ್ಜನೆಯಾಗಿದ್ದ ಪರಿಣಾಮವಾಗಿ ಸದರೀ ಮಸೂದೆಯು ಪಾಸಾಗಲಿಲ್ಲ. ಧರ್ಮಾಂದತೆಯು ನ್ಯಾಯಸಮ್ಮತ ಚುನಾವಣೆಗಳಿಗೆ ಅಡ್ಡಿಯುಂಟು ಮಾಡುತ್ತದೆ ಎಂಬ ವಿಷಯವನ್ನೇ ಆಯೋಗವು ಒತ್ತಿ ಹೇಳಿತ್ತು. ಚುನಾವಣಾ ಸಂದರ್ಭಗಳಲ್ಲಿ ಅಭ್ಯರ್ಥಿಗಳು ಮಾಡುವ ಪ್ರಚೋದನಕಾರಿ ಭಾಷಣಗಳ ಫಲವಾಗಿ ಉಂಟಾಗುವ ಕೋಮುಗಲಭೆಗಳನ್ನು ಸಹ ಗಂಭೀರವಾಗಿ ಪರಿಗಣಿಸಬೇಕಾಗಿದೆ.

'ಹಣ ಪಾವತಿ ವರದಿ'ಗಳಂತಹ ಚುನಾವಣಾ ಅಪರಾಧಿಗಳನ್ನು ನಿಯಂತ್ರಿಸಲು ಕಾಯ್ದೆಗೆ ತಿದ್ದುಪಡಿ ತರುವುದು ಹಣ ಪಡೆದು ಪ್ರಕಟಿಸುವ ವರದಿಗಳು ಇತ್ತೀಚೆಗೆ ಸಾಮಾನ್ಯವಾಗಿವೆ. ಇದನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಪ್ರಜಾ ಪ್ರತಿನಿಧಿ ಕಾಯ್ದೆ 1951ಕ್ಕೆ ತಿದ್ದುಪಡಿ ತರಬೇಕೆಂದು ಆಯೋಗವು ಪ್ರತಿಪಾದಿಸುತ್ತಲೇ ಬಂದಿದೆ.

ಜನ ಪ್ರಾತಿನಿಧ್ಯ ಕಾಯ್ದೆ 1951ರ ಅಧ್ಯಾಯ 3, ಭಾಗ 7ರಲ್ಲಿ ಪ್ರಸ್ತಾಪಿಸಿರುವಂತೆ 'ಹಣಕಾಸು ವರದಿ'ಗಳು ಶಿಕ್ಷಾರ್ಹ ಅಪರಾಧವಾಗಿದ್ದು, ಇದರಂತೆ ಕನಿಷ್ಠ ಎರಡು ಸೆರೆವಾಸವನ್ನು ವಿಧಿಸಲು ಅವಕಾಶವಿದೆ. ಚುನಾವಣಾ ಅಕ್ರಮಗಳಿಗೆ ವಿಧಿಸುವ ಶಿಕ್ಷೆಯ ಪ್ರಮಾಣವನ್ನೇ ಹೆಚ್ಚಿಸಬೇಕಾಗಿದೆ. ಭಾರತ ದಂಡ ಸಂಹಿತೆಯ 171 ಬಿ ಮತ್ತು 171 ಸಿ ಸೆಕ್ಷನ್‌ಗಳಲ್ಲಿ ಚುನಾವಣೆಗಳಲ್ಲಿ ಪ್ರಭಾವ ಮತ್ತು ಲಂಚಗುಳಿತನಗಳು ಚುನಾವಣಾ ಅಪರಾಧಗಳಾಗುತ್ತವೆ. ಈ ಅಪರಾಧಗಳು ಸ್ವಭಾವದಲ್ಲಿ ಗುರುತರವಾಗಿಲ್ಲದೇ ಇರುವುದರಿಂದ ಅಸಮರ್ಪಕವಾಗಿವೆ. ಸೆಕ್ಷನ್ 171 – ಜಿ ಪ್ರಕಾರ ಚುನಾವಣಾ ಫಲಿತಾಂಶಗಳಿಗೆ ಸಂಬಂಧಿಸಿದಂತೆ ತಪ್ಪು ವರದಿಗಳನ್ನು ಪ್ರಕಟಿಸುವುದು ಒಂದು ಅಪರಾಧವಾಗಿದ್ದು, ಇದಕ್ಕೆ ದಂಡವನ್ನು ವಿಧಿಸಲು ಮಾತ್ರವೇ ಅವಕಾಶವಿದೆ.

ಸೆಕ್ಷನ್ 171 ಹೆಚ್ ದ ಅಡಿಯಲ್ಲಿ, ಒಬ್ಬ ಅಭ್ಯರ್ಥಿಯ ಪರವಾಗಿ ಆತನ ಚುನಾವಣಾ ಲಾಭದ ಸಲುವಾಗಿ ಮಾಡುವ ಕೆಲಸ / ವರದಿಗಳು ಶಿಕ್ಷಾರ್ಹವಾಗಿದ್ದು, ಅಂತಹ ಕೃತ್ಯಗಳಿಗೆ ಕೇವಲ ರೂ. 500/– ಅನ್ನು ದಂಡವಾಗಿ ವಿಧಿಸಲು ಮಾತ್ರವೇ ಅವಕಾಶವಿದೆ. 60 ವರ್ಷಗಳ ಹಿಂದೆ ಈ ಮೊತ್ತಕ್ಕೆ ಸ್ವಲ್ಪ ಮೌಲ್ಯವಿತ್ತು. ಆದರೆ ಈಗಿನ ಸನ್ನಿವೇಶಗಳಲ್ಲಿ ಇದು ಹಾಸ್ಯಾಸ್ಪದವಾಗಿದೆ.

ಈ ಶಿಕ್ಷೆಗಳು 1920ರನೇ ಇಸವಿಯಲ್ಲಿ ಜಾರಿಗೊಂಡವುಗಳಾಗಿದ್ದು, ನ್ಯಾಯಸಮ್ಮತ ಚುನಾವಣೆಗಳಿಗಾಗಿ ಮೇಲಿನ ನಾಲ್ಕು ಸೆಕ್ಷನ್‌ಗಳಿಗೆ ತಿದ್ದುಪಡಿ ತಂದು, ಅಪವಾದಗಳನ್ನು ಗುರುತರವೆಂದು ಪರಿಗಣಿಸಿದಾಗ ಮಾತ್ರ, ಉದ್ದೇಶವು ಈಡೇರಲು ಸಾಧ್ಯವಾಗುತ್ತದೆ.

ಸರ್ಕಾರಗಳು ಚುನಾವಣಾ ಪೂರ್ವ 6 ತಿಂಗಳುಗಳ ಅವಧಿಯಲ್ಲಿ ತಮ್ಮ ಸಾಧನೆಗಳ ಕುರಿತು ಯಾವುದೇ ಪ್ರಕಾರದ ಜಾಹಿರಾತುಗಳನ್ನು ನೀಡುವುದನ್ನು ನಿರ್ಬಂಧಿಸಬೇಕು. ಆದರೆ, ಆರೋಗ್ಯ ಬರ ಮತ್ತು ಪ್ರವಾಹದ ಕುರಿತು ಜಾಗೃತಿ ಜಾಹಿರಾತುಗಳಿಗೆ ವಿನಾಯಿತಿ ಇರಬೇಕು.

ಕಳೆದ ನಾಲ್ಕು ದಶಕಗಳ ಅವಧಿಯಲ್ಲಿ, 7 ರಾಷ್ಟ್ರ ಮಟ್ಟದ ಸಮಿತಿಗಳು ಮತ್ತು ಆಯೋಗಗಳು ಚುನಾವಣಾ ವ್ಯವಸ್ಥೆಯನ್ನು ಶುದ್ಧೀಕರಿಸುವ ಸಲುವಾಗಿ ಹಲವಾರು ಶಿಫಾರಸ್ಸುಗಳನ್ನು ಮಾಡಿವೆ. ಚುನಾವಣಾ ಆಯೋಗವು ಸಹ ಕಾಲಾನುಕಾಲ ತನ್ನ ಶಿಫಾರಸ್ಸುಗಳನ್ನು ನೀಡಿದ್ದು, ಅವುಗಳ ಅನುಷ್ಠಾನಕ್ಕಾಗಿ ಹಲವಾರು ಜ್ಞಾಪನಾ ಪತ್ರಗಳನ್ನು ಸಹ ಕಳುಹಿಸಿದೆ.

ಮೇಲಿನ ಎಲ್ಲಾ ವಿಚಾರಗಳೂ ಸಹ ಕಳೆದ 10–20 ವರ್ಷಗಳಲ್ಲಿ ಸರ್ಕಾರದ ಮಟ್ಟದಲ್ಲಿ ಯಾವುದೇ ಕ್ರಮವಿಲ್ಲದೆ ಉಳಿದು ಹೋಗಿವೆ. ಏತನ್ಮಧ್ಯೆ, ರಾಜಕೀಯ ವ್ಯವಸ್ಥೆಯ ಕುರಿತು ಜನರಲ್ಲಿ ನಂಬಿಕೆಯು ಕಡಿಮೆಯಾಗುತ್ತಲಿವೆ.

ರಾಜಕೀಯ ವ್ಯವಸ್ಥೆಯ / ಪ್ರಜಾಪ್ರಭುತ್ವದ ಕುರಿತು ಜನಸಾಮಾನ್ಯರ ಮನೋಭಾವನೆಯು ಇನ್ನಷ್ಟು ಕಡಿಮೆಯಾಗುವ ಮೊದಲೇ ಈ ಕುರಿತು ಸರ್ಕಾರವು ವಿಸ್ತೃತ ಕ್ರಮಗಳನ್ನು ಕೈಗೊಳ್ಳಬೇಕು. ಗೋಡೆ ಬರಹವು ಸ್ಪಷ್ಟವಾಗಿರಬಹುದು. ಆದರೆ, ಅದರ ನ್ಯಾಯ ಸಮ್ಮತ ಅನುಷ್ಠಾನವನ್ನು ನಾವು ನಿರ್ವಹಿಸಬೇಕಾಗಿದೆ. ❑

# ಅಭ್ಯರ್ಥಿಗಳು ಮತ್ತು ನಿಯಂತ್ರಣ

ಕೌಶಿಕ್ ಭಟ್ಟಾಚಾರ್ಯ
ಕನ್ನಡಕ್ಕೆ : ಸಿ ಜಿ. ಸೋಮಶೇಖರ್



1996ರ
ಸಂಸದೀಯ ಚುನಾವಣೆ ವೇಳೆ,
ಆಂಧ್ರಪ್ರದೇಶದ
ನಲ್ಗೊಂಡಾ ಕ್ಷೇತ್ರ
ಮತ್ತು
ಕರ್ನಾಟಕದ ಬೆಳಗಾವಿ ಕ್ಷೇತ್ರದಲ್ಲಿ
ಕ್ರಮವಾಗಿ
480 ಮತ್ತು 456
ಅಭ್ಯರ್ಥಿಗಳು ಕಣಕ್ಕಿಳಿದಿದ್ದರು.
ಅದೇ ವರ್ಷ
ತಮಿಳುನಾಡಿನಲ್ಲಿ ನಡೆದ
ವಿಧಾನಸಭೆ ಚುನಾವಣೆಯಲ್ಲಿ
ಮೊಡಕುರಿಚಿ
ವಿಧಾನಸಭಾ ಕ್ಷೇತ್ರದಲ್ಲಿ
1033 ಮಂದಿ
ಕಣದಲ್ಲಿದ್ದರು.

ಭಾರತದಲ್ಲಿ 16ನೇ ಲೋಕಸಭೆ ಚುನಾವಣೆ ಇತ್ತೀಚೆಗಷ್ಟೇ ಪೂರ್ಣಗೊಂಡಿದೆ, ಹೊಸ ಸರ್ಕಾರದ ರಚನೆಯೂ ಆಗಿದೆ. ಆಗಾಗ್ಗೆ ಇಂತಹ ಚುನಾವಣೆಗಳನ್ನು ನಡೆಸುವುದು, ಈ ಮೂಲಕ ಅಧಿಕಾರದಲ್ಲಿರುವ ಅಥವಾ ಇತರೆ ರಾಜಕೀಯ ಪಕ್ಷಗಳ ಸೋಲಿಗೆ ಕಾರಣವಾಗುವುದು, ಸ್ವಾತಂತ್ರ್ಯಾನಂತರದ ಭಾರತದ ಪ್ರಮುಖ ಘಟನೆಗಳಲ್ಲೊಂದು ಎನ್ನಬಹುದು. ಇಂತಹ ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆಗಳು ಭಾರತದ ಪ್ರಜಾಪ್ರಭುತ್ವದ ಬಗ್ಗೆ ಕೇವಲ ಭಾರತೀಯರಿಗೆ ಮಾತ್ರವಲ್ಲ, ಇಡೀ ವಿಶ್ವಕ್ಕೇ ಸಾಕಷ್ಟು ವಿಶ್ವಾಸಾರ್ಹತೆ ಮೂಡಿಸಿವೆ.

ತಮ್ಮ ತಮ್ಮ ಪ್ರಜಾಸತ್ತೆಯನ್ನು ಬಲಿಷ್ಟಗೊಳಿಸಬೇಕು ಎಂದು ಹಂಬಲಿಸುತ್ತಿರುವ ಅನೇಕ ರಾಷ್ಟ್ರಗಳು ಭಾರತದ ಚುನಾವಣಾ ಆಯೋಗ (ಇಸಿಐ) ಮತ್ತು ಅದು ಕಾರ್ಯನಿರ್ವಹಿಸುವ ಕಾನೂನಿನ ಚೌಕಟ್ಟನ್ನು ಮಾನದಂಡವಾಗಿ ಪರಿಗಣಿಸಿವೆ.

ಚುನಾವಣೆ ಸಂದರ್ಭದಲ್ಲಿ ಬಾಜಿ, ಪಣದಂತಹ ಕಾರ್ಯಗಳು ಭಾರಿ ಪ್ರಮಾಣದಲ್ಲಿ ನಡೆಯುತ್ತವೆ. ಈ ಸತ್ಯ ಎಲ್ಲ ರಾಜಕೀಯ ಪಕ್ಷಗಳು ಹಾಗೂ ಗುಂಪುಗಳಿಗೂ ಗೊತ್ತು. ಭಾರತದಲ್ಲಿ ಚುನಾವಣೆಯನ್ನು ನಡೆಸುವ ಸಾಂಸ್ಥಿಕ ರಚನೆ ಉತ್ತಮವಾಗಿದ್ದರೂ, ಇನ್ನೂ ಸುಧಾರಣೆಗೆ ಅವಕಾಶವಿದೆ. ಬಾಹ್ಯ ವಾತಾವರಣ ಬದಲಾದಂತೆ, ಅಕ್ರಮ ಮತ್ತು ಕ್ರಿಮಿನಲ್ ಚಟುವಟಿಕೆಗಳೂ ಬದಲಾಗುತ್ತವೆ. ಹಾಗಾಗಿ ಪರಿಣಾಮಕಾರಿತ್ವ ಬರಬೇಕೆಂದರೆ, ಇಂತಹ ಚಟುವಟಿಕೆಗಳಿಗೆ ಕಡಿವಾಣ ಹಾಕುವ ನಿಯಂತ್ರಣ ಪ್ರಕ್ರಿಯೆ ಆಗಬೇಕು. ನಿರಂತರ ನಿಗಾ ಮತ್ತು ಸುಧಾರಣೆಯಿಂದ ಮಾತ್ರ ಇದು ಸಾಧ್ಯ.

ಈ ಲೇಖನ, ಭಾರತದ ಚುನಾವಣಾ ಸುಧಾರಣೆ ಬಗೆಗಿನ ಸಾರಾಂಶವೂ ಅಲ್ಲ, ತೀಕ್ಷ್ಣ ವಿಮರ್ಶೆಯೂ ಅಲ್ಲ. ಅನೇಕ ತಜ್ಞರು ಮತ್ತು ತಜ್ಞರ ತಂಡಗಳು ಈ ವಿಚಾರದ ಬಗ್ಗೆ ಮಾತನಾಡಿವೆ, ಪರಿಣಾಮ ಈ ಬಗೆಗಿನ ಶೈಕ್ಷಣಿಕ ಸಾಹಿತ್ಯಗಳು ಹೇರಳವಾಗಿ ಹೊರಬಂದಿವೆ. ಮೇಲೆ ಹೇಳಿರುವ ದೌರ್ಬಲ್ಯಗಳ ಸಾರಾಂಶ ಹಾಗೂ ಅವುಗಳನ್ನು ತಡೆಯಲು ಬೇಕಾದ ನೀತಿಗಳ ಬಗ್ಗೆ ಭಾರತೀಯ ಚುನಾವಣಾ ಸುಧಾರಣೆಗಳ ಹಿನ್ನೆಲೆ ಟಿಪ್ಪಣಿಗಳಲ್ಲಿ ಲಭ್ಯವಿದೆ. ಯಾವುದೇ ಪ್ರಜಾಸತ್ತೆಯಲ್ಲೂ, ಸುಧಾರಣಾ ಪ್ರಯತ್ನಗಳನ್ನು ಮುಕ್ತವಾಗಿ ಚರ್ಚಿಸಬೇಕು ಹಾಗೂ ಸಮಾಲೋಚನೆ ನಡೆಸಬೇಕು. ಇದರ ಮುಂದುವರಿದ ಭಾಗವಾಗಿ ಹಿನ್ನೆಲೆ ಟಿಪ್ಪಣಿಗಳು ಸಾರ್ವಜನಿಕರಿಗೆ ಲಭ್ಯವಿರಬೇಕು.

ಬೇರೆ ವಿಚಾರಗಳಿಗೆ ಹೋಲಿಸಿದರೆ, ಈವರೆಗೆ ಅತಿ ಕಡಿಮೆ ಚರ್ಚೆಗೊಳಪಟ್ಟ ಭಾರತೀಯ ಚುನಾವಣಾ ಪ್ರಕ್ರಿಯೆಯ ಒಂದು ಅಂಶವನ್ನು ಈ ಲೇಖನ ಪ್ರಸ್ತುತಪಡಿಸುತ್ತದೆ. 2009ರ ಲೋಕಸಭೆ ಚುನಾವಣೆಗೆ ಹೋಲಿಸಿದರೆ, 2014ರ ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಅಭ್ಯರ್ಥಿಗಳ ಸಂಖ್ಯೆ ಅಲ್ಪಮಟ್ಟಿಗೆ ಹೆಚ್ಚಳವಾಗಿದ್ದನ್ನು (2009ರಲ್ಲಿ 8,069 ಅಭ್ಯರ್ಥಿಗಳಾದರೆ 2014ರಲ್ಲಿ 8,251 ಮಂದಿ) ನಾವೆಲ್ಲರೂ ಗಮನಿಸಿದ್ದೇವೆ. ಭಾರತದ ಚುನಾವಣಾ


ಪ್ರಾಧ್ಯಾಪಕರು, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಲಖ್ನೋ. Email : kbhattacharya@iiml.ac.in

ಇತಿಹಾಸ ಹೇಳುವ ಪ್ರಕಾರ, ಪ್ರಜಾಪ್ರತಿನಿಧಿ ಕಾಯ್ದೆಯನ್ನು ಬದಲಿಸದೇ ಹೋದಲ್ಲಿ, ಭವಿಷ್ಯದಲ್ಲೂ ಅಭ್ಯರ್ಥಿಗಳ ಸಂಖ್ಯೆ ಹೆಚ್ಚುತ್ತಲೇ ಸಾಗುತ್ತದೆ. ಇದನ್ನು ತಡೆಯದೇ ಹೋದಲ್ಲಿ, ಮುಂದಿನ ದಿನಗಳಲ್ಲಿ ಅನೇಕ ಕ್ಷೇತ್ರಗಳಲ್ಲಿ 16ಕ್ಕಿಂತ ಹೆಚ್ಚಿನ ಅಭ್ಯರ್ಥಿಗಳು ಸ್ಪರ್ಧೆಗಿಳಿಯುವ ಸಾಧ್ಯತೆಯಿದೆ. ಇದರ ಪರಿಣಾಮ ಚುನಾವಣಾ ನಿರ್ವಹಣೆ ಇನ್ನಷ್ಟು ಕಷ್ಟವಾಗಬಹುದು ಎಂದೂ ಅನೇಕರು ಭವಿಷ್ಯ ನುಡಿದಿದ್ದಾರೆ. ಅಂದರೆ 16ಕ್ಕಿಂತ ಹೆಚ್ಚು ಅಭ್ಯರ್ಥಿಗಳಿದ್ದರೆ ಚುನಾವಣಾ ಅಧಿಕಾರಿಗಳು ಹೆಚ್ಚೆಚ್ಚು ನಿಯಂತ್ರಣಾ ಶ್ರಮ ವಹಿಸಬೇಕು ಎಂದೇನೂ ಅಲ್ಲ. ಪ್ರಾಯೋಗಿಕವಾಗಿ ಹೇಳುವುದೇನೆಂದರೆ, ಚುನಾವಣಾ ಅಧಿಕಾರಿಗಳು ಅಂತಹ ಕ್ಷೇತ್ರಗಳ ಪ್ರತಿಯೊಂದು ಮತಗಟ್ಟೆಯಲ್ಲೂ ಒಂದಕ್ಕಿಂತ ಹೆಚ್ಚು ಇವಿಎಂ(ವಿದ್ಯುನ್ಮಾನ ಮತಯಂತ್ರ)ಗಳನ್ನು ಹೊಂದಿರಬೇಕಾಗುತ್ತದೆ. ಭಾರತದ ಚುನಾವಣಾ ಅಂಕಿಅಂಶಗಳು ನಮ್ಮ ವಾದಕ್ಕೆ ಪುಷ್ಟಿ ನೀಡುತ್ತವೆ. 1980ರಿಂದ ಲೋಕಸಭೆ ಕ್ಷೇತ್ರಗಳಲ್ಲಿ ಕಣಕ್ಕಿಳಿದ ಒಟ್ಟು ಅಭ್ಯರ್ಥಿಗಳ ಸಂಖ್ಯೆ 50 ಅನ್ನು ದಾಟಿದೆ, ಇನ್ನೂ ಕೆಲವೆಡೆ 100ನ್ನೂ ದಾಟಿದೆ. 1996ರಲ್ಲಿ ಅಭ್ಯರ್ಥಿಗಳ ಸಂಖ್ಯೆ ಅತ್ಯಂತ ಹೆಚ್ಚಾಗಿತ್ತು. 1996ರ ಸಂಸದೀಯ ಚುನಾವಣೆ ವೇಳೆ, ಆಂಧ್ರಪ್ರದೇಶದ ನಲ್ಗೊಂಡಾ ಕ್ಷೇತ್ರ ಮತ್ತು ಕರ್ನಾಟಕದ ಬೆಳಗಾವಿ ಕ್ಷೇತ್ರದಲ್ಲಿ ಕ್ರಮವಾಗಿ 480 ಮತ್ತು 456 ಅಭ್ಯರ್ಥಿಗಳು ಕಣಕ್ಕಿಳಿದಿದ್ದರು. ಅದೇ ವರ್ಷ ತಮಿಳುನಾಡಿನಲ್ಲಿ ನಡೆದ ವಿಧಾನಸಭೆ ಚುನಾವಣೆಯಲ್ಲಿ ಮೊಡಕುರಿಚಿ ವಿಧಾನಸಭಾ ಕ್ಷೇತ್ರದಲ್ಲಿ 1033 ಮಂದಿ ಕಣದಲ್ಲಿದ್ದರು. ಇಂತಹ ಪರಿಸ್ಥಿತಿಯಲ್ಲಿ, ಚುನಾವಣಾ ಆಯೋಗವು ಬೇರೆ ದಾರಿಯಿಲ್ಲದೇ, ಮತಪತ್ರದ ಬದಲು ಮತ ಪುಸ್ತಿಕೆಗಳನ್ನೇ ತಯಾರಿಸಬೇಕಾಯಿತು. ಆದರೆ, ಇದಾದ ಕೆಲವು ಸಮಯದಲ್ಲೇ ಕೆಲವೊಂದು ನೀತಿ ನಿಬಂಧನೆಗಳು ಪರಿಣಾಮಕಾರಿಯಾಗಿ ಜಾರಿಯಾದವು. ಅದರಂತೆ 2009ರ ಲೋಕಸಭೆ ಚುನಾವಣೆ ವೇಳೆ ಶೇ.70ಕ್ಕಿಂತ ಹೆಚ್ಚು ಕ್ಷೇತ್ರಗಳಲ್ಲಿ 10ಕ್ಕಿಂತ ಅಧಿಕ ಅಭ್ಯರ್ಥಿಗಳು ಸ್ಪರ್ಧಿಸಿದ್ದರು. ಈ ಅಭ್ಯರ್ಥಿಗಳ ಪೈಕಿ ಹೆಚ್ಚಿನವರು ಒಂದೋ ಪಕ್ಷೇತರರು ಅಥವಾ ಸ್ಥಳೀಯ ಅಸ್ತಿತ್ವ ಹೊಂದಿದ್ದ ಸಣ್ಣಪುಟ್ಟ ಪಕ್ಷಗಳವರು. ಹೆಚ್ಚಿನ ಅಭ್ಯರ್ಥಿಗಳು ಕಣಕ್ಕಿಳಿಸುವುದನ್ನು ತಪ್ಪಿಸುವಂತಹ ಚುನಾವಣಾ ನಿಬಂಧನೆಗಳಿಂದ ಉದ್ದೇಶ



ಈಡೇರಬಹುದೇ ಎಂಬ ಬಗ್ಗೆ ರಾಜಕೀಯ ತಜ್ಞರು ಚರ್ಚಿಸತೊಡಗಿದ್ದರು. ಷರತ್ತುಗಳ ಪರ ವಾದಿಸುವವರು ಚುನಾವಣೆಯ ನಿರ್ವಹಣೆ ಬಗ್ಗೆ ಗಮನ ನೀಡಿ ಮಾತನಾಡುತ್ತಿದ್ದರು. ಅನಿರ್ಬಂಧಿತ ಪ್ರವೇಶದಿಂದಾಗುವ ಅಧಿಕ ವಹಿವಾಟು ವೆಚ್ಚ, ಇದನ್ನು ತಡೆಗಟ್ಟದೇ ಇದ್ದಲ್ಲಿ ಅದು ಚುನಾವಣಾ ಪ್ರಕ್ರಿಯೆಯ ಪಾವಿತ್ರ್ಯತೆಯನ್ನೇ ಹಾಳುಮಾಡಬಹುದೇ ಎಂಬುದಕ್ಕೆ ಅವರು ಹೆಚ್ಚಿನ ಒತ್ತು ನೀಡುತ್ತಿದ್ದರು. ಆದರೆ, ಹಲವಾರು ರಾಜಕೀಯ ತಜ್ಞರಿಗೆ ಈ ದೃಷ್ಟಿಕೋನ ಅಷ್ಟೇನೂ ಸರಿಕಾಣಲಿಲ್ಲ. ಅವರ ವಾದವೇನೆಂದರೆ, ಒಬ್ಬ ಸಾಮಾನ್ಯ ಅಂದರೆ ಅಮುಖ್ಯ ಅಭ್ಯರ್ಥಿಯ ಪ್ರಭಾವವನ್ನು ಕೇವಲ ಆತನ ಚುನಾವಣಾ ಯಶಸ್ಸಿನ ಮೇಲೆ ಅಳೆಯಲಾಗದು. ಅವರು ಎತ್ತುವ, ಹೋರಾಡುವ ವಿಚಾರಗಳು ಕೆಲವೊಮ್ಮೆ ಚುನಾವಣಾ ಚರ್ಚೆಯ ಸ್ವರೂಪವನ್ನೇ ಬದಲಿಸಬಹುದು. ಜತೆಗೆ, ಮತದಾರನೂ ತನ್ನ ವರ್ತನೆ, ಮನಸ್ಸನ್ನು ಬದಲಿಸಬಹುದು. ತಜ್ಞರ ಪ್ರಕಾರ, ಚುನಾವಣಾ ಕಣ ಪ್ರವೇಶಕ್ಕೆ ಹೇರಲಾಗುವ ಕೃತಕ ನಿಬಂಧನೆಗಳು ಭಿನ್ನರ ಧ್ವನಿಯನ್ನು ಕುಗ್ಗಿಸಬಹುದು. ಪರಿಣಾಮ, ಪ್ರಜಾಪ್ರಭುತ್ವದಲ್ಲಿ ಅಗತ್ಯವಾದ ಅಭಿಪ್ರಾಯ ವೈವಿಧ್ಯಕ್ಕೆ ಬೆಲೆಯಿಲ್ಲದಂತಾಗಬಹುದು. ಇನ್ನೂ ಕೆಲವು ರಾಜಕೀಯ ತಜ್ಞರು ಹೇಳುವುದೇನೆಂದರೆ, ಚುನಾವಣಾ ಕಣಕ್ಕಿಳಿಯಲು ಕೃತಕ ನಿಷೇಧ ಹೇರುವ ಪ್ರಯತ್ನವು ಯಶಸ್ವಿಯಾಗುವುದೂ ಇಲ್ಲ, ಜತೆಗೆ ದೀರ್ಘಕಾಲದಲ್ಲಿ ಅದು ವಿರುದ್ಧ-ಪರಿಣಾಮವನ್ನೂ ಬೀರಬಹುದು. ದುರದೃಷ್ಟವಶಾತ್, ವಿಶ್ವಾದ್ಯಂತ ಇರುವ ನಿಯಂತ್ರಣಾ ಸಂಸ್ಥೆಗಳು ಕೆಲವೊಮ್ಮೆ ಯಾವುದೇ ಸೂಕ್ತ ಸೈದ್ಧಾಂತಿಕ ಚೌಕಟ್ಟನ್ನು ಹೊಂದಿರದೇ ನೀತಿನಿಯಮಗಳನ್ನು ರೂಪಿಸುತ್ತವೆ. ಒಮ್ಮಿಂದೊಮ್ಮೆಲೇ ಇಷ್ಟೊಂದು ಸಂಖ್ಯೆಯ ಅಭ್ಯರ್ಥಿಗಳು ಏಕೆ ಕಣಕ್ಕಿಳಿದರು ಅಥವಾ ಇಳಿಯಬಹುದು ಎಂಬುದನ್ನು ವಿವರಿಸುವ ತಾಕತ್ತೂ ಅವುಗಳಿಗಿರುವುದಿಲ್ಲ. ಇದರ ಉದ್ದೇಶಪೂರ್ವಕವಲ್ಲದ ಪರಿಣಾಮವೇನು ಗೊತ್ತಾ? "ಪ್ರಮುಖರಲ್ಲದ ಅಥವಾ ಗಂಭೀರವಲ್ಲದ" ಅಭ್ಯರ್ಥಿಗಳು ಕಣಕ್ಕಿಳಿಯುವುದಕ್ಕೆ ನಿಷೇಧ ಹೇರುವಂತಹ ಸ್ಫುಟತೆ. ಇಂತಹ "ಗಂಭೀರವಲ್ಲದ" ಅಭ್ಯರ್ಥಿಯ ಬಹುತ್ವ ಸಿದ್ಧಾಂತವನ್ನು ಅರ್ಥಮಾಡಿಕೊಂಡರೆ, ಅವರು ಚುನಾವಣೆಯಲ್ಲಿ ಪಾಲ್ಗೊಳ್ಳಲು ಕಾರಣವೇನು ಎಂಬುದನ್ನು ಅರಿಯುವುದು ಸಹಜ. ಈ ರೀತಿ ಒಮ್ಮೆಲೇ ಚುನಾವಣಾ ಕಣಕ್ಕಿಳಿಯುವುದು ಒಂದೋ ಹಾಲಿ ರಾಜಕಾರಣಿಯನ್ನು ಪ್ರತಿಭಟಿಸುವ ರೀತಿಯೂ ಆಗಿರಬಹುದು, ಅಥವಾ ಹೆಚ್ಚಿನ ಪ್ರಕರಣಗಳಲ್ಲಿ ಇದರ ಮೂಲ ಉದ್ದೇಶ ಭಾರತೀಯ ರಾಜಕೀಯ ಪಕ್ಷಗಳ ಕುತಂತ್ರ ಮತ್ತು ಸರ್ವಾಧಿಕಾರಿ ಸ್ವಭಾವದ ವಿರುದ್ಧ ಬಂಡೇಳುವುದೂ ಆಗಿರುತ್ತದೆ. ಪ್ರಮುಖ ಪ್ರತಿಸ್ಪರ್ಧಿಯ ಮತಗಳನ್ನು ವಿಭಜಿಸಲೆಂದು ಕ್ಲೋನ್ (ಡಮ್ಮಿ) ಅಭ್ಯರ್ಥಿಗಳನ್ನು ಕಣಕ್ಕಿಳಿಸುವುದೂ ಈ ಕುತಂತ್ರ ಸ್ವಭಾವದಲ್ಲಿ ಸೇರಿದೆ. ಎರಡು ಅಥವಾ ಹೆಚ್ಚು ರಾಜಕೀಯ ಪಕ್ಷಗಳು ಇಂತಹ ಚಟುವಟಿಕೆಯಲ್ಲಿ ತೊಡಗಿವೆಯೆಂದಾದರೆ ಸಹಜವಾಗಿಯೇ ಆ ಕ್ಷೇತ್ರದಲ್ಲಿ ಅಭ್ಯರ್ಥಿಗಳ ಸಂಖ್ಯೆ ಹೆಚ್ಚುತ್ತದೆ. ಇದೇ ರೀತಿ, ಒಂದು ರಾಜಕೀಯ ಪಕ್ಷದೊಳಗೇ ಅಭ್ಯರ್ಥಿಯ ಆಯ್ಕೆ ಪ್ರಕ್ರಿಯೆ ವೇಳೆ ಸರ್ವಾಧಿಕಾರಿ ಧೋರಣೆ ತಾಳಿದರೆ, ಇದು ಬಂಡಾಯ ಅಭ್ಯರ್ಥಿಗಳ ಹುಟ್ಟಿಗೆ ಕಾರಣವಾಗುತ್ತದೆ. ಈ ಮೂಲಕ ಒಟ್ಟು ಅಭ್ಯರ್ಥಿಗಳ ಸಂಖ್ಯೆ

ಇನ್ನಷ್ಟು ಹೆಚ್ಚುತ್ತವೆ. ಇಲ್ಲಿ ಕ್ಲೋನಿಂಗ್‌ಗೆ ಆಸಕ್ತಿದಾಯಕ ಉದಾಹರಣೆಯೆಂದರೆ, ಪ್ರತಿಸ್ಪರ್ಧಿಯ ಹೆಸರಿನವನೇ ಆದ, ಅಥವಾ ಆತನ ಹೆಸರಿಗೆ ಸಮೀಪವಿರುವ ಹೆಸರುಳ್ಳ ಅಭ್ಯರ್ಥಿಯನ್ನು ಕಣಕ್ಕಿಳಿಸುವುದು. ಕೆಲವೊಮ್ಮೆ ಕಾಕತಾಳೀಯವಾಗಿ ಒಂದೇ ಹೆಸರಿನ ಅಭ್ಯರ್ಥಿಗಳು ಕಣಕ್ಕಿಳಿದಿರಬಹುದು. ಒಂದೇ ತೆರನಾದ ಹೆಸರುಳ್ಳ ಅಭ್ಯರ್ಥಿಗಳೆಲ್ಲರೂ ಕ್ಲೋನ್‌ಗಳೆಂದು ಸಾಬೀತುಪಡಿಸುವುದೂ ಸುಲಭವಲ್ಲ. ಕೆಲವು ಅಭ್ಯರ್ಥಿಗಳು ನಿಜಕ್ಕೂ ಯಾವುದೇ ದುರುದ್ದೇಶವಿಲ್ಲದೇ ಚುನಾವಣೆಗೆ ನಿಂತಿರಲೂಬಹುದು. ಇಂತಹ ಸಂದರ್ಭದಲ್ಲಿ ಚುನಾವಣಾ ಅಧಿಕಾರಿಗಳು ಕೇವಲ ಸಾಂದರ್ಭಿಕ ಸಾಕ್ಷಿಗೆ ಅನುಗುಣವಾಗಿ ನಿರ್ಧಾರ ಕೈಗೊಳ್ಳಬಹುದು. ಮೊದಲನೆಯದಾಗಿ, ಡಮ್ಮಿ ಅಭ್ಯರ್ಥಿಯು ಕೊನೇ ಕ್ಷಣದಲ್ಲಿ ನಾಮಪತ್ರ ಸಲ್ಲಿಸಿರುತ್ತಾನೆ. ಪ್ರತಿಸ್ಪರ್ಧಿಗಳು ಪ್ರತಿತಂತ್ರ ಹೂಡಬಹುದೆಂಬ ಭೀತಿಯಿಂದ ಆತ ಈ ರೀತಿ ಮಾಡುತ್ತಾನೆ. ಎರಡನೆಯದಾಗಿ, ಪ್ರಮುಖ ಅಭ್ಯರ್ಥಿಯದ್ದೇ ಹೆಸರನ್ನು ಹೊಂದಿರುವ ಡಮ್ಮಿ ಅಭ್ಯರ್ಥಿಯು ಚುನಾವಣಾ ಪ್ರಚಾರಕ್ಕೆ ಹೋಗುವುದಿಲ್ಲ, ಪ್ರಚಾರದಲ್ಲಿ ತೊಡಗುವುದಿಲ್ಲ. ನನ್ನಂತಹ ಒಬ್ಬ ಅಭ್ಯರ್ಥಿ ಇದ್ದಾನೆ ಎಂಬುದು ಯಾರಿಗೂ ಗೊತ್ತಾಗಬಾರದು ಎಂಬುದೇ ಆತನ ಉದ್ದೇಶ. ಇದೇ ವೇಳೆ, ಫ್ರೀ–ರೈಡರ್ ಅಥವಾ ಪ್ರತಿಸ್ಪರ್ಧಿಯ ಹೆಸರನ್ನೇ ಹೊಂದಿದ್ದು ಉದ್ದೇಶಪೂರ್ವಕವಾಗಿಯೇ ಕಣಕ್ಕಿಳಿದ ಅಭ್ಯರ್ಥಿಯು ಚುನಾವಣಾ ಪ್ರಚಾರದಲ್ಲಿ ಭಾಗಿಯಾಗುತ್ತಾನೆ. ಇಲ್ಲದಿದ್ದರೆ ಅವರಿಗೆ ಮತಲಾಭ ಪಡೆಯಲು ಸಾಧ್ಯವಾಗದು. ಒಟ್ಟಾರೆಯಾಗಿ ಪ್ರಮುಖ ಅಭ್ಯರ್ಥಿಯ ಹೆಸರನ್ನೇ ಹೊಂದಿರುವ ನೈಜ ಅಭ್ಯರ್ಥಿಗಳು ಕಣದಲ್ಲಿದ್ದರೆ, ಪ್ರಮುಖ ರಾಜಕೀಯ ಪಕ್ಷಗಳ ನಡುವೆ ಪೂರ್ಣಪ್ರಮಾಣದ ಕ್ಲೋನ್ ಯುದ್ಧ ಶುರುವಾಗುವುದಂತೂ ಸತ್ಯ. ನೈಜ ಅಭ್ಯರ್ಥಿಯಾಗಿರಲೀ, ಡಮ್ಮಿಯಾಗಿರಲಿ, ಚುನಾವಣೆಯಲ್ಲಿ ಪಾಲ್ಗೊಳ್ಳದಂತೆ ಇವರನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ. ಇಂತಹ ಸಂದರ್ಭದಲ್ಲಿ ಬಳಸಬಹುದಾದ ಅತ್ಯುತ್ತಮ ಕ್ರಮವೆಂದರೆ, ಮಾಹಿತಿ ಪ್ರಸರಣ. ಒಂದೇ ತೆರನಾದ ಹೆಸರಿನ ಅನೇಕ ಅಭ್ಯರ್ಥಿಗಳು ಕಣದಲ್ಲಿದ್ದಾರೆ ಎಂಬ ಮಾಹಿತಿಯನ್ನು ಚುನಾವಣಾ ಅಧಿಕಾರಿಗಳು ಪ್ರತಿಯೊಂದು ಮತಗಟ್ಟೆಗೂ ರವಾನಿಸಬೇಕು. ಆಗ ಮತಗಟ್ಟೆಯ ಹೊರಭಾಗದಲ್ಲಿ ಈ ವಿಚಾರವನ್ನು ಬರೆದು ಅಂಟಿಸಿದರೆ,



ಕನಿಷ್ಠ ಸಾಕ್ಷರ ಮತದಾರರಾದರೂ ಹಕ್ಕು ಚಲಾಯಿಸುವಾಗ ಎಚ್ಚರಿಕೆ ವಹಿಸುತ್ತಾರೆ. ಅಧಿಕ ಸಂಖ್ಯೆಯ ಅಭ್ಯರ್ಥಿಗಳು ಹಾಗೂ ಅವ್ಯವಹಾರಗಳು ದೀರ್ಘಕಾಲದಿಂದಲೂ ಭಾರತದ ಚುನಾವಣಾ ಅಧಿಕಾರಿಗಳಿಗೆ ತಲೆನೋವು ಉಂಟುಮಾಡುತ್ತಲೇ ಬಂದಿವೆ. ಪ್ರಮುಖ ರಾಜಕೀಯ ಪಕ್ಷಗಳು ತಮ್ಮ ಸ್ವಂತ ಲಾಭಕ್ಕಾಗಿ ಗುಪ್ತವಾಗಿ ನಕಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸುತ್ತವೆ ಎಂಬುದನ್ನು ಸ್ವತಃ ಚುನಾವಣಾ ಆಯೋಗವೂ ಕಂಡುಕೊಂಡಿದೆ. ಈ ಸಮಸ್ಯೆಯನ್ನು ಭಾರತೀಯ ಕಾನೂನು ಆಯೋಗ (ಎಲ್ ಸಿಐ) ಮತ್ತು ಸಂವಿಧಾನದ ಕಾರ್ಯ ಪರಿಶೀಲನೆ ನಡೆಸುವ ರಾಷ್ಟ್ರೀಯ ಆಯೋಗ(ಎನ್ ಸಿಆರ್ ಡಬ್ಲ್ಯೂ ಸಿ)ವೂ ಪತ್ತೆಹಚ್ಚಿದೆ. ಇತ್ತೀಚೆಗೆ, ಸಾಕ್ಷ್ಯ ಸಮೇತ ಸಿಕ್ಕಿದ ಕೆಲವು ಪ್ರಕರಣಗಳಲ್ಲಿ ಚುನಾವಣಾ ಆಯೋಗವು ಡಮ್ಮಿ ಅಭ್ಯರ್ಥಿಗಳ ವಿರುದ್ಧ ಕ್ರಮವನ್ನೂ ಕೈಗೊಂಡಿದೆ. ಮತ್ತೊಂದೆಡೆ, ಲೋಕಸಭೆ ಚುನಾವಣೆಯಲ್ಲಿ ಸ್ವತಂತ್ರ ಅಭ್ಯರ್ಥಿಗಳು ಸ್ಪರ್ಧಿಸದಂತೆ ತಡೆಯಬೇಕು ಎಂಬ ಶಿಫಾರಸನ್ನು ಎಲ್ ಸಿಐ ಸಲ್ಲಿಸಿದೆ. ಎನ್ ಸಿಆರ್ ಡಬ್ಲ್ಯೂ ಸಿ ಮತ್ತು ಚುನಾವಣಾ ಆಯೋಗದ ಸಲಹೆಗಳೂ ಇದೇ ತೆರನಾಗಿದ್ದರೂ, ಇಷ್ಟೊಂದು ಕಠಿಣವಾಗಿಲ್ಲ.

ವಿಶ್ವದ ಅನೇಕ ಪ್ರಜಾಸತ್ತೆಗಳು ನಾಮಪತ್ರ ಸಲ್ಲಿಸುವ ವೇಳೆಯೇ ಅಭ್ಯರ್ಥಿಗಳಿಗೆ ಪರೋಕ್ಷವಾಗಿ 2 ರೀತಿಯಾಗಿ ನಿರ್ಬಂಧ ಹೇರುತ್ತವೆ. ಉದಾಹರಣೆಗೆ, (i) ಅಭ್ಯರ್ಥಿಗೆ ಚುನಾವಣಾ ಠೇವಣಿ (ಅಲ್ಪ ಪ್ರಮಾಣದಲ್ಲಿ) ನಿಗದಿಪಡಿಸುವುದು. ಅಭ್ಯರ್ಥಿಯು ಕನಿಷ್ಠ ಮತವನ್ನು ಪಡೆಯುವಲ್ಲಿ ವಿಫಲರಾದರೆ ಅಂಥವರಿಗೆ ಠೇವಣಿ ವಾಪಸ್ ನೀಡಲಾಗುವುದಿಲ್ಲ (ii) ಆಯಾ ಕ್ಷೇತ್ರದ ಕೆಲವು ಮತದಾರರು ಆ ಅಭ್ಯರ್ಥಿಗೆ ತಮ್ಮ ಬೆಂಬಲ ಸೂಚಿಸುವುದು (ಸಹಿ ಮತ್ತು ದಾಖಲೆ ಸಮೇತ).

ಇತರೆ ಹಲವು ಪ್ರಜಾಸತ್ತೆಯಂತೆಯೇ, ಭಾರತವೂ ಇಂತಹ ನಿರ್ಬಂಧಗಳನ್ನು ವಿಧಿಸಿದೆ. 1951ರಲ್ಲಿ ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಯ ಠೇವಣಿ ಮೊತ್ತವು 500/– ರೂಪಾಯಿ ಆಗಿತ್ತು. ನಂತರ 1996ರ ಸಂಸದೀಯ ಚುನಾವಣೆ ವೇಳೆ ಅಭ್ಯರ್ಥಿಗಳ ಸಂಖ್ಯೆ ಭಾರಿ ಪ್ರಮಾಣದಲ್ಲಿ ಹೆಚ್ಚಾದ ಕಾರಣ ಠೇವಣಿ ಮೊತ್ತವನ್ನು 10,000/– ಕ್ಕೇರಿಸಲಾಯಿತು. ಬಳಿಕ ತಜ್ಞರ ಸಮಿತಿಗಳ ಶಿಫಾರಸಿನ ಅನ್ವಯ 2009ರ ವೇಳೆಗೆ ಇದನ್ನು 25,000/– ಕ್ಕೇರಿಸಲಾಯಿತು. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಹಣದುಬ್ಬರವು ಚುನಾವಣಾ ಠೇವಣಿಯ ನೈಜ ಮೊತ್ತವನ್ನು ಕುಗ್ಗಿಸುತ್ತಾ ಸಾಗುತ್ತದೆ, ಜತೆಗೆ ಆದಾಯದಲ್ಲಾಗುವ ಹೆಚ್ಚಳವೂ ಸಮಯ ಕಳೆದಂತೆ ಅದರ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ಹಾಗಾಗಿ, 1980ರ ಅಂತ್ಯದಲ್ಲಿ ಹಾಗೂ 1990ರ ದಶಕದ ಆರಂಭದಲ್ಲಿ ಅಭ್ಯರ್ಥಿಗಳ ಸಂಖ್ಯೆಯಲ್ಲಿ ಅಷ್ಟೊಂದು ಹೆಚ್ಚಳವಾಗಲು ರಾಜಕೀಯ ಅಸ್ಥಿರತೆ ಮಾತ್ರ ಕಾರಣವಲ್ಲ, ಬದಲಾಗಿ ಆ ಅವಧಿಯಲ್ಲಿ ಅಭ್ಯರ್ಥಿಗಳ ಪಾಲ್ಗೊಳ್ಳುವಿಕೆಯ ವೆಚ್ಚವೂ ಕಡಿಮೆಯಾಗಿದ್ದು ಕಾರಣ. 1996ರ ನಂತರ ಠೇವಣಿ ಮೊತ್ತದಲ್ಲಾದ ಹೆಚ್ಚಳವು ಭಾರತದಲ್ಲಿ ಅಭ್ಯರ್ಥಿಗಳ ಪ್ರವೇಶದ ಮೇಲೆ ಅಲ್ಪಾವಧಿ ಪರಿಣಾಮ ಬೀರಿದವು ಎನ್ನುತ್ತವೆ ಚುನಾವಣಾ ಅಂಕಿಅಂಶಗಳು. ಅದರಂತೆ 2009ರಲ್ಲಿ ಆದ ಹೆಚ್ಚಳವೂ ಇದೇ ರೀತಿಯ ಪರಿಣಾಮ ಬೀರಿತು. ಅದೇನೇ ಇರಲಿ, ಠೇವಣಿಯಲ್ಲಿ

ಆಗಾಗ್ಗೆ ಬದಲಾವಣೆಯಾಗುತ್ತಿದ್ದರೆ ಮಾತ್ರವೇ ಅದು ಪರಿಣಾಮಕಾರಿಯಾಗಿರಲು ಸಾಧ್ಯ. ಈ ಸತ್ಯ ಚುನಾವಣಾ ಆಯೋಗಕ್ಕೆ ಸರಿಯಾಗಿ ಗೊತ್ತಿದೆ. ಅದಕ್ಕಾಗಿಯೇ ಪ್ರತಿ ಚುನಾವಣೆಗೂ ಮುನ್ನ ಠೇವಣಿ ನಿಗದಿಪಡಿಸುವ ಅಧಿಕಾರಕ್ಕಾಗಿ ಶಿಫಾರಸನ್ನೂ ಸಲ್ಲಿಸಿದೆ. ಕುತೂಹಲಕಾರಿ ಸಂಗತಿಯೆಂದರೆ, ಅಂತಾರಾಷ್ಟ್ರೀಯ ಮಾನದಂಡಕ್ಕೆ ಹೋಲಿಸಿದರೆ ಭಾರತದಲ್ಲಿರುವ ಪ್ರಸ್ತುತ ಠೇವಣಿ ಮಟ್ಟ ಹೆಚ್ಚೇ ಎಂದು ಹೇಳಬಹುದು. ನಮ್ಮ ದೇಶದಲ್ಲಿ ವಾರ್ಷಿಕ ತಲಾ ಆದಾಯದ ಮೂರನೇ ಒಂದರಷ್ಟನ್ನು ಠೇವಣಿಯಾಗಿ ಪಡೆಯಲಾಗುತ್ತದೆ. ಅದೇ ಯುನೈಟೆಡ್ ಕಿಂಗ್ ಡಂ, ಕೆನಡಾ ಮತ್ತು ಆಸ್ಟ್ರೇಲಿಯಾದಂತಹ ರಾಷ್ಟ್ರಗಳಲ್ಲಿ ಇದು ತಲಾ ಆದಾಯದ ಶೇ.2ಕ್ಕಿಂತಲೂ ಕಡಿಮೆ. ಆತಂಕಕಾರಿ ವಿಚಾರವೆಂದರೆ, ಭಾರತದಲ್ಲಿ ಅಧಿಕ ಠೇವಣಿ ಮೊತ್ತವು ಮುಂದುವರಿದರೆ, ವಾಸ್ತವದಲ್ಲಿ ಅವಕಾಶವಂಚಿತ ವರ್ಗದವರಿಗೆ ರಾಜಕೀಯದಲ್ಲಿ ಪಾಲ್ಗೊಳ್ಳುವ ಅವಕಾಶವೇ ಸಿಗುವುದಿಲ್ಲ (ಉದಾಹರಣೆಗೆ ಒಂದು ಕ್ಷೇತ್ರದಲ್ಲಿರುವ ಬುಡಕಟ್ಟು ವರ್ಗದವರಿಗೆ). ದುರದೃಷ್ಟವೆಂದರೆ, ಅಭ್ಯರ್ಥಿಯನ್ನು ಸೂಚಿಸುವವರ ಸಹಿ ಪಡೆಯುವ ಕಾರ್ಯವು ಭಾರತದಲ್ಲಿ ಠೇವಣಿಯಷ್ಟು ಕಟ್ಟುನಿಟ್ಟಾಗಿ ಜಾರಿಯಾಗುತ್ತಿಲ್ಲ. ಒಬ್ಬ ಅಮುಖ್ಯ ಅಭ್ಯರ್ಥಿಯನ್ನು ಕೇವಲ 10 ಮಂದಿ ಸಹಿ ಹಾಕಿ ಸೂಚಿಸಬಹುದು. ಅದನ್ನು ಆ ಅಭ್ಯರ್ಥಿಯ ಕುಟುಂಬ ಸದಸ್ಯರೋ, ಆತ್ಮೀಯ ಸ್ನೇಹಿತರೋ ಮಾಡಬಹುದು. ಒಂದು ಲೋಕಸಭಾ ಕ್ಷೇತ್ರದಲ್ಲಿನ ಮತದಾರರ ಪ್ರಮಾಣವನ್ನು ಗಣನೆಗೆ ತೆಗೆದುಕೊಂಡರೆ ಭಾರತದಲ್ಲಿ ಅಭ್ಯರ್ಥಿಯನ್ನು ಸೂಚಿಸುವವರ ಸಹಿ ಅಂತಾರಾಷ್ಟ್ರೀಯ ಮಾನದಂಡಕ್ಕೆ ಹೋಲಿಸಿದರೆ ಕಡಿಮೆ ಎಂದೇ ಹೇಳಬಹುದು. ಆಸ್ಟ್ರೇಲಿಯಾದಲ್ಲಿ ಎಲ್ಲ ಅಮುಖ್ಯ ಅಭ್ಯರ್ಥಿಗಳನ್ನು ಸೂಚಿಸಲು



ಕನಿಷ್ಠ 50 ಸಹಿಯಾದರೂ ಬೇಕು. ಅದರಂತೆಯೇ ಭಾರತದಲ್ಲೂ ಕನಿಷ್ಠ ಸಹಿಯ ಅಗತ್ಯತೆಯನ್ನು ಹೆಚ್ಚಿಸಬೇಕು. ಇದರಿಂದ ಚುನಾವಣಾ ವೆಚ್ಚವೇನೂ ಹೆಚ್ಚಾಗುವುದಿಲ್ಲ. ಅಮೆರಿಕದ ಅನುಭವದಲ್ಲಿ ಕಂಡುಕೊಂಡಂತೆ, ಸಹಿ ಅಗತ್ಯತೆಯಲ್ಲಿ ಸ್ಥಳೀಯರ ಪಾಲ್ಗೊಳ್ಳುವಿಕೆಯು ಅಭ್ಯರ್ಥಿಗಳ ಪ್ರವೇಶ ನಿಯಂತ್ರಿಸುವಲ್ಲಿ ಪರಿಣಾಮಕಾರಿ ಪಾತ್ರ ವಹಿಸುತ್ತದೆ. ಉದಾಹರಣೆಗೆ, ಒಂದು ಕ್ಷೇತ್ರದಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳ ಸಂಖ್ಯೆ ಮಿತಿ (ಉದಾ, 30)ಯನ್ನು ಮೀರಿದರೆ, ಆಗ ಅಮುಖ್ಯ ಅಭ್ಯರ್ಥಿ(ಮಾನ್ಯತೆ ಪಡೆದಿರುವ ರಾಷ್ಟ್ರೀಯ ಮತ್ತು ರಾಜ್ಯ ಪಕ್ಷಗಳ ಅಭ್ಯರ್ಥಿಗಳನ್ನು ಹೊರತುಪಡಿಸಿ)ಯನ್ನು ಸೂಚಿಸುವವರ ಸಹಿಯನ್ನು ಚುನಾವಣಾ ಆಯೋಗ ಹೆಚ್ಚಿಸಬೇಕು(ಸುಮಾರು 100 ಸಹಿವರೆಗೆ). ಆದರೆ ಇಲ್ಲಿ ಸಹಿಗಳ ಸಂಗ್ರಹ ಮತ್ತು ಪರಿಶೀಲನೆಗೆ ಹೆಚ್ಚು ಸಮಯ ಬೇಕಾಗುತ್ತದೆ. ಹಾಗಾಗಿ ಅಂತಹ ಕ್ಷೇತ್ರದಲ್ಲಿ ಅಮುಖ್ಯ ಅಭ್ಯರ್ಥಿಗೆ ಸಹಿ ಸಂಗ್ರಹಿಸಲೆಂದು ಸ್ವಲ್ಪ ಹೆಚ್ಚಿನ ಕಾಲಾವಕಾಶ(ಸುಮಾರು 7 ದಿನಗಳಷ್ಟು) ನೀಡಬೇಕು. ಬೆಂಬಲಿಗರನ್ನು ಸಂಗ್ರಹಿಸುವಲ್ಲಿ ಆತ ವಿಫಲನಾದ ಎಂದಾದರೆ ಅವರ ನಾಮಪತ್ರವನ್ನೇ ರದ್ದು ಮಾಡುವಂತಿರಬೇಕು. ಇದೇ ವೇಳೆ, ಚುನಾವಣಾ ಪ್ರಕ್ರಿಯೆಯ ಕಾಲಾವಧಿಯನ್ನೂ ಅನುಕೂಲಕ್ಕೆ ಅನುಗುಣವಾಗಿ ಬದಲಾಯಿಸುವಂತಿರಬೇಕು. ಸಹಿಯ ಅಗತ್ಯತೆ ವಿಚಾರದಲ್ಲಿ ಭಾರತದಲ್ಲಿ ಈವರೆಗೆ ಅಂತಹ ಸಮಸ್ಯೆಗಳೇನೂ ಆಗಿಲ್ಲ. ಚುನಾವಣಾ ಠೇವಣಿಗೆ ಪ್ರತಿಯಾಗಿ ಸಹಿಯ ಅಗತ್ಯತೆಯು ಪ್ರಜಾಸತ್ತೆಯ ಹುರುಪನ್ನು ಇನ್ನಷ್ಟು ಹೆಚ್ಚಿಸಿದೆ. ಏಕೆಂದರೆ ಇದರಲ್ಲಿ ಬಡವರು–ಶ್ರೀಮಂತರೆಂಬ ತಾರತಮ್ಯವಿರುವುದಿಲ್ಲ. ಹಾಗಾಗಿ, ಪ್ರಜಾಪ್ರಾತಿನಿಧ್ಯ ಕಾಯ್ದೆಯಲ್ಲಿ ಬದಲಾವಣೆ ತಂದು ಈ ಅಗತ್ಯತೆಯನ್ನು ಬಲಿಷ್ಠಗೊಳಿಸಬೇಕಾಗಿದೆ. ಇಲ್ಲಿರುವ ಪ್ರಮುಖ ಪ್ರಶ್ನೆಯೆಂದರೆ: ನಿಜಕ್ಕೂ ಬದಲಾವಣೆ ಆಗಬೇಕೇ?. ಭಾರತದ ರಾಜಕೀಯ ಪಕ್ಷಗಳೂ ಕೆಲವೊಮ್ಮೆ ತಮ್ಮ ಸಿನಿಕ ವರ್ತನೆಯು ಕೇವಲ ಪ್ರತಿಸ್ಪರ್ಧಿಗಳಿಗೆ ಮಾತ್ರವಲ್ಲ, ತಮಗೂ ಸಮಸ್ಯೆ ಉಂಟುಮಾಡುತ್ತವೆ ಎಂಬುದುನ್ನು ಮನಗಂಡಿವೆ. ಈ ಹಿಂದೆ, ಅಂತಹ ಎಲ್ಲ ಪಕ್ಷಗಳೂ ಒಂದಾಗಿ ತಮ್ಮ ತಮ್ಮ ಹಿತಾಸಕ್ತಿಗಾಗಿ ಕ್ಲಿಷ್ಟ ಪಕ್ಷಾಂತರ ವಿರೋಧಿ ಕಾನೂನನ್ನು ಜಾರಿಗೆ ತಂದವು. ಮತ್ತೊಮ್ಮೆ ಈ ಪಕ್ಷಗಳು ಸಂವೇದನೆಯಿಂದ ವರ್ತಿಸಲಿ ಎಂಬುದೇ ಎಲ್ಲರ ಆಶಯ. ❑

**ಯೋಜನಾ ಆಗಸ್ಟ್ 2014**

**ವಿಶೇಷ ಸಂಚಿಕೆ ವಿಷಯ**

## ಕೇಂದ್ರ ಬಜೆಟ್ ಹಾಗೂ ನಗರ ಯೋಜನೆ

# ಪ್ರಜಾತಂತ್ರ : ಚುನಾವಣೆ – ಸುಧಾರಣೆ ಹೇಗೆ?

ಸುಬ್ರತಾ ಕೆ. ಮಿತ್ರಾ
ಕನ್ನಡಕ್ಕೆ : ಕುಚ್ಚಣ್ಣ ಶ್ರೀನಿವಾಸನ್



> ಬೃಹತ್ ಪ್ರಮಾಣದ ಚುನಾವಣೆಯನ್ನು ಯಶಸ್ವಿಯಾಗಿ ನಡೆಸಿದ ಸಡಗರದಲ್ಲಿ ಭದ್ರತಾ ಪಡೆಗಳನ್ನು ನಿಯೋಜಿಸುವ ಅನಿವಾರ್ಯತೆಯಿಂದಾಗಿ 2014ರ ಚುನಾವಣೆಯನ್ನು ಒಂಭತ್ತು ಹಂತಗಳಲ್ಲಿ ನಡೆಸಬೇಕಾಗಿ ಬಂದ ನಗ್ನ ಸತ್ಯವನ್ನು ಮರೆಯುವಂತಿಲ್ಲ.

ಹದಿನಾರನೇ ಲೋಕ ಸಭೆಯ ಚುನಾವಣೆಯ ಪ್ರಾಮುಖ್ಯತೆಯ ಬಗ್ಗೆ ಸಂಭ್ರಮಿಸಲು ಪ್ರಪಂಚದ ಎಲ್ಲೆಡೆಯ ಪ್ರಜಾಪ್ರಭುತ್ವವಾದಿಗಳಿಗೆ ಸಾಕಷ್ಟು ಕಾರಣಗಳಿವೆ. ಶೇಕಡ 66.4 ರಷ್ಟು ಮತದಾರರು ಭಾಗವಹಿಸಿದ್ದು ಒಂದು ದಾಖಲೆ. ಸಾರ್ವತ್ರಿಕ ಮತದಾನದ ಹಕ್ಕುಗಳು ದೊರೆತಾಗಿನಿಂದ ಪರಿಗಣಿಸಿದರೂ ಇದು ಅತ್ಯಧಿಕ ಪ್ರಮಾಣದ ಮತದಾನ (ಕೋಷ್ಟಕ 1 – ಅನ್ನು ಗಮನಿಸಿ) ಇದು ಪ್ರಪಂಚ ಅತಿ ದೊಡ್ಡ ಪ್ರಜಾಪ್ರಭುತ್ವವಾದ ಭಾರತವನ್ನು ಮತದಾನದಲ್ಲಿ ಅಧಿಕ ಪ್ರಮಾಣದಲ್ಲಿ ಜನರು ಭಾಗವಹಿಸುವ ದೇಶಗಳ ಪಟ್ಟಿಗೆ ಸೇರಿಸುತ್ತದೆ. ಪ್ರಚಾರ ದೀರ್ಘವಾಗಿ ಮತ್ತು ಒರಟಾಗಿ ಇದ್ದಾಗ್ಯೂ ಚುನಾವಣೆ ಮಾತ್ರ ಒಟ್ಟಾರೆ ಶಾಂತಿಯುತವೂ, ವ್ಯವಸ್ಥಿತವೂ, ಮುಕ್ತವೂ ಮತ್ತು ನಿಷ್ಪಕ್ಷಪಾತವೂ ಆಗಿತ್ತು ಅನ್ನುವುದು ಭಾರತದ ಪ್ರಜಾಪ್ರಭುತ್ವದ ಆಂತರಿಕ ಸತ್ವಕ್ಕೂ ದೃಢತೆಗೂ ಒಂದು ಪ್ರಮಾಣವೇ ಸರಿ. ಈ ಲೇಖನವು ಚುನಾವಣಾ ಪ್ರಕ್ರಿಯೆ ಮತ್ತು ಭಾರತದಲ್ಲಿ ಪ್ರಜಾಪ್ರಭುತ್ವವನ್ನು ಬಲಪಡಿಸುವುದರ ಬಗ್ಗೆ ಒಂದು ಕಿರು ನೋಟವನ್ನು ಸಾದರಪಡಿಸುತ್ತದೆ ಮತ್ತು ಪ್ರಜಾತಾಂತ್ರಿಕ ವ್ಯವಸ್ಥೆಯನ್ನು ಸಶಕ್ತಗೊಳಿಸಬಲ್ಲ ಕೆಲವು ಸುಧಾರಣೆಗಳ ಪರವಾಗಿ ವಾದಿಸುತ್ತದೆ.

### ಚುನಾವಣೆಗಳು ಮತ್ತು ಭಾರತದಲ್ಲಿ ಪ್ರಜಾಪ್ರಭುತ್ವವನ್ನು ಬಲಪಡಿಸುವುದು.


ಸ್ವಾತಂತ್ರ್ಯ ನಂತರದ ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ಮೊಟ್ಟ ಮೊದಲ ಬಾರಿಗೆ ವಯಸ್ಕರ ಸಾರ್ವತ್ರಿಕ ಮತದಾನದ ಹಕ್ಕುಗಳನ್ನು ತಾತ್ಪೂರ್ತಿಕ ಚುನಾವಣಾ ನಿಯಮಗಳೊಂದಿಗೆ ಜಾರಿಗೆ ತರಲಾಯಿತು. ಬಲ ಪಂಥೀಯ ಜನಸಂಘ ಮತ್ತು ಕಮ್ಯೂನಿಸ್ಟರೂ ಸೇರಿದಂತೆ ಎಲ್ಲಾ ರಾಜಕೀಯ ಪಕ್ಷಗಳಿಗೆ ಚುನಾವಣೆಯಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಡಲಾಯಿತು. ಮತದಾನದ ಹಕ್ಕುಗಳನ್ನು ವಿಸ್ತರಿಸಿದ್ದರಿಂದ ಮತದಾರರ ಸಂಖ್ಯೆಯು ಬಹು ಬೇಗ ಹೆಚ್ಚಿತು ಮತ್ತು ಚುನಾವಣಾ ಪ್ರಕ್ರಿಯೆಯಲ್ಲಿ ಈ ಹಿಂದೆ ಭಾಗವಹಿಸಿದ ಅನುಭವವಿಲ್ಲದ ಅಧಿಕ ಸಂಖ್ಯೆಯ ಮತದಾರರು ರಾಜಕೀಯ ರಂಗದೊಳಕ್ಕೆ ಬರುವಂತಾಯಿತು. ಹೀಗೆ ಇದ್ದಕ್ಕಿದ್ದಂತೆ ಹೊಸ ಮತದಾರರನ್ನು ಕರೆತಂದಿದ್ದು ಸಂಸದೀಯ ಪ್ರಜಾಪ್ರಭುತ್ವ ಮತ್ತು ರಾಜಕೀಯ ವ್ಯವಸ್ಥೆಗೆ, ಅದರಲ್ಲೂ ದೇಶದ ವಿಭಜನೆಯೊಡನೆ ಸಂಭವಿಸಿದ ಹಿಂಸಾಚಾರದ ಜೊತೆಗೂಡಿ ಆಘಾತಕಾರಿಯಾಗಬಹುದಿತ್ತು. ಆದರೆ ನಿರಾತಂಕವಾಗಿ ಮುಂದುವರೆದ ಪ್ರಭುತ್ವದ ಸಂಸ್ಥೆಗಳು ಮತ್ತು ನಾಯಕರು – ಅವರ ಬೆಂಬಲಿಗರ ಸಂಬಂಧಗಳ ಸಂರಚನೆಗಳ ಕಾರಣಗಳಿಂದ ನಂತರದ ಸಂಸದೀಯ ಪ್ರಜಾಪ್ರಭುತ್ವದ ಜೀವಿತಾವಧಿಯಲ್ಲಿ ಪಕ್ಷಗಳು ಮತ್ತು ಚುನಾವಣೆಗಳು ಸ್ವಾತಂತ್ರ್ಯ ನಂತರದ ಭಾರತದ ರಾಜಕೀಯ ಸಂಸ್ಕೃತಿಯ ಮೂಲ ಮಂತ್ರಗಳಾದವು. ಎಲ್ಲಾ ಸಾಮಾಜಿಕ ಸ್ತರಗಳು ಸೇರಿದಂತೆ ಮತ ಚಲಾಯಿಸುವವರ ಸಂಖ್ಯೆ ಏರುತ್ತಲೇ ಇದೆ. (ಕೋಷ್ಟಕ 1)

ಕೋಷ್ಟಕ 1ರಲ್ಲಿನ ಅಂಕಿಅಂಶಗಳು ಭೂಖಂಡಗಳ ಪ್ರಮಾಣದಲ್ಲಿ ಚುನಾವಣಾ

ಅಧ್ಯಾಪಕರು, ರಾಜ್ಯ ಶಾಸ್ತ್ರ, ದಕ್ಷಿಣ ಏಷಿಯಾ ಸಂಸ್ಥೆ, ಹೈಡಲ್ ಬರ್ಗ್ ವಿಶ್ವವಿದ್ಯಾಲಯ. Email : Mitra@uni-heidelberg.de

ಪ್ರಕ್ರಿಯೆಯನ್ನು ನಿರ್ವಹಿಸುವಲ್ಲಿ ಭಾರತದ ಯಶಸ್ಸನ್ನು ನಿರೂಪಿಸುತ್ತವೆ. ಬೃಹತ್ ಪ್ರಮಾಣದ ಬಡತನ ಅನಕ್ಷರತೆಗಳಿದ್ದಾಗ್ಯೂ ಒಂದು ಸ್ವತಂತ್ರ ಚುನಾವಣಾ ಆಯೋಗದ ಸುಪರ್ದಿಯಲ್ಲಿ ಬೃಹತ್ ಸಂಖ್ಯೆಯ ಮತದಾರರನ್ನು ಒಳಗೊಂಡ ಚುನಾವಣೆಗಳನ್ನು ವ್ಯವಸ್ಥೆಗೊಳಿಸಿದೆ. ಸುಲಭವಾಗಿ ಕಾಲ್ನಡಿಗೆಯಲ್ಲಿ ಕ್ರಮಿಸಬಹುದಾದಷ್ಟು ಸಮೀಪದಲ್ಲೇ ಅವರಿಗೆ ಮತಕೇಂದ್ರಗಳನ್ನು ಒದಗಿಸಬೇಕಾದ ಕಾನೂನಿನ ನಿರ್ಬಂಧವೂ ಈ ಆಯೋಗಕ್ಕಿದೆ!

ಪ್ರಚಾರಾಂದೋಳನಗಳನ್ನು ತೀವ್ರವಾಗಿ ಗಮನಿಸಲಾಗುವುದು. ಚುನಾವಣಾ ಅಕ್ರಮಗಳು ಅಥವಾ ಹಿಂಸಾಚಾರ ನಡೆದಾಗ ಮತದಾನವನ್ನು ತಡೆದು ಪುನರ್ ಮತದಾನ ನಡೆಯುವಂತೆ ಆದೇಶ ಹೊರಡಿಸುವುದು ಅಪರೂಪವೇನಲ್ಲ.



### ನ್ಯಾಯಪರತೆ

ಸಾರ್ವಜನಿಕ ಅಭಿಪ್ರಾಯಕ್ಕೆ ಸಂಬಂಧಿಸಿದ ದತ್ತಾಂಶ ಲಭ್ಯವಿರುವುದರಿಂದ ಭಾರತದ ವಿವಿಧ ವರ್ಗಗಳಲ್ಲಿ ಚುನಾವಣೆಗಳ ಬಗ್ಗೆ ಇರುವ ವಿಶ್ವಾಸಾರ್ಹತೆಯನ್ನು ಅಳೆಯಬಲ್ಲವರಾಗಿದ್ದೇವೆ. 'ನಿಮ್ಮ ಮತಕ್ಕೆ ಬೆಲೆಯುಂಟೆ' ಅನ್ನುವ ಪ್ರಶ್ನೆಗೆ ಉತ್ತರವಾಗಿ 1971ರಲ್ಲಿ ಒಟ್ಟು ಜನಸಂಖ್ಯೆಯ ಶೇಕಡ 48.5 ರಷ್ಟಿದ್ದ ವಿಶ್ವಾಸಾರ್ಹತೆಯ ಈ ಏರಿಕೆಯು ಈ ಪ್ರಶ್ನೆಗೆ ಉತ್ತರ ನೀಡಲು ಅಸಮರ್ಥರು ಅಥವಾ ಯಾವುದೇ ಅಭಿಪ್ರಾಯ ಹೊಂದಿಲ್ಲದವರ ಸಂಖ್ಯೆಯ ಇಳಿಕೆಯಿಂದ ಆಗಿರುವ ಒಂದು ಕುತೂಹಲಕರ ಅಂಶ! ಈ ಪ್ರಶ್ನೆಗೆ ಇಲ್ಲ ಎಂದು ಉತ್ತರಿಸಿದವರ ಸಂಖ್ಯೆಯ ಶೇಕಡಾವಾರು ಕಳೆದ ಐದು ದಶಕಗಳಲ್ಲಿ ಅಂದರೆ 1971 ರಿಂದ 2004ರವರೆಗೆ ಒಂದೇ ಸಮನಾಗಿ ಕನಿಷ್ಠ ಮಟ್ಟದಲ್ಲೇ (ಐದನೇ ಒಂದು ಭಾಗ) ಉಳಿದಿದೆ. ಹೀಗೆ 1996 ಮತ್ತು 2004ರಲ್ಲಿ, ಹೆಚ್ಚಿನ ವಿಶ್ವಾಸಾರ್ಹತೆಯನ್ನು ವ್ಯಕ್ತಪಡಿಸಿದವರು ಸಾಮಾನ್ಯವಾಗಿ ಗಂಡಸರು ಮೇಲ್ವರ್ಗ ಮತ್ತು ಮೇಲ್ಜಾತಿಗೆ ಸೇರಿದ ಉನ್ನತ ಮಟ್ಟದ ವಿದ್ಯಾವಂತರು.

ಆದರೆ ಪರಿಶಿಷ್ಟ ಜಾತಿಯವರು, ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರು ಸಹ ಹೆಚ್ಚಿನ ಮಟ್ಟದ ವಿಶ್ವಾಸಾರ್ಹತೆಯನ್ನು ವ್ಯಕ್ತಪಡಿಸಿರುತ್ತಾರೆ. ಮತದಾರರ ವಿಶಿಷ್ಟ ಆಸಕ್ತ ಸಮೂಹಗಳನ್ನು ಮಹತ್ವಾಕಾಂಕ್ಷಿ ನಾಯಕರುಗಳು ರಾಜಕೀಯವಾಗಿ ಪ್ರೇರೇಪಿಸುವ ಪರಿಣಾಮ ಇದು. (ಮಿತ್ರಾ ಮತ್ತು ಸಿಂಗ್ 2009).

ನ್ಯಾಯಪರತೆಯ ಬಗ್ಗೆಯೂ ವಿಶ್ವಾಸ ಅರ್ಹತೆ ಅಂತಹುದೇ ಮಾದರಿಯನ್ನು ಗಮನಿಸಬಹುದು. ಇಲ್ಲಿ ಪ್ರಶ್ನೆಯನ್ನು ನೇತ್ಯಾತ್ಮಕವಾಗಿ ಕೇಳಲಾಯಿತು; ಪಕ್ಷಗಳು, ಚುನಾವಣೆಗಳು ಮತ್ತು ವಿಧಾನ ಮಂಡಲಗಳಿರುವ ಈಗಿನ ಸಂಸದೀಯ ವ್ಯವಸ್ಥೆಯನ್ನು ಇವ್ಯಾವೂ ಇಲ್ಲದ ರಾಜಕೀಯ ವ್ಯವಸ್ಥೆಗೆ ಪರ್ಯಾಯ ಆಯ್ಕೆ ಮಾಡುವವರು 'ಇಲ್ಲ' ಅನ್ನುವ ಮೂಲಕ ಸ್ಪಷ್ಟವಾಗಿ ಉತ್ತರಿಸುವಂತೆ

**ಕೋಷ್ಟಕ : 1 – ಚುನಾವಣಾ ದತ್ತಾಂಶ**

**ಭಾರತೀಯ ಸಂಸದೀಯ ಚುನಾವಣೆಗಳು 1952–2014**

| ವರ್ಷ | ಸ್ಥಾನಗಳು | ಅಭ್ಯರ್ಥಿಗಳು | ಮತಕೇಂದ್ರಗಳು | ಮತದಾರರು (ಹತ್ತು ಲಕ್ಷಗಳು) | ಬಿದ್ದಮತಗಳು (ಹತ್ತು ಲಕ್ಷಗಳು) | ಮತದಾನ % |
|---|---|---|---|---|---|---|
| 1952 | 489 | 1874 | 132,560 | 173.2 | 79.1 | 45.7 |
| 1957 | 494 | 1519 | 220,478 | 193.7 | 92.4 | 47.7 |
| 1962 | 494 | 1985 | 238,355 | 217.7 | 120.6 | 55.4 |
| 1967 | 520 | 2369 | 267,555 | 250.6 | 153.6 | 61.3 |
| 1971 | 518 | 2784 | 342,944 | 274.1 | 151.6 | 55.3 |
| 1977 | 542 | 2439 | 373,908 | 321.2 | 194.3 | 60.5 |
| 1980 | 529 | 4629 | 434,742 | 363.9 | 202.7 | 56.9 |
| 1984 | 542 | 5493 | 479,214 | 400.1 | 256.5 | 64.1 |
| 1989 | 529 | 6160 | 579,810 | 498.9 | 309.1 | 62.0 |
| 1991 | 534 | 8780 | 588,714 | 511.5 | 285.9 | 55.9 |
| 1996 | 543 | 13952 | 767,462 | 592.6 | 343.3 | 57.9 |
| 1998 | 539 | 4708 | 765,473 | 602.3 | 373.7 | 62.0 |
| 1999 | 543 | 4648 | 774,651 | 619.5 | 371.7 | 60.0 |
| 2004 | 543 | 5435 | 687,402 | 671.5 | 389.9 | 58.1 |
| 2009 | 543 | – | 828,804 | 716,0 | – | 56,9 |
| 2014 | 543 | – | 930,000 | 814.0 | – | 66,4 |

ಪ್ರಶ್ನೆಯನ್ನು ನೇತ್ಯಾತ್ಮಕವಾಗಿ ಕೇಳಲಾಯಿತು. (ಕ್ಲಿಪ್ ಬೋರ್ಡ್ ಕೈಯಲ್ಲಿ ಹಿಡಿದು ಎದುರಿಗೆ ನಿಂತು ನಿರ್ಭಾವುಕವಾಗಿ ತಮ್ಮ ಉತ್ತರಗಳನ್ನು ಬರೆದುಕೊಳ್ಳುತ್ತಿದ್ದ ಕಾಲೇಜು ಯುವಕ ಯುವತಿಯರನ್ನು ಎದುರಿಸುವುದು ಈ ಪ್ರಶ್ನೆಗೆ ಉತ್ತರಿಸುವವರಿಗೇನೂ ಸರಳವಾಗಿರಲಿಲ್ಲ!) 1971 ರಲ್ಲಿ ಶೇಕಡಾ 43.4 ರಷ್ಟಿದ್ದ, ಪ್ರಸ್ತುತ ರಾಜಕೀಯ ವ್ಯವಸ್ಥೆಯನ್ನು ನ್ಯಾಯಪರ ಎಂದು ಪರಿಗಣಿಸುವವರ ಸಂಖ್ಯೆ, 2004 ರಲ್ಲಿ ಶೇಕಡ 72.2ಕ್ಕೆ ಏರಿದ್ದು ಮನ ಮುಟ್ಟುವಂತಿದೆ. ಇಲ್ಲಿಯೂ ಈ ಏರಿಕೆಯು, ವಿಶ್ವಾಸಾರ್ಹತೆ ಬಗ್ಗೆ ಆದಂತೆ ಯಾವುದೇ ಅಭಿಪ್ರಾಯ ಇಲ್ಲದವರು ಅಥವಾ ನಿರ್ಧಾರಕ್ಕೆ ಬರಲಾರದವರ ಸಂಖ್ಯೆ ಕಡಿಮೆಯಾಗುವುದರ ಮೂಲಕ ಉಂಟಾಗಿದೆ. ಸುಮಾರು ಹತ್ತನೇ ಒಂದು ಭಾಗದಷ್ಟು ಮತದಾತರು ಮಾತ್ರ ಸಂಸದೀಯ ಪ್ರಜಾಪ್ರಭುತ್ವಕ್ಕಿಂತ ಅದರ ಪರ್ಯಾಯಗಳು ಉತ್ತಮವೇನೋ ಅನ್ನುವ ಖಚಿತ ಅಭಿಪ್ರಾಯದಲ್ಲೇ ಉಳಿದಿದ್ದಾರೆ. ಮುಂದುವರೆದ ವಿಶ್ಲೇಷಣೆಯಲ್ಲಿ ಉನ್ನತ ವ್ಯಾಸಂಗ ಮಾಡಿದವರು, ಮೇಲ್ಜಾತಿಯವರು, ನಗರವಾಸಿಗಳು, ಗಂಡಸರು ಮತ್ತು ಯುವಜನರು ವ್ಯವಸ್ಥೆಯ ನ್ಯಾಯಪರತೆಯ ಬಗ್ಗೆ ಹೆಚ್ಚು ನಂಬಿಕೆ ಉಳ್ಳುವರಾಗಿದ್ದಾರೆ.

### ಭಾರತದ ಚುನಾವಣಾ ಸುಧಾರಣೆಯ ಮೈಲಿಗಲ್ಲುಗಳು

'ಸಾರ್ವತ್ರಿಕ ಮತದಾನದ ಹಕ್ಕು' ಎಂಬ ಆಮದು ಮಾಡಿಕೊಂಡ ಪದ್ಧತಿಯನ್ನು ಭಾರತದ ಪರಿಸ್ಥಿತಿಗೆ ಅಳವಡಿಸಿಕೊಳ್ಳುವಲ್ಲಿ ಭಾರತದ ಚುನಾವಣಾ ಪ್ರಕ್ರಿಯೆಗೆ ಒತ್ತಾಸೆಯಾಗಿರುವ ಇಲ್ಲಿನ ಸಂಸ್ಥೆಗಳು, ಕಾಯಿದೆಗಳು ಮತ್ತು ಮಾದರಿಗಳು ವಿಕಾಸಗೊಳ್ಳುವಲ್ಲಿ ಅದ್ಭುತವಾದ ಜಾಣತನವನ್ನು ತೋರಿವೆ. ಮೊಟ್ಟ ಮೊದಲ ಚುನಾವಣಾ ನಿಯಮಾವಳಿಯಲ್ಲೇ ಬಹು ಸದಸ್ಯ ಮತಕ್ಷೇತ್ರಗಳ ಪದ್ಧತಿಯನ್ನು ಕೈಬಿಟ್ಟು ಏಕ ಸದಸ್ಯ ಮತಕ್ಷೇತ್ರಗಳ ಪದ್ಧತಿಯನ್ನು ಉಳಿಸಿಕೊಳ್ಳಲಾಯಿತು. ಜಾತಿ, ಪಂಗಡ, ಭಾಷೆ, ಜನಾಂಗ ಮತ್ತಿತರ ಸನಾತನ ಗುರುತುಗಳಿಂದ ಒಡೆಯಲ್ಪಟ್ಟ ವೈವಿಧ್ಯಮಯ ಸಮಾಜದಲ್ಲಿ ಸಮತೂಕದ ಪ್ರಾತಿನಿಧ್ಯ ನೀಡುವ ಪದ್ಧತಿಯನ್ನು ಅಳವಡಿಸಿಕೊಂಡಿದ್ದರೆ ನಿರೀಕ್ಷಿಸಬಹುದಾಗಿದ್ದ ಸಂಕುಚಿತ ಅಸ್ಮಿತೆಯು ಬಲಗೊಳ್ಳುವ ಬದಲಾಗಿ



ಸಾಮಾನ್ಯ ರಾಜಕೀಯ ವರ್ಗಗಳನ್ನು ಸೃಷ್ಟಿಸಿಕೊಳ್ಳಲು ಅನಿವಾರ್ಯವಾದ ಹಿತಾಸಕ್ತಿಗಳ ಕ್ರೋಢೀಕರಣಕ್ಕೆ ಇದರಿಂದ ಸಹಾಯವಾಯಿತು. ಸವಲತ್ತುಗಳಿಲ್ಲದವರು ಅಥವಾ ದುರ್ಬಲರು ಇಂತಹ ವಿಶೇಷ ವರ್ಗಗಳಿಗೆ ಪ್ರಾತಿನಿಧ್ಯವನ್ನು ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ (ಸ್ಥಳೀಯ ಚುನಾವಣೆಗಳಲ್ಲಿ) ಮಹಿಳೆಯರಿಗೆ ಮತ್ತು ಆಂಗ್ಲೋ ಇಂಡಿಯನ್‌ರಿಗೆ ಮೀಸಲಾತಿಯನ್ನು ಉಳಿಸಿಕೊಳ್ಳಲಾಯಿತು. ಕೇಂದ್ರಕ್ಕೆ ಹೋಲಿಸಿದರೆ ರಾಜ್ಯಗಳಿಗೆ ಸಮಾನ ಬೆಲೆ ಇರುವಂತೆ ರಾಷ್ಟ್ರಪತಿಗಳ ಆಯ್ಕೆಗೆ ಸಮ ತೂಕದ ಪ್ರಾತಿನಿಧ್ಯ ನೀಡುವ ಪದ್ಧತಿಯನ್ನು ಉಳಿಸಿಕೊಳ್ಳಲಾಯಿತು. ಹಲವಾರು ತಿದ್ದುಪಡಿಗಳು ಪ್ರಜಾ ತಾಂತ್ರಿಕ ಪ್ರಕ್ರಿಯೆಯನ್ನು ಬಲಗೊಳಿಸಿವೆ ಮತ್ತು ಚುನಾವಣೆಯ ವ್ಯಾಪ್ತಿಯನ್ನು ಹಿಗ್ಗಿಸಿವೆ. ಸಂವಿಧಾನದ ಆರ್ಟಿಕಲ್ 101, 102, 190 ಮತ್ತು 191 ಗಳ ಮೇಲೆ ಪರಿಣಾಮ ಬೀರುವಂತೆ 52ನೇ ತಿದ್ದುಪಡಿಯ ರೂಪದಲ್ಲಿ 1985ರಲ್ಲಿ ಜಾರಿಗೆ ತಂದ ಪಕ್ಷಾಂತರ ನಿಷೇಧ ಕಾಯಿದೆ ವ್ಯಕ್ತಿಗಳು ತಾವು ಆಯ್ಕೆಯಾದ ಪಕ್ಷದಿಂದ ಪಕ್ಷಾಂತರಗೊಳ್ಳುವುದನ್ನು ನಿಷೇಧಿಸುವ ಮೂಲಕ ಪ್ರಾತಿನಿಧ್ಯದ ಶಕ್ತಿಯನ್ನು ಹೆಚ್ಚಿಸಿದೆ. ಆರ್ಟಿಕಲ್ 326ಕ್ಕೆ ತಿದ್ದುಪಡಿ (61 ನೇ) ತಂದು ಮತದಾನದ ವಯೋಮಿತಿಯನ್ನು 21 ರಿಂದ 18ಕ್ಕೆ ಇಳಿಸುವ ಮೂಲಕ ಮತದಾನದ ಹಕ್ಕಿನ ವ್ಯಾಪ್ತಿಯನ್ನು ಬಹಳವಾಗಿ ವಿಸ್ತರಿಸಲಾಗಿದೆ. 1993ರಲ್ಲಿ ತಂದ 73ನೇ ತಿದ್ದುಪಡಿಯು ಒಕ್ಕೂಟ ವ್ಯವಸ್ಥೆಗೆ ಒಂದು ಕಾಯಿದೆ ಪ್ರಕಾರ ಅನಿವಾರ್ಯವಾದ ಮೂರನೆಯ ಹಂತವನ್ನು ಪರಿಚಯಿಸಿದೆ. ಮೊದಲ ಬಾರಿಗೆ ಸ್ಥಳೀಯ ಮಟ್ಟದಲ್ಲಿ ನೇರವಾದ ಪ್ರಜಾಪ್ರಭುತ್ವವನ್ನು ಜಾರಿಗೆ ತರಲಾಗಿದೆ ಮತ್ತು ಅಲ್ಲಿ ಸದಸ್ಯತ್ವದ ಮೂರನೇ ಒಂದು ಭಾಗ ಮಹಿಳೆಯರಿಗೆ ಮೀಸಲಿಡುವುದರ ಮೂಲಕ ಮಹಿಳೆಯರನ್ನು ಸಶಕ್ತರನ್ನಾಗಿಸಿದೆ. 1975 ರ ತಾರಕುಂಡೆ ಸಮಿತಿ ವರದಿ, 1990 ರ ಗೋಸ್ವಾಮಿ ಸಮಿತಿ ವರದಿ ಮತ್ತು 1998ರ ಚುನಾವಣಾ ಆಯೋಗದ ಶಿಫಾರಸುಗಳಂತಹ ಸಾಂಸ್ಥಿಕ ಪ್ರಯತ್ನಗಳು ಮೂಲಕ ಚುನಾವಣೆ ನಡೆಸುವುದನ್ನು ಉತ್ತಮಪಡಿಸುವುದು ಹೇಗೆ ಅನ್ನುವ ಬಗ್ಗೆ ಸಾಕಷ್ಟು ತಿಳಿವಳಿಕೆಯನ್ನು ಸಂಗ್ರಹಿಸಿಡಲಾಗಿದೆ. ಎಲ್ಲಕ್ಕಿಂತ ವಿನೂತನ ಚುನಾವಣಾ ಪ್ರಕ್ರಿಯೆಗಳನ್ನು ಮಾತ್ರ ಮುಕ್ತ ಮತ್ತು ನಿಷ್ಪಕ್ಷಪಾತ ಚುನಾವಣೆಗಳ ರಕ್ಷಕಕನಾಗಿ (ಮ್ಯಾಕ್‌ಮಿಲನ್ 2010) ಸಂವಿಧಾನ ಸೃಷ್ಟಿಸಿದ (ಆರ್ಟಿಕಲ್ 324) ಭಾರತದ ಚುನಾವಣಾ ಆಯೋಗವೇ ಅನ್ವೇಷಿಸಿದೆ. ಪ್ರತಿ ಚುನಾವಣೆಯಲ್ಲೂ ಆಯೋಗವು ರಾಜಕೀಯ ಪಕ್ಷಗಳು ಮತ್ತು ಅಭ್ಯರ್ಥಿಗಳಿಗಾಗಿ ಒಂದು ಮಾದರಿ ಆಚಾರ ಸಂಹಿತೆಯನ್ನು ಹೊರಡಿಸುತ್ತದೆ. ಆಯೋಗವು ಮೊದಲನೆಯ ಬಾರಿಗೆ 1971ರಲ್ಲಿ (5ನೇ ಚುನಾವಣೆ) ಈ ಆಚಾರ ಸಂಹಿತೆಯನ್ನು ಹೊರಡಿಸಿತು ಮತ್ತು ಆಗಿಂದಾಗ್ಗೆ ಪರಿಷ್ಕರಿಸುತ್ತಾ ಬಂತು. ಇದು ಆಯೋಗ ದೇಶಕ್ಕೆ ಮಾಡಿದ ಉತ್ತಮ ಸೇವೆ. ಆದರೂ ಮತ್ತೂ ಹೆಚ್ಚಿನ ಸುಧಾರಣೆಯು ಬೇಕಾಗಿದೆ ಎಂದು ಈ ಮುಂದಿನ ಭಾಗದಲ್ಲಿ ವಾದಿಸಲಾಗಿದೆ.

ಬೃಹತ್ ಪ್ರಮಾಣದ ಚುನಾವಣೆಯನ್ನು ಯಶಸ್ವಿಯಾಗಿ ನಡೆಸಿದ ಸಡಗರದಲ್ಲಿ ಭದ್ರತಾ ಪಡೆಗಳನ್ನು ನಿಯೋಜಿಸುವ ಅನಿವಾರ್ಯತೆಯಿಂದಾಗಿ 2014ರ ಚುನಾವಣೆಯನ್ನು ಒಂಭತ್ತು ಹಂತಗಳಲ್ಲಿ ನಡೆಸಬೇಕಾಗಿ ಬಂದ ನಗ್ನ ಸತ್ಯವನ್ನು ಮರೆಯುವಂತಿಲ್ಲ. ಚುನಾವಣೆ

ನಡೆಸಲು ಸೇನಾ ಪಡೆಗಳು ಬೇಕೆನಿಸುವುದು, ಹೊಳೆಯುವ ಹೊಸ ಎಲೆಕ್ಟ್ರಾನಿಕ್ ಮತಯಂತ್ರಗಳು, ಉತ್ತೇಜಿತ ಮತಕಟ್ಟೆಗಳ ಸಿಬ್ಬಂದಿ ಮತ್ತು ಟಿವಿ ಕ್ಯಾಮರಗಳಲ್ಲಿ ಕಾಣಿಸಿಕೊಳ್ಳುವ ಮುದ್ದು ಮುಖಗಳ ಹಿಂದೆ ಹಬ್ಬಿದ ಹಿಂಸಾಚಾರದ ಕರಾಳ ಛಾಯೆಯೆಡೆಗೆ ಬೆರಳು ತೋರುತ್ತಿದೆ. ಛತ್ತೀಸ್‌ಗಢದಲ್ಲಿ ಮಾವೋವಾದಿಗಳು ಹಗಲಿನಲ್ಲೇ ನಡೆಸಿದ ದಾಳಿಯಲ್ಲಿ ಕೊಲ್ಲಲ್ಪಟ್ಟ ಅರೆಸೇನಾ ಪಡೆಗಳ ಸದಸ್ಯರ ದೇಹಗಳನ್ನು ಪೊಲೀಸ್ ಠಾಣೆಯ ಮುಂದೆ ಬಯಲಿನಲ್ಲಿ ರಾಶಿ ಹಾಕಿದ್ದ ದಾರುಣ ದೃಶ್ಯವು ಪೂರ್ವಭಾರತದ ನಕ್ಸಲ್ ಪೀಡಿತ ಪ್ರದೇಶಗಳನ್ನು ಚುನಾವಣಾ ಪ್ರಚಾರದ ವೇಳೆ ನಡೆದ ಹಿಂಸಾಚಾರದ ಒಂದು ಭೀಕರ ನೆನಪು. ಚುನಾವಣಾ ಘೋಷಣೆ ಮತ್ತು ಈ ಕೊಲೆಗಳು ಒಮ್ಮೆಗೇ ನಡೆದದ್ದು ಆಕಸ್ಮಿಕವಲ್ಲ. ರಕ್ಷಣಾ ಪಡೆಗಳ ವಿರುದ್ಧ ಸೆಣೆಸುವುದು ಮಾವೋವಾದಿಗಳಿಗೆ ಸ್ಥಳೀಯವಾಗಿ ತಮ್ಮ ನಿಯಂತ್ರಣವನ್ನು ಸಮರ್ಥಿಸಿಕೊಳ್ಳುವ ಅತಿ ಪರಿಣಾಮಕಾರಿ ಮಾರ್ಗ.

ಈ ರೀತಿಯ ದಾಳಿಗಳು ಪಕ್ಕಾ ಲೆಕ್ಕಾಚಾರದ ಕ್ರಮಗಳು. ತಮ್ಮ ಪ್ರಭಾವ ಎತ್ತಿ ತೋರಿಸುವ ಮತ್ತು ಶಸ್ತ್ರಾಸ್ತ್ರಗಳನ್ನು ಲೂಟಿ ಮಾಡುವುದಲ್ಲದೇ ತಾವು ಈಗಾಗಲೇ ಘೋಷಿಸಿರುವ ಚುನಾವಣಾ ಬಹಿಷ್ಕಾರವನ್ನು ಜಾರಿಗೊಳಿಸುವ ತಮ್ಮ ದೃಢ ನಿಶ್ಚಯವನ್ನು ತೋರಿಸುವುದೂ ಆಗಿದೆ. ಈ ರೀತಿಯ ಹಿಂಸಾತ್ಮಕ ಬೆದರಿಕೆಗಳಿಂದಲೇ ಮತದಾನದ ರಕ್ಷಣೆಗಾಗಿ ಸೇನಾ ಪಡೆಗಳನ್ನು ನಿಯೋಜಿಸಲು ಮತ್ತು ಸಾಗಿಸಲು ಒಂಭತ್ತು ಹಂತಗಳಲ್ಲಿ ಹಂಚಿಹೋದ ಮತದಾನದ ಅವಶ್ಯಕತೆ ಉಂಟಾಗಿದೆ. ಪ್ರಕ್ಷುಬ್ಧ ಪ್ರದೇಶಗಳಾದ ಜಮ್ಮು ಕಾಶ್ಮೀರ ಮತ್ತು ಈಶಾನ್ಯಕ್ಕಷ್ಟೇ ಅಲ್ಲ. ಇಡೀ ದೇಶಕ್ಕೆ ಸೇನಾ ಪಡೆಗಳ ಹಾಜರಾತಿ ಅನಿವಾರ್ಯವಾಗಿದೆ. ವಿಪರ್ಯಾಸವೆಂದರೆ ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವಕ್ಕೆ ಒಮ್ಮತವನ್ನು ಸೇನೆಯ ರಕ್ಷಣೆಯಲ್ಲಷ್ಟೇ ಪಡೆಯಲು ಸಾಧ್ಯ.

ರೋಗವನ್ನು ಗುಣಪಡಿಸಲು ಸುಧಾರಣೆ ಅವಶ್ಯವೆನ್ನುವ ಮಾತು ಎಲ್ಲೆಡೆ ಪ್ರಚಲಿತಗೊಂಡಿದೆ. ಒಬ್ಬ ವ್ಯಾಖ್ಯಾನಕಾರ ಬರೆಯುತ್ತಾನೆ "ಈ ಘಳಿಗೆಯಲ್ಲಿ ಮಾಡಬೇಕಾದ ಮೊಟ್ಟ ಮೊದಲ ಅತಿ ಮುಖ್ಯ ಕೆಲಸವೆಂದರೆ ಮೂರು ಭಯಂಕರ ಪಿಡುಗುಗಳಾದ ಹಣಬಲ, ತೋಳ ಬಲ ಮತ್ತು ಮಾಫಿಯಾ ಬಲಗಳನ್ನು ತೊಲಗಿಸುವುದು. ಅಲ್ಲದೇ ನಾಲ್ಕು ಅನಿಷ್ಟಗಳಾದ; ಭ್ರಷ್ಟಾಚಾರ ಅಪರಾಧೀಕರಣ, ಜಾತಿವಾದ ಮತ್ತು ಧಾರ್ಮಿಕ ದುರಭಿಮಾನಗಳನ್ನು ತೊಡೆದುಹಾಕಬೇಕಾಗಿದೆ (ಶಂಕರ್ 2014). ಭಾರತದಲ್ಲಿ ರಾಜಕೀಯ ಪರಿಭಾಷೆಯ ಅಂತರಾಳವಾಗಿ ಉಳಿದಿರುವ ಮರಳುಗೊಳಿಸುವ ಆಕರ್ಷಕ ಮಾತುಗಳಲ್ಲಿ ವ್ಯಕ್ತವಾಗುವ, ಇಂತಹ ಆಲೋಚನೆಗಳಿಂದ ನಾವು ಗುರಿ ಮುಟ್ಟಲಾರೆವು. ಯಾಕೆಂದರೆ, ಈ ನೈತಿಕ ಭಾವನೆಗಳನ್ನು ಹುರಿದುಂಬಿಸುವ ತತ್ವದ ಆಧಾರದ ಮೇಲೆ ರೂಪಿತವಾದ ಯಾವುದೇ ನಿರ್ದಿಷ್ಟ ನೀತಿ, ಕ್ರಿಯಾ ಯೋಜನೆ ಅಥವಾ ಸಾಂಸ್ಥಿಕ ವ್ಯವಸ್ಥೆಗೆ ಸಂವಾದಿಯಾಗಿಲ್ಲ. ಪ್ರಚಲಿತ ರಾಜಕೀಯದ ಮೇಲೆ ತನ್ನ ಕರಾಳ ಛಾಯೆಯನ್ನು, ಉದ್ದಕ್ಕೂ ಹರಡಿರುವ ಹಿಂಸಾಚಾರವನ್ನು ಹತ್ತಿಕ್ಕಲು ಮೂರು ವಿಷಯಗಳ ಕಡೆ ತುರ್ತು ಗಮನ ಹರಿಸಬೇಕಾಗಿದೆ. ಮೊದಲನೆಯದು, ರಾಜಕೀಯ ರಂಗದಲ್ಲಿನ ಭ್ರಷ್ಟಾಚಾರ ಮತ್ತು ಅಪರಾಧೀಕರಣಗಳ ನಡುವಿನ ನಂಟು. ದೋಷಾರೋಪಣೆ ಹೊತ್ತ ಶಾಸಕರು, ಕಪ್ಪು ಹಣ, ಲಂಚ ಮತ್ತು ಸ್ವಜನ ಪಕ್ಷಪಾತ ಇವು ಅಪರಾಧ, ಚುನಾವಣಾ ರಾಜಕೀಯ ಮತ್ತು ಅವ್ಯವಸ್ಥೆಗಳ ನಡುವೆ ಇರುವ 'ಕೊಡು-ಕೊಳ್ಳುವ' ಸಂಬಂಧದ ಸಾಕ್ಷ್ಯಗಳು. ಆದ್ದರಿಂದ ಉನ್ನತ ಸ್ಥಾನಗಳಲ್ಲಿರುವ ಜನರ ನ್ಯಾಯಪರತೆಯನ್ನು ಪ್ರಶ್ನಿಸುವಂತಹ ನಡವಳಿಕೆಯನ್ನು ಚುನಾವಣಾ ಆಯೋಗವೇ ದಾಖಲಿಸಬೇಕು. ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಂದ ಎರವಲು ಪಡೆಯುವ ಬದಲು ಚುನಾವಣಾ ಆಯೋಗವು ಕಾನೂನು



ಮತ್ತು ಚುನಾವಣಾ ಸಮಾಜಶಾಸ್ತ್ರಗಳಲ್ಲಿ ಸೂಕ್ತ ತರಬೇತಿ ಪಡೆದ ತನ್ನದೇ ಪ್ರತ್ಯೇಕ ಸಿಬ್ಬಂದಿಯನ್ನು ಹೊಂದಿದ್ದು, ಅದು ನಿಶ್ಚಿತ ಹಣಕಾಸಿನ ವ್ಯವಸ್ಥೆ ಮತ್ತು ಸಾಂವಿಧಾನಿಕ ಸ್ಥಾನಮಾನಗಳನ್ನು ಪಡೆದಿರಬೇಕು. ಭಾರತದ ಎಲ್ಲಾ ಚುನಾವಣಾ ಅಕ್ರಮಗಳಿಗೆ ಒಂದೇ 'ರಾಮಬಾಣ' ಎನಿಸಿರುವ ಮಾದರಿ ಆಚಾರ ಸಂಹಿತೆಯು ಚುನಾವಣೆಯನ್ನು ಒಂದು ಆಯ್ಕೆಯಾಗಿ ಒಪ್ಪಿಕೊಳ್ಳದ ಮಾವೋವಾದಿಗಳ ವಿರುದ್ಧ ಅಸಹಾಯಕ. ಸೂಕ್ತ ನಿಷೇಧಗಳ ಭಯ ತೋರಿಸುತ್ತಾ ಚುನಾವಣಾ ಆಯೋಗವು ಮಾವೋವಾದಿಗಳ ಸಹಾಯವನ್ನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಕೇಳದಂತೆ ಎಲ್ಲಾ ರಾಜಕೀಯ ಪಕ್ಷಗಳಿಗೆ ಗಂಭೀರವಾದ ನಿರ್ದೇಶನವನ್ನು ನೀಡುವುದರಿಂದ ಬಹುಶಃ ಪ್ರಭುತ್ವ ವಿರೋಧಿ ಶಕ್ತಿಗಳಿಗೆ ಸ್ಥಳೀಯ ರಾಜಕೀಯ ಪಕ್ಷಗಳಿಂದ ಮತ್ತು ಅಭ್ಯರ್ಥಿಗಳಿಂದ ದೊರೆಯಬಹುದಾದ ರಕ್ಷಣೆಯನ್ನು ಕಸಿದುಕೊಳ್ಳಬಹುದು. ಇದು ಎರಡನೆಯದು. ಕೊನೆಯದಾಗಿ, ಭಾರತದ ಕಾರ್ಯೋನ್ಮುಖಿ ನ್ಯಾಯಾಂಗ ಮತ್ತು ನಾಗರಿಕ ಸಮಾಜಗಳು 'ಹಸಿದವನು ಕೆರಳುವನು' ಅನ್ನುವುದು ಒಂದು ಅಘಾತಕಾರೀ'ಅರ್ಧ ಸತ್ಯ' ಎನ್ನುವ ಅಂಶವನ್ನು ನೆನಪಿಡಬೇಕು.

**ಕೋಷ್ಟಕ : 2 – ಸಂಸ್ಥೆಗಳಲ್ಲಿ ನಂಬಿಕೆ**

| | ಬಹಳ ಮಟ್ಟಿಗೆ | ಸ್ವಲ್ಪ ಮಟ್ಟಿಗೆ | ಇಲ್ಲವೇ ಇಲ್ಲ |
|---|---|---|---|
| ಚುನಾವಣಾ ಆಯೋಗ | 45.9 | 31.1 | 23.0 |
| ನ್ಯಾಯಾಂಗ | 41.6 | 34.2 | 24.2 |
| ಸ್ಥಳೀಯ ಸರ್ಕಾರ | 39.0 | 37.8 | 23.2 |
| ರಾಜ್ಯ ಸರ್ಕಾರ | 37.2 | 43.6 | 19.2 |
| ಕೇಂದ್ರ ಸರ್ಕಾರ | 35.2 | 42.5 | 22.3 |
| ಚುನಾಯಿತ ಪ್ರತಿನಿಧಿ | 19.9 | 40.4 | 39.7 |
| ರಾಜಕೀಯ ಪಕ್ಷಗಳು | 17.4 | 43.6 | 39.0 |
| ಸರ್ಕಾರಿ ನೌಕರರು | 17.2 | 40.4 | 42.3 |
| ಪೊಲೀಸ್ | 13.0 | 29.9 | 57.1 |

ಮೂಲಭೂತವಾಗಿ ವ್ಯೂಹಾತ್ಮಕ ಚಿಂತಕರಾದ ಕ್ರಾಂತಿಕಾರಿಗಳು ಕೈಗೆಟುಕುವ ಲಾಭಕ್ಕಾಗಿ ಮತ್ತು ಹೊಡೆದು ತಪ್ಪಿಸಿಕೊಳ್ಳುವ ಸದವಕಾಶಕ್ಕಾಗಿ ಎದುರು ನೋಡುತ್ತಿರುವವರು. ಕ್ರಾಂತಿಕಾರಿಗಳನ್ನು ಪಾಲುದಾರರನ್ನಾಗಿಸುವ ಉಪಾಯಕ್ಕೆ ಕೇವಲ ಔಪಚಾರಿಕ ಮಾತುಗಳು ಸಾಲದು. ಬದಲಿಗೆ ಜೊತೆ ಜೊತೆಯಾಗಿ ಜೀವಿಸಲು, ರಕ್ಷಣೆ ಪಡೆಯಲು ಮತ್ತು ಆಸ್ತಿ ಹೊಂದಲು ಹಕ್ಕುಗಳನ್ನು ಖಾತ್ರಿಗೊಳಿಸುವುದು ಮತ್ತು ಕಾನೂನು ಮತ್ತು ಸುವ್ಯವಸ್ಥೆಗಳನ್ನು ಕಾಪಾಡುವ ಸಾಂಸ್ಥಿಕ ವ್ಯವಸ್ಥೆಯೊಳಗೆ ಸ್ಥಳೀಯ ಪಂಚಾಯಿತಿಗಳನ್ನು ಸೆಳೆದುಕೊಳ್ಳುವುದೂ ಆಗಬೇಕಾಗಿದೆ.

ಮಾದರಿ ಆಚಾರ ಸಂಹಿತೆಗೆ ಸಂವೈಧಾನಿಕ ಮಾನ್ಯತೆ ಇಲ್ಲ. ಚುನಾವಣಾ ಆಯೋಗವು ಕೆಲವೊಮ್ಮೆ ತನ್ನ ಅಧಿಕಾರ ವ್ಯಾಪ್ತಿಯನ್ನು ಮೀರುತ್ತಿರುವಂತೆ ಕಾಣಿಸುತ್ತದೆ (ಆಲಿಸ್ಟರ್ ಮ್ಯಾಕ್ ಮಿಲನ್ 2010 ಪು 113) ಉಚ್ಚನ್ಯಾಯಾಲಯ, ಚುನಾವಣಾ ಆಯೋಗದಂತಹ ಸಂಸ್ಥೆಗಳಲ್ಲಿ ಮತ್ತು ಚುನಾಯಿತ ಪ್ರತಿನಿಧಿಯಲ್ಲಿ ಭಾರತದ ಮತದಾರ ಎಷ್ಟರ ಮಟ್ಟಿಗೆ 'ನಂಬಿಕೆ' ಇಟ್ಟಿದ್ದಾರೆ ಅನ್ನುವ ಅಂಕಿ ಅಂಶಗಳು ಕೋಷ್ಟಕ 2ರಲ್ಲಿವೆ. ಸಂಸ್ಥೆಗಳು ಮತ್ತು ಪ್ರತಿನಿಧಿಗಳ ನಡುವೆ ಅಪಾರ ವ್ಯತ್ಯಾಸವಿರುವುದನ್ನು ಗಮನಿಸಬಹುದು. ಆದ್ದರಿಂದ ಬಹುಬೇಗ ನಿರಾಸೆ ಕವಿದು ಹಿಂಸೆಯ ರೂಪ ತಳೆದು ಮರು ಚುನಾವಣೆಗಳನ್ನು ನಡೆಸುವುದು ಅನಿವಾರ್ಯವಾಗುತ್ತದೆ. ದೇಶದಲ್ಲೆಲ್ಲಾ ಹೀಗೆ ಆಗುವುದನ್ನು ತಡೆಯಲು ಜರ್ಮನಿಯಲ್ಲಿರುವಂತೆ (ಪಾರ್ತಿಂಗೆರೆಚ್ಟ್ಸ್) ಆಚಾರ ಸಂಹಿತೆಗೆ ಸಂವೈಧಾನಿಕ ಮಾನ್ಯತೆ ಅವಶ್ಯಕ ಮತ್ತು ಆಯೋಗಕ್ಕೆ ತನ್ನದೇ ಆದ ಅಧಿಕಾರಶಾಹಿ ಬೇಕು. ಹಾಗಾದಾಗ ಚುನಾವಣಾ ಪ್ರಕ್ರಿಯೆ, ಪ್ರಚಾರದ ಹಣಕಾಸಿನ ಮೂಲಗಳು ಮತ್ತು ಪಕ್ಷಗಳು ಹಾಗೂ ಅಭ್ಯರ್ಥಿಗಳ ಮೇಲೆ ವಿಶೇಷವಾಗಿ ಕಣ್ಣಿಡಲು ಮತ್ತು ನಿಯಂತ್ರಿಸಲು ಸಾಧ್ಯವಾಗುತ್ತದೆ.

## ಉಪಸಂಹಾರ

ಯಾವುದೇ ಪ್ರೌಢ ಪ್ರಜಾಪ್ರಭುತ್ವದಲ್ಲಿಯಂತೆ ಭಾರತದಲ್ಲಿಯೂ ಚುನಾವಣೆಗಳೆಂದರೆ ವೈಯಕ್ತಿಕ ಆಯ್ಕೆಗಳು ಸಾಮಾಜಿಕವಾಗಿ ಕ್ರೋಢೀಕೃತಗೊಂಡು ಮುಂದೆ ಶಾಸನ ರಚನೆಯ ಆಧಾರವಾಗಿ ಪರಿವರ್ತನೆಯಾಗುವುದು. ಕಾರ್ಯಾಂಗವನ್ನು ನೀತಿ ನಿರೂಪಣೆ ಮತ್ತು ಆಳ್ವಿಕೆಯಲ್ಲಿನ ಪಾರದರ್ಶಕತೆಗೆ ಉತ್ತರದಾಯಿ ಮಾಡುವ ಮೂಲಕ ಜಾಗೃತ ಮತದಾರ ಪ್ರಜಾಪ್ರಭುತ್ವವನ್ನು ವಿಸ್ತೃತವೂ ಗಹನವೂ ಆಗಿರುವಂತೆ ನೋಡಿಕೊಳ್ಳುವನು. ಭಾರತದಲ್ಲಿ ವಸಾಹತುಶಾಹಿಯಿಂದ ಸ್ಪರ್ಧಾತ್ಮಕ ಚುನಾವಣೆಗಳು ಮತ್ತು ಸಾರ್ವತ್ರಿಕ ಮತದಾನಗಳಿಗೆ ಸಾಗಲು ಸಾಧ್ಯವಾಗಿದ್ದು ಮೊದಲ ಚುನಾವಣೆಗಳಲ್ಲಿ ಸಾಮಾಜಿಕ ಮೇಲ್ವರ್ಗಗಳ ಮತದಾರರ ನೇರ ಸಂಘಟನೆಯಿಂದಲೇ ನಂತರ ವೈವಿಧ್ಯಪೂರ್ಣ ಮತ್ತು ವಿಸ್ತಾರವಾದ ಮತದಾರ ಸಂಘಟನೆ ಆಯಿತು (ಮಿತ್ರ 2014). ಪಾಶ್ಚಿಮಾತ್ಯ ಪ್ರಜಾಪ್ರಭುತ್ವ ಸ್ವಲ್ಪ ಸ್ವಲ್ಪವೇ ಕ್ರಮೇಣ ಬೆಳೆದಂತೆ ಅಲ್ಲದೆ, ವಸಾಹತುಶಾಹಿಯು ಕೊನೆಗೊಂಡಾಗ ಒಮ್ಮೆಗೇ ಜಾರಿಗೆ ತಂದ ಸಾರ್ವತ್ರಿಕ ವಯಸ್ಕ ಮತದಾನದ ಹಕ್ಕು ಯಶಸ್ವಿಯಾಯಿತು. ಸ್ವಾತಂತ್ರ್ಯ ನಂತರದ ಪ್ರಾರಂಭದ ಚುನಾವಣೆಗಳಲ್ಲಿ ಏಕಪಕ್ಷದ ಅಧಿಕಾರ ಬಂದಿತು. ಆದರೆ 1967ರ ಚುನಾವಣೆಯಲ್ಲಿ ಸಮ್ಮಿಶ್ರಣಗಳು ಒಟ್ಟಾರೆ ಭಾರತದ ಚುನಾವಣೆಗಳ ಸ್ಪರ್ಧಾತ್ಮಕತೆಯನ್ನು ಬಲಗೊಳಿಸಿದವು. 1977ರ ಚುನಾವಣೆಯು ಒಂದು ವಿಶಾಲವಾದ ತಳಹದಿಯ ಪಕ್ಷಗಳ ಒಕ್ಕೂಟವನ್ನು ಕೇಂದ್ರದಲ್ಲಿ ಅಧಿಕಾರಕ್ಕೆ ತಂದಿತು. 1989 ರಿಂದೀಚೆಗೆ ಬಹು ಪಕ್ಷೀಯ ಸಮ್ಮಿಶ್ರ ಸರ್ಕಾರಗಳೇ ಖಾಯಂ ಆಗಿದೆ.

ಪ್ರಜಾಪ್ರಭುತ್ವವನ್ನು ಬಲಗೊಳಿಸುವಲ್ಲಿ ಭಾರತದ ಚುನಾವಣಾ ಪ್ರಕ್ರಿಯೆಯ ಯಶಸ್ಸು ಸೆಲಿಗ್ ಹ್ಯಾರಿಸನ್ (1968) ವ್ಯಕ್ತಪಡಿಸಿದ್ದಂತಹ ಆತಂಕಗಳನ್ನು ಸುಳ್ಳೆಂದು ನಿರೂಪಿಸಿದೆ. ಆತ ಅದರ ಸಾವಿನ ಭವಿಷ್ಯ ಕಂಡಿದ್ದ. ಇದ್ದಕ್ಕಿದ್ದಂತೆ ವಿಸ್ತಾರಗೊಂಡ ಮತದಾನದಲ್ಲಿ ಭಾಗವಹಿಸುವಿಕೆಯಿಂದಾಗಿ ಜನಪ್ರಿಯ ಸಂಘಟನೆಯ ಎದುರು ಪ್ರಜಾಪ್ರಭುತ್ವ ಸೋತು ಕಣ್ಮರೆಯಾಗುವುದೆಂದು ನುಡಿದಿದ್ದ ಭವಿಷ್ಯ (ಹಂಟಿಂಗ್ ಟನ್ 1968)ವೂ ಸುಳ್ಳಾಯಿತು. ಕಷ್ಟದ ತೀರ್ಮಾನಗಳನ್ನು ತೆಗೆದುಕೊಳ್ಳಲಾರದ 'ಮೆತ್ತನೆ'ಯ ಪ್ರಭುತ್ವ (ಮಿರ್ಡಲ್ 1970) ಅಥವಾ 'ಶಾಂತವಾದ ಪಾರ್ಶ್ವವಾಯು' ಇತ್ಯಾದಿ ವಿಶ್ಲೇಷಣೆಗಳಿಂದಲೂ ತಪ್ಪಿಸಿಕೊಂಡಿತು. 1880 ರ ದಶಕದಲ್ಲಿ ಬ್ರಿಟಿಷ್ ವಸಾಹತುಶಾಹಿಯ ಅಡಿಯಲ್ಲಿ ಅತ್ಯಂತ ಮಿತವಾಗಿ ಪ್ರಾರಂಭವಾದ ಪ್ರಜಾತಾಂತ್ರಿಕ ಭಾಗವಹಿಸುವಿಕೆಯ ಚುನಾವಣಾ ಆಯೋಗದ ಉಸ್ತುವಾರಿಯಲ್ಲಿ, ಒಂದು ಪ್ರೌಢ ಸಂಸ್ಥೆಯಾಗಿ ಬೆಳೆದು ನಿಂತು ಭಾರತದ ಮತದಾರರ ವೈಯಕ್ತಿಕ ದನಿಗಳ ಮೂಲಕ ಸಮಷ್ಟಿಯ ಆಯ್ಕೆಯನ್ನು ಪ್ರತಿನಿಧಿಸುವ ವಿಶ್ವಾಸಾರ್ಹ ಸಾಧನವಾಗಿ ಹೊರಹೊಮ್ಮಿದೆ.



ಚುನಾವಣಾ ಪ್ರಕ್ರಿಯೆಯ ಮೂಲ ಸಂರಚನೆಗಳಾದ ಏಕ ಸದಸ್ಯ ಮತಕ್ಷೇತ್ರಗಳು ಮತ್ತು ಬಹುಮತ ಚಲಾವಣೆಗಳು ವಸಾಹತೋತ್ತರ ಪ್ರಭುತ್ವ ತುರ್ತು ಅವಶ್ಯಕತೆಗಳನ್ನು ನೀಗಿಸಿವೆ ಎಂದು ನಾನು ಈ ಲೇಖನದಲ್ಲಿ ವಾದಿಸಿದ್ದೇನೆ. ಇದ್ದಕ್ಕಿದ್ದಂತೆ ಪೌರತ್ವಕ್ಕೆ ಜಿಗಿದ ಆಳುವ ವರ್ಗದ ಅಧೀನರಾಗಿ ಸಂಕುಚಿತ ಮತಭೇದಗಳಿಂದ ಛಿದ್ರಗೊಂಡಿದ್ದ ಜನತೆಯಲ್ಲಿ ಹಕ್ಕಿನ, ಶಕ್ತಿಯ ಮತ್ತು ಆರಿಸಿಕೊಳ್ಳಬಲ್ಲ ಸ್ವಾತಂತ್ರದ ಭಾವನೆಯನ್ನು ಇವು ಮೂಡಿಸಿದವು. ತದ ನಂತರದ ಚುನಾವಣಾ ಸುಧಾರಣೆಗಳು ಮತ್ತು ಚುನಾವಣಾ ಆಯೋಗವು ಚುನಾವಣಾ ಪ್ರಕ್ರಿಯೆಯ ಸಶಕ್ತ ಹಾಗೂ ನಿಷ್ಪಕ್ಷಪಾತ ಮೇಲ್ವಿಚಾರಣೆ ಮಾಡಬಲ್ಲ ಹಿಮಾಲಯದ ಎತ್ತರಕ್ಕೆ ಏರಿದ್ದು ಭಾರತವನ್ನು ಪ್ರಜಾಪ್ರಭುತ್ವದೆಡೆಗೆ ನಡೆಸುತ್ತಾ ಬಂದಿದೆ. ಅದನ್ನು ಮತ್ತಷ್ಟು ಗಟ್ಟಿಗೊಳಿಸಿದೆ. ಅಣುಶಕ್ತಿ ಹೊಂದಿದ ಮತ್ತು ಎದ್ದು ನಿಲ್ಲುತ್ತಿರುವ ಆರ್ಥಿಕತೆಯಾದ ಭಾರತವು ಜಾಗತಿಕ ಸ್ಪರ್ಧಾತ್ಮಕ ಸಾಂಸ್ಕೃತಿಕ ಪ್ರವಾಹದ ಕಾಲದಲ್ಲಿ 'ಮೂರನೇ ಜಗತ್ತಿನ ಕಾರ್ಯನಿರತ ಪ್ರಜಾಪ್ರಭುತ್ವಗಳ ವಿಶಿಷ್ಟ ಗುಂಪಿನ ಪೂರ್ಣ ಸದಸ್ಯತ್ವ ಪಡೆಯಲು ಭಾರತವು 'ಶಾಂತಿಕಾಲದಲ್ಲೇ ಅತ್ಯಂತ ಬೃಹತ್ ಪ್ರಮಾಣದಲ್ಲಿ ಸೇನಾಪಡೆಗಳನ್ನು ನಿಯೋಜಿಸದೇ ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವವು ತನ್ನ ಚುನಾವಣೆಗಳನ್ನು ಯಶಸ್ವಿಯಾಗಿ ನಡೆಸಲಾರದು' ಎಂಬ ವೈಪರೀತ್ಯವನ್ನು ಯಶಸ್ವಿಯಾಗಿ ನಿಭಾಯಿಸಬೇಕಾಗಿದೆ. ❑

# ಅಂಗದಾನ : ದುರ್ಗಮ ಹಾದಿ

ಸುಭದ್ರಾ ಮೆನನ್
ಕನ್ನಡಕ್ಕೆ : ಡಾ. ಮಹಾಬಲೇಶ್ವರ ರಾವ್



**ಅಂಗದಾನದ ಕ್ಷೇತ್ರದಲ್ಲಿ ಕಾನೂನುಬಾಹಿರ ವ್ಯವಹಾರ ಎಲ್ಲೆಲ್ಲೂ ಹಬ್ಬಿದೆ; ಅಮಾಯಕರ ಶೋಷಣೆಯಾಗುತ್ತಿದೆ. ಇದನ್ನು ತಡೆಗಟ್ಟಲು ಕಾನೂನು ಹೆಚ್ಚು ಬಿಗಿಯಾಗಿರಬೇಕು, ನಿರ್ಬಂಧನಾತ್ಮಕವಾಗಿರಬೇಕು ಎಂಬುದು ಸರಿ. ಆದರೂ ಕಾನೂನಿನ ತೊಡಕುಗಳನ್ನು ಬಿಡಿಸಿ ಅಂಗದಾನ ಪ್ರಕ್ರಿಯೆಯನ್ನು ಸುಗಮಗೊಳಿಸಬೇಕೆಂದು ಇಂದು ಹಲವಾರು ತಜ್ಞರು ಪ್ರತಿಪಾದಿಸುತ್ತಿದ್ದಾರೆ.**

ನಾವೊಂದು ಅಪರಿಪೂರ್ಣ ಬದುಕನ್ನು ಬದುಕುತ್ತಿದ್ದೇವೆ. ಆರೋಗ್ಯವಂತ ಅಂಗದಾನದ ಮೂಲಕ ಪ್ರತಿನಿತ್ಯವೂ ಕೆಟ್ಟುಹೋದ ಅಂಗದಿಂದ ನರಳುತ್ತಿರುವ ಅನೇಕರ ಜೀವವನ್ನು ನಾವು ಉಳಿಸಬಹುದು. ಬಗೆಬಗೆಯ ಕಾಯಿಲೆಗಳು ಅಥವಾ ಅವಘಡಗಳಿಂದಾಗಿ ಜನ ಗಂಭೀರವಾದ ವೈದ್ಯಕೀಯ ಸಮಸ್ಯೆಗಳಿಗೆ ತುತ್ತಾಗಿ ನರಳುತ್ತಾರೆ. ಇದರಿಂದಾಗಿ ಅವರ ಮೂತ್ರಪಿಂಡ ಅಥವಾ ಯಕೃತ್ತು ಅಥವಾ ಹೃದಯಕ್ಕೆ ಹಾನಿ ಉಂಟಾಗುತ್ತದೆ. ರಸ್ತೆ ಅಪಘಾತಕ್ಕೆ ತುತ್ತಾದ ವ್ಯಕ್ತಿ ತನ್ನ ಒಂದು ಅಂಗವನ್ನು ಕಳೆದುಕೊಂಡು ಏನನ್ನೂ ಮಾಡಲಾಗದ ಸ್ಥಿತಿಗೆ ಒಳಗಾಗಬಹುದು. ಉದಾಹರಣೆಗೆ, ಮೂತ್ರಕೋಶ ಅಥವಾ ಯಕೃತ್ತಿನ ರೋಗ ಉಲ್ಬಣಿಸಿ ಕೊನೆಯ ಹಂತ ಮುಟ್ಟಿದಾಗ ನಾವು ಮಾಡಬಹುದಾದ ಅತ್ಯಂತ ಪರಿಣಾಮಕಾರಿ ಚಿಕಿತ್ಸೆ ಎಂದರೆ ಅಂಗ ಕಸಿಕಟ್ಟುವಿಕೆ. ಇಂಥ ಸನ್ನಿವೇಶದಲ್ಲಿ ಆರೋಗ್ಯವಂತ ಹೃದಯಗಳು, ಶ್ವಾಸಕೋಶಗಳು, ಕಣ್ಣುಗಳು, ಮೇದೋಜೀರಕ ಗ್ರಂಥಿಗಳು, ಕರುಳುಗಳು ಹಾಗೂ ಇನ್ನಿತರ ಅಂಗಗಳ ಅವಶ್ಯಕತೆ ಇದೆ.

ಕಾಯಿಲೆಗಳ ಹೊರೆ ಹೆಚ್ಚುತ್ತಿದೆ. ಇದರಿಂದಾಗಿ ಇನ್ನಷ್ಟುಕಾಲ ಬದುಕಬೇಕೆಂದು ಬಯಸುವವರು ಅಂಗ ಕಸಿ ಮಾಡಿಕೊಂಡು ಜೀವ ಉಳಿಸಿಕೊಳ್ಳಲು ಹತಾಶೆಯಿಂದ ಕಾಯುತ್ತಿರುತ್ತಾರೆ. ಇಂಥವರಿಗೆ ಆರೋಗ್ಯವಂತ ಅಂಗಾಂಗಗಳನ್ನು ಪೂರೈಸುವ ಅಗತ್ಯ ಮಿತಿಮೀರಿದೆ. ಆದರೆ ಯಾವುದೇ ತೃಪ್ತಿಕರ ಸೇವೆ ಅಥವಾ ಸುಧಾರಣಾ ಕಾರ್ಯಕ್ರಮ ಹಮ್ಮಿಕೊಳ್ಳುವಲ್ಲಿ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸುವುದೇ ಒಂದು ದೊಡ್ಡ ಅಡಚಣೆ; ಮೇಲಾಗಿ ನಮ್ಮಲ್ಲಿ ವಿಶ್ವಾಸಾರ್ಹವಾದ, ಸಮಗ್ರವಾದ ಮಾಹಿತಿಯ ಕೊರತೆಯಿದೆ. ಭಾರತದಲ್ಲಿ ವಿವಿಧ ಬಗೆಯ ಭಾಗೀದಾರರು ವೈವಿಧ್ಯಮಯ ಸನ್ನಿವೇಶಗಳಲ್ಲಿ ಬಳಸುವ ಮಾಹಿತಿ ಸಂಗ್ರಹವು ಅರೆಬರೆ ರೂಪದಲ್ಲಿದೆ. ಉದಾಹರಣೆಗೆ, ಒಂದು ಅಧ್ಯಯನದ ಪ್ರಕಾರ ಭಾರತದಲ್ಲಿ ಪ್ರತಿ ಹತ್ತು ವಯಸ್ಕರಲ್ಲಿ ಒಬ್ಬರು ತೀವ್ರವಾದ ಮೂತ್ರಪಿಂಡಕಾಯಿಲೆಯಿಂದ ನರಳುತ್ತಾರೆ. ಇವರಿಗೆ ಒಂದೋ ಡಯಾಲಿಸಿಸ್ ಅಗತ್ಯವಿದೆ ಅಥವಾ ಹೊಸ ಮೂತ್ರಪಿಂಡದ ಅವಶ್ಯಕತೆಯಿದೆ. ಇಂಥವರು ಕನಿಷ್ಠ ಐದುಲಕ್ಷದಷ್ಟಿದ್ದಾರೆ. ಇವರಲ್ಲಿ ಕೇವಲ 6000 ಮಂದಿ ಮೂತ್ರಪಿಂಡವನ್ನು ದಾನವಾಗಿ ಪಡೆಯುತ್ತಾರೆ. ಸುಮಾರು 30,000 ಮಂದಿ ಹಾಗೂ ಹೀಗೂ ಡಯಾಲಿಸಿಸ್‌ಗೆ ಒಳಗಾಗುತ್ತಾರೆ. ಹೀಗಾಗಿ 4.5 ಲಕ್ಷದಷ್ಟು ದೊಡ್ಡ ಸಂಖ್ಯೆಯ ರೋಗಿಗಳು ಯಾವ ಭರವಸೆಯ ಆಶಾಕಿರಣವಿಲ್ಲದೆ ನರಳುತ್ತಾರೆ. ಶವದ ಅಂಗ ಕಸಿಕಟ್ಟುವ ಸುವ್ಯವಸ್ಥಿತವಾದ ಮತ್ತು ಪಾರದರ್ಶಕವಾದ ಕಾರ್ಯಕ್ರಮಗಳು ಭಾರತದ ಜನಸಂಖ್ಯೆಯ ಒಂದು ದೊಡ್ಡ ಸಮೂಹದ ಬದುಕು ಸಾವುಗಳ ನಡುವೆ ಗಮನಾರ್ಹ ಪರಿವರ್ತನೆಯನ್ನು ಉಂಟುಮಾಡಬಲ್ಲವು. ಅಂತೆಯೇ ಜೀವಂತ ದಾನಿಗಳಿಂದ ಮಾನವ ಜೀವಕೋಶಗಳನ್ನು ಹಾಗೂ ಅಂಗಗಳನ್ನು ಪಡೆದು ಕಸಿಕಟ್ಟುವ ಕಾರ್ಯಕ್ರಮಗಳೂ ಅಷ್ಟೇ ಮುಖ್ಯವಾಗಿವೆ. ಉದಾಹರಣೆಗೆ ಲ್ಯುಕೇಮಿಯಾ ಅಥವಾ ರಕ್ತಕ್ಯಾನ್ಸರ್ ರೋಗಿಗಳಿಗೆ ಸ್ಟೆಮ್‌ಸೆಲ್‌ಗಳನ್ನು


ಇಂಡಿಯಾ ಸಾರ್ವಜನಿಕ ಆರೋಗ್ಯ ಪ್ರತಿಷ್ಠಾನದಲ್ಲಿ ಆರೋಗ್ಯ ಸಂವಹನ ಪ್ರಾಧ್ಯಾಪಕರಾಗಿದ್ದಾರೆ ಮತ್ತು ಪೆಂಗ್ವಿನ್ ಬುಕ್ಸ್ ಪ್ರಕಟಿಸಿದ " ನೋಪ್ಲೇಸ್ ಟು ಗೋ: ಸ್ಟೋರೀಸ್ ಆಫ್ ಹೋಪ್ ಆ್ಯಂಡ್ ಡೆಸ್ಪೈರ್ ಫ್ರಂ ಇಂಡಿಯಾಸ್ ಏಲಿಂಗ್ ಹೆಲ್ತ್ ಸೆಕ್ಟರ್" ಗ್ರಂಥದ ಲೇಖಿಕೆ. Email : subhadra.menon@phfi.org

ಕಸಿಕಟ್ಟುವುದು ಅವರ ಪಾಲಿಗೆ ಒಂದು ಅಮೂಲ್ಯ ಕೊಡುಗೆಯಾಗಿ ಪರಿಣಮಿಸುತ್ತದೆ.

ಆದುದರಿಂದ ನೇರವಾಗಿ ಹೇಳುವುದಾದರೆ, ಅಂಗದಾನ ಮತ್ತು ಅಂಗಕಸಿಕಟ್ಟುವಿಕೆಯಿಂದ ಜನರ ಪ್ರಾಣಗಳನ್ನು ಉಳಿಸಬಹುದು. ಅಂತೆಯೇ ಮೃತಪಡುವ ಅನೇಕರಲ್ಲಿ ಅವರ ಬಹಳಷ್ಟು ಅಂಗಾಗಗಳು ಸುಸ್ಥಿತಿಯಲ್ಲಿರುತ್ತವೆ. ಆದರೆ, ಈ ಸರಳ ಅಂಶ ಇಲ್ಲಿಗೇ ಮುಗಿಯುತ್ತದೆ; ಜಗತ್ತಿನಲ್ಲಿ ಅತಿಕಡಿಮೆ ಪ್ರಮಾಣದಲ್ಲಿ ಅಂಗದಾನಮಾಡುವ ದೇಶವೆಂದರೆ ಭಾರತ. ಆರೋಗ್ಯ ಮಾಹಿತಿ ಮತ್ತು ಅಂಕಿಅಂಶಗಳ ನಿರ್ವಹಣೆಯಲ್ಲಿನ ಅದಕ್ಷತೆಯಿಂದಾಗಿ ನಿಜವಾದ ಪ್ರಮಾಣದ ಬಗ್ಗೆ ಬೇರೆ ಬೇರೆ ಉಲ್ಲೇಖಗಳಿವೆ. ಕೆಲವು ಅಂಕಿ ಅಂಶಗಳ ಪ್ರಕಾರ, ಭಾರತದಲ್ಲಿ ಅಂಗದಾನದ ಪ್ರಮಾಣವು ಒಂದು ಮಿಲಿಯ ಜನಸಂಖ್ಯೆಗೆ 0.16ರಷ್ಟಿದೆ. ಒಂದು ಮಿಲಿಯ ಜನಸಂಖ್ಯೆಗೆ ಒಬ್ಬ ದಾನಿಗಿಂತಲೂ ಕಡಿಮೆ ಪ್ರಮಾಣದಲ್ಲಿದೆ. ಅಂದರೆ ಅಂಗದಾನದ ಪ್ರಮಾಣ ತೀರ ಅಲ್ಪವಾಗಿದೆ. ಇಂಗ್ಲೆಂಡಿನಲ್ಲಿ ಈ ಪ್ರಮಾಣವು 27, ಅಮೆರಿಕದಲ್ಲಿ 20–25 ಮತ್ತು ಸ್ಪೇನ್‌ನಲ್ಲಿ 35. ಪ್ರತಿವರ್ಷ ಭಾರತದಲ್ಲಿ ಕನಿಷ್ಠ 25,000 ದಾನಿಗಳ ಆವಶ್ಯಕತೆಯಿದೆ. ಆದರೆ ಸದ್ಯ ಈ ಪ್ರಮಾಣ ಕೇವಲ ನೂರುಗಳ ಆಸುಪಾಸಿನಲ್ಲಿದೆ. ಪ್ರತಿವರ್ಷ ಒಂದು ಲಕ್ಷ ರಸ್ತೆ ಅಪಘಾತಗಳಾಗುತ್ತವೆ; ಈ ಅಪಘಾತಗಳಿಂದಾಗಿ ಮೆದುಳಿನ ಸಾವು ಸಂಭವಿಸುತ್ತದೆ. ಹೀಗಾಗಿ ಭಾರಿ ಸಂಖ್ಯೆಯ ದಾನಿಗಳ ಆವಶ್ಯಕತೆಯಿದೆ. ಅಂಗಕಸಿಕಟ್ಟುವಿಕೆಯು ತೃಪ್ತಿಕರವಾದ ರೀತಿಯಲ್ಲಿ ನಡೆದರೆ ಭಾರತದಲ್ಲಿ ಪ್ರತಿವರ್ಷ 5ಲಕ್ಷ ಜನರ ಜೀವ ಉಳಿಸಬಹುದು. ಆದರೆ ದುರದೃಷ್ಟವಶಾತ್ ಈ ಜನರು ಸಾಯುತ್ತಿದ್ದಾರೆ. ಈ ವಾಸ್ತವವನ್ನು ಬದಲಿಸಬೇಕಾಗಿದೆ ಮತ್ತು ಈ ಬದಲಾವಣೆಯ ನಿಟ್ಟಿನಲ್ಲಿ ಬೇರೆ ಬೇರೆ ನೆಲೆಗಳಲ್ಲಿ ಕೆಲವೊಂದು ಪ್ರಯತ್ನಗಳು ನಡೆಯುತ್ತಿವೆ.

### ವ್ಯವಸ್ಥೆಯಲ್ಲಿ ಪರಿಣಾಮಕಾರಿ ಪ್ರತಿಸ್ಪಂದನ

ಸಹಜವಾಗಿಯೇ, ಅಂಗದಾನ ಮಾಡುವ ನಿರ್ಧಾರ ಮತ್ತು ಆ ಮೂಲಕ ಅಂಗಕಸಿಕಟ್ಟುವ ಕಾರ್ಯವು ಒಂದು ಸಂಕೀರ್ಣವಾದ ವೈದ್ಯಕೀಯ ಕಾನೂನು ಕ್ರಮವಾಗಿದೆ; ಮಾತ್ರವಲ್ಲದೆ ಅದು ಬಹುಮಟ್ಟಿಗೆ ಪರಹಿತಚಿಂತನೆಯನ್ನು ಅವಲಂಬಿಸಿದೆ.



ಮನುಷ್ಯ ಸ್ವಭಾವಗಳಲ್ಲೊಂದಾದ ಈ ಪರಹಿತಚಿಂತನೆಯು ತರ್ಕ ಹಾಗೂ ವ್ಯಾಖ್ಯೆಯನ್ನು ಮೀರಿದೆ. ಆರೋಗ್ಯವಂತ ಅಂಗಾಂಗಗಳುಳ್ಳ ಮೃತವ್ಯಕ್ತಿಯ ಬಂಧುಬಾಂಧವರು ಶವಾಧಾರಿತ ಅಂಗಾಂಗಕಸಿಕಟ್ಟುವಿಕೆಗೆ ಕೃಪೆತೋರಬೇಕು. ಓರ್ವ ವ್ಯಕ್ತಿ ನಿಧನ ಹೊಂದಿದ ಕೂಡಲೆ ಆ ವ್ಯಕ್ತಿಯ ಹಂಬಲಗಳನ್ನು ಅಥವಾ ಲಿಖಿತ ಪ್ರತಿಜ್ಞೆಗಳನ್ನು ಈ ಬಂಧುಬಾಂಧವರು ಗೌರವಿಸಬೇಕು. ಜೀವಂತ ವ್ಯಕ್ತಿಗಳನ್ನು ಒಳಗೊಂಡ ಅಂಗಕಸಿಕಟ್ಟುವ ಕ್ರಿಯೆಯಲ್ಲಿ ದಾನಿಗಳು ಕೈಗೊಳ್ಳುವ ಕಠಿಣವಾದ ವೈದ್ಯಕೀಯ ನಿರ್ಧಾರವು ಕರುಣಾಪೂರಿತವಾಗಿರುತ್ತದೆ.

ಐತಿಹಾಸಿಕವಾಗಿ ನೋಡಿದರೆ, ಅಮೂಲ್ಯವಾದ ಜೀವವನ್ನು ಹೇಗಾದರೂ ರಕ್ಷಿಸಬೇಕೆಂಬ ಹೆಣಗಾಟ ಅಥವಾ ತೀವ್ರವಾದ ಬಡತನದ ವಿರುದ್ಧದ ಹೋರಾಟವು ಅಂಗಾಂಗಗಳ ಅಕ್ರಮ ಮಾರಾಟದ ವ್ಯವಹಾರಕ್ಕೆ ಪ್ರಚೋದನೆ ನೀಡಿದೆ. ಇದಲ್ಲದೆ ಯಶಸ್ವಿ ಅಂಗಕಸಿಮಾಡಲು ವಿವಿಧ ವೈದ್ಯಕೀಯ ಕ್ರಮಗಳನ್ನು ಕೈಗೊಳ್ಳಬೇಕು. ಶಸ್ತ್ರ ಚಿಕಿತ್ಸೆ ಮಾಡಬೇಕಾಗುತ್ತದೆ. ಇದಕ್ಕಾಗಿ ದುಬಾರಿ ಹಣವೆಚ್ಚಮಾಡಬೇಕು ಮತ್ತು ಅತ್ಯಂತ ತಾಳ್ಮೆಯಿಂದ ಕಾಯಬೇಕು. ಹಾಗೆಯೇ ಅಂಗದಾನದ ಪ್ರಾಮಾಣಿಕ ಪ್ರಕ್ರಿಯೆಯನ್ನು ಸುಗಮಗೊಳಿಸಲು ಬಿಗಿಯಾದ ಕಾನೂನು ಕ್ರಮಗಳನ್ನು ಮತ್ತು ಮಾರ್ಗದರ್ಶಿ ಸೂತ್ರಗಳನ್ನು ಪಾಲಿಸಬೇಕು. ಒಂದು ಕಡೆಯಲ್ಲಿ ಜನರ ಕರುಣೆಯ ಹಸ್ತವನ್ನು ಅವಲಂಬಿಸಬೇಕು; ಇನ್ನೊಂದು ಕಡೆಯಲ್ಲಿ ಸುವ್ಯವಸ್ಥಿತವಾದ ಮತ್ತು ದಕ್ಷವಾದ ವ್ಯವಸ್ಥೆಯನ್ನು ಆಧರಿಸಬೇಕು. ಇದರಿಂದಾಗಿ ಅಂಗದಾನ ಮತ್ತು ಅಂಗ ಕಸಿಕಟ್ಟುವಿಕೆಯು (ಶವಾಧಾರಿತ ಅಥವಾ ಜೀವಂತ) ಅತ್ಯಂತ ಯಾತನಾಮಯ ಕ್ಷೇತ್ರವಾಗಿದೆ. ಈ ಹಿನ್ನೆಲೆಯಲ್ಲಿ, ಈ ಕ್ಷೇತ್ರದಲ್ಲಿನ ಭಾಗೀದಾರರು ಮತ್ತು ದೃಢವಾದ ಧನಾತ್ಮಕ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾದವರು ಬಹಳಷ್ಟು ಸಂದರ್ಭಗಳಲ್ಲಿ ಸಂವೇದನಾಶೂನ್ಯರಾಗಿ ವರ್ತಿಸುತ್ತಾರೆ. ಇದರಿಂದಾಗಿ ತೀವ್ರ ಅಂಗವೈಫಲ್ಯ ಮತ್ತು ಅದಕ್ಕೆ ಒದಗಿಸಬೇಕಾದ ಪರಿಹಾರ ಚಿಕಿತ್ಸೆಯನ್ನು ಬಹುಮಟ್ಟಿಗೆ ಕಡೆಗಣಿಸಲಾಗಿದೆ.

ಉಲ್ಬಣಗೊಂಡ ರೋಗದ ಚಿಕಿತ್ಸೆಯ ಸಲುವಾಗಿ ಅಥವಾ ಒಂದು ಅಂಗವನ್ನು ಶಾಶ್ವತವಾಗಿ ಸರಿಪಡಿಸಲಾಗದಂಥ ಅಪಘಾತಕ್ಕೆ ತುತ್ತಾದ ವ್ಯಕ್ತಿಯ ಜೀವ ಉಳಿಸುವ ಸಲುವಾಗಿ ಈ ಕ್ಷೇತ್ರವನ್ನು ಪ್ರವೇಶಿಸುವ ಯಾರೇ ಆದರೂ ಈ ಮುಂದೆ ನಮೂದಿಸಿದ ಒಂದಲ್ಲ ಒಂದು ಅಡಚಣೆಯನ್ನು ಎದುರಿಸಬೇಕಾಗಿ ಬರುತ್ತದೆ.

- ವೈದ್ಯಕೀಯವಾಗಿ ಒಂದು ಅಂಗವನ್ನು ಪಡೆಯುವ ಹಂಬಲವು ಮನುಷ್ಯನ ತೀವ್ರವಾದ ಅಗತ್ಯಗಳಲ್ಲೊಂದು. ಇದು ಜೀವನ್ಮರಣದ ಸಂದರ್ಭವಾಗಿದ್ದು ಇಲ್ಲಿ ಸಮಯವೇ ಪ್ರಧಾನ.

- ಅಂಗ ಕಸಿಕಟ್ಟುವಿಕೆ ಒಂದೋ ಕೈಗೆಟುಕದ ಸ್ಥಿತಿ ಅಥವಾ ಬಹಳಷ್ಟು ಜನರ ಪಾಲಿಗೆ ಭಾರಿ ಆರ್ಥಿಕ ಹೊರೆ.

- ಚಾರಿತ್ರಿಕವಾಗಿ ನೋಡಿದರೆ, ಮಾನವ ಅಂಗ ವ್ಯಾಪಾರವು ಕಾನೂನುಬಾಹಿರವಾದ ಭೂಗತ ಚಟುವಟಿಕೆಯಾಗಿ ಬೆಳೆದಿದೆ. ಅದು ಜನರ ಬಡತನವನ್ನು ದುರುಪಯೋಗಪಡಿಸಿಕೊಳ್ಳುತ್ತಿದೆ. ಹೀಗಾಗಿ ಯಾವುದೇ ಕಾನೂನನ್ನು ಪೂರ್ವಾನ್ವಯವಾಗಿ ಜಾರಿಗೊಳಿಸಿದಾಗ ತೀವ್ರವಾದ ಪ್ರತಿರೋಧ ಕಂಡುಬರುತ್ತದೆ.

- ಒಬ್ಬ ದಾನಿ ಐದು ಜೀವಗಳನ್ನು ಉಳಿಸಬಹುದು; ಆದರೆ ಅಂಗದಾನಕ್ಕೆ ಸಂಬಂಧಪಟ್ಟಂತೆ ವಿಶ್ವಾಸನೀಯವಾದ ಸಾರ್ವಜನಿಕ ಅಥವಾ ಖಾಸಗಿ ವೈದ್ಯಕೀಯ ಸಂಸ್ಥೆಗಳ ಜೊತೆ ಸಂಪರ್ಕವಿರುವ ಅಂಗದಾನ ಮಾಹಿತಿಯುಳ್ಳ ಸಂಘಟನೆಗಳು ನಮ್ಮಲ್ಲಿ ಬಲು ವಿರಳ.

- ಒಂದು ಔಪಚಾರಿಕವಾದ ವ್ಯವಸ್ಥೆ ನಮ್ಮಲ್ಲಿನ್ನೂ ಸರಿಯಾಗಿ ಜಾರಿಗೆ ಬಂದಿಲ್ಲ. ಹೀಗಾಗಿ ಅಂಗ ಕಸಿಕಟ್ಟುವಿಕೆಯ ಅಗತ್ಯಕ್ಕೆ ಸಂಬಂಧಿಸಿದಂತೆ ಅಧ್ಯಯನ ನಡೆಸುವುದು ಕಠಿಣವಾಗಿದೆ. ಇದರಿಂದಾಗಿ ಅಂಗದಾನ ಹಾಗೂ ಅಂಗ ಕಸಿಕಟ್ಟುವಿಕೆ ನಿರ್ವಹಣೆಯಲ್ಲಿ ಅಡಚಣೆಗಳು ಉಂಟಾಗುತ್ತಿವೆ.

- ಜ್ಞಾನದ ಕೊರತೆಯಿಂದಾಗಿ ಜನರಲ್ಲಿ ಅರಿವಿನ ಕೊರತೆ ಕಂಡುಬರುತ್ತಿದೆ; ಮುಖ್ಯವಾಗಿ ಮೆದುಳಿನ ಸಾವಿನ ಸ್ಥಿತಿಯನ್ನು ಗುರುತಿಸಿ ಅದನ್ನು ಒಪ್ಪಿಕೊಳ್ಳುವುದಕ್ಕೆ ಸಂಬಂಧಪಟ್ಟಂತೆ ಈ ಕೊರತೆ ಕಂಡುಬರುತ್ತಿದೆ. ಹೃದಯವಾದರೋ ಬಡಿದುಕೊಳ್ಳುತ್ತಿರುತ್ತದೆ; ಕಾನೂನು ಗುರುತಿಸಿದರೂ ಜನ ಮೆದುಳಿನ ಸಾವನ್ನು ಒಪ್ಪಿಕೊಳ್ಳಲು ಸಿದ್ಧರಿಲ್ಲ.



ಅಂಗದಾನ ಮತ್ತು ಕಸಿಕಟ್ಟುವಿಕೆಗಾಗಿ ಅದನ್ನು ಪಡೆದುಕೊಳ್ಳುವುದು ಈ ಮೇಲಿನ ಕಾರಣಗಳಿಂದಾಗಿ ಸಾರ್ವಜನಿಕ ಆರೋಗ್ಯದ ಅತ್ಯಂತ ನಿರ್ಲಕ್ಷಿತ ಕ್ಷೇತ್ರವಾಗಿದೆ. ವೈಯಕ್ತಿಕ ನಷ್ಟದ ದೆಸೆಯಿಂದಾಗಿ ಉಂಟಾದ ಆಕ್ರೋಶ ಅಥವಾ ಸಾವುನೋವುಗಳ ಕತೆಯ ದೆಸೆಯಿಂದಾಗಿ ಈ ವಿಷಯ ಕೇವಲ ಆಗೊಮ್ಮೆ ಈಗೊಮ್ಮೆ ಚರ್ಚೆಗೆ ಗ್ರಾಸವಾಗುತ್ತಿದೆ. ಈಚಿನ ವರ್ಷಗಳಲ್ಲಿ ಈ ಸಮಸ್ಯೆಗಳನ್ನು ಪರಿಹಾರಮಾಡಿ ಸುಗಮ ವ್ಯವಸ್ಥೆಗಳನ್ನು ರೂಪಿಸಲು ಪ್ರಯತ್ನಗಳನ್ನು ಮಾಡಲಾಗಿದೆ.

ಆದುದರಿಂದಲೆ, ಅಂಗದಾನವು ಹೆಚ್ಚು ಕಡಿಮೆ ಕೊಡುಗೆ ಅಥವಾ ದಾನವಾಗಿದ್ದರೂ ಆಧುನಿಕ ಚಿಕಿತ್ಸಕ ವೈದ್ಯಕೀಯದ ಈ ಮುಖ್ಯ ಅಂಶವನ್ನು ನಿಯಂತ್ರಿಸುವ ಸಲುವಾಗಿ ಕೆಲವೊಂದು ವಿಧಿನಿಯಮಗಳು ಅಗತ್ಯವಾಗಿವೆ. ಈ ಮಾರ್ಗದರ್ಶಿ ಸೂತ್ರಗಳನ್ನು ಟೀಕಿಸುವುದು ಸುಲಭ. ವಿಧಿನಿಷೇಧಗಳಿಂದಾಗಿ ಮನುಷ್ಯರ ನಿಸ್ವಾರ್ಥ ಚಟುವಟಿಕೆಗಳು ಸಾಕಾರಗೊಳ್ಳುವುದಿಲ್ಲ. ಆದರೆ ಪರರಿಗೆ ಕೊಡುಗೆ ನೀಡಲೇಬೇಕೆಂಬ ಕೆಲವು ವ್ಯಕ್ತಿಗಳ ಸದ್ಭಾವನೆಗಳಿಂದಾಗಿ ಅವು ಸಂಭವಿಸುತ್ತವೆ. ಪೂರೈಕೆಯನ್ನು ಮೀರಿದ ಅಪಾರವಾದ ಬೇಡಿಕೆಯಿದೆ ಮತ್ತು ಅಸಂಖ್ಯ ನಿರೀಕ್ಷಣಾ ಪಟ್ಟಿಗಳಿವೆ ಎಂಬುದು ವಾಸ್ತವ.

### ಕಾನೂನಿನ ಚೌಕಟ್ಟು ಮತ್ತು ಮಾರ್ಗದರ್ಶಿ ಸೂತ್ರಗಳು

ಇಪ್ಪತ್ತು ವರ್ಷಗಳ ಹಿಂದೆ ಅಂದರೆ 1994ರಲ್ಲಿ ಭಾರತದ ಸಂಸತ್ತು ಚಿಕಿತ್ಸಾ ಉದ್ದೇಶಗಳಿಗಾಗಿ ಮಾನವ ಅಂಗಗಳನ್ನು ಹೊರಗೆ ತೆಗೆಯುವುದು, ಸಂಗ್ರಹಣೆ ಮಾಡುವುದು ಮತ್ತು ಕಸಿಕಟ್ಟುವಿಕೆಯ ನಿಯಂತ್ರಣಕ್ಕಾಗಿ ಮಾನವ ಅಂಗಾಂಗಗಳ ಕಸಿಕಟ್ಟುವಿಕೆ ಕಾಯ್ದೆ (THOA) ಯನ್ನು ಅನುಮೋದಿಸಿತು. ನಿಯಮಗಳನ್ನು ರೂಪಿಸಿದ ಬಳಿಕ 1995ರ ಫೆಬ್ರವರಿ ತಿಂಗಳಿನಲ್ಲಿ ಕಾಯ್ದೆಯು ಗೋವಾ, ಹಿಮಾಚಲಪ್ರದೇಶ, ಮಹಾರಾಷ್ಟ್ರ ಮತ್ತು ಎಲ್ಲ ಕೇಂದ್ರಾಡಳಿತ ಪ್ರದೇಶಗಳಲ್ಲಿ ಜಾರಿಗೆ ಬಂದಿತು. ಇದಾದ ಬಳಿಕ ಜಮ್ಮು ಮತ್ತು ಕಾಶ್ಮೀರ, ಆಂಧ್ರಪ್ರದೇಶ ರಾಜ್ಯಗಳನ್ನು ಹೊರತುಪಡಿಸಿ ಉಳಿದೆಲ್ಲ ರಾಜ್ಯಗಳೂ ಈ ಕಾಯ್ದೆಯನ್ನು ಜಾರಿಗೆ ತಂದವು. ಅಂಗದಾನ ಮತ್ತು ಅಂಗ ಕಸಿಕಟ್ಟುವಿಕೆಗೆ ಸಂಬಂಧಿಸಿದಂತೆ ಈ ಎರಡು ರಾಜ್ಯಗಳು ತಮ್ಮದೇ ಆದ ಕಾನೂನುಗಳನ್ನು ಆದಾಗಲೆ ರಚಿಸಿಕೊಂಡಿದ್ದವು. ಮಾನವ ಅಂಗಾಂಗಗಳಿಗೆ ಸಂಬಂಧಿಸಿದಂತೆ ನೆಲೆಯೂರುತ್ತಿದ್ದ ವ್ಯಾಪಾರೀಕರಣದ ಪ್ರವೃತ್ತಿಯನ್ನು ತಡೆಗಟ್ಟುವುದೇ ಈ ಕಾಯ್ದೆಯ ಪ್ರಧಾನ ಉದ್ದೇಶವಾಗಿತ್ತು. ಮಾನವ ಅಂಗಗಳ ಹೊರತೆಗೆಯುವಿಕೆ, ಸಂರಕ್ಷಣೆ, ಹೊರತೆಗೆಯುವಿಕೆಯನ್ನು ಕೈಗೊಳ್ಳುವ, ಅವುಗಳನ್ನು ಸಂಗ್ರಹಿಸುವ ಅಥವಾ ಅಂಗಕಸಿ ಮಾಡುವ ಆಸ್ಪತ್ರೆಗಳ ನಿಯಂತ್ರಣ, ಸೂಕ್ತ ಪ್ರಾಧಿಕಾರದ ಕರ್ತವ್ಯಗಳು, ಆಸ್ಪತ್ರೆಗಳ ನೋಂದಣಿ ಹಾಗೂ ಮೇಲೆ ಹೇಳಿದ ವಿಷಯಗಳಿಗೆ ಸಂಬಂಧಿಸಿದ ಅಪರಾಧಗಳಿಗೆ ತಕ್ಕ ಶಿಕ್ಷೆ/ದಂಡ ಇತ್ಯಾದಿ ವಿವರಗಳನ್ನು ಕಾಯ್ದೆಯು ಒಳಗೊಂಡಿದೆ. ಅಲ್ಲಿಂದೀಚೆಗೆ, ಈ ಕಾಯ್ದೆಗೆ ಕೆಲವು ತಿದ್ದುಪಡಿಗಳನ್ನು ಮಾಡಲಾಗಿದೆ.

ಭಾರತ ಸರ್ಕಾರವು THOA ತಿದ್ದುಪಡಿ ಕಾಯ್ದೆ 2011 ಅನ್ನು ಪ್ರಕಟಿಸಿದೆ. ಈ ಕಾಯ್ದೆಯು ಮೂಳೆಗಳು, ಚರ್ಮ, ಹೃದಯ ಕವಾಟಗಳು, ಅಕ್ಷಿಪಟಲ ಮೊದಲಾದ ಅಂಗಾಂಗಗಳು ಹಾಗೂ ಹೃದಯ, ಯಕೃತ್ತು, ಮೇದೋಜೀರಕ ಗ್ರಂಥಿ ಮತ್ತು ಮೂತ್ರಪಿಂಡ ಮುಂತಾದ ಅಂಗಗಳ ಕಸಿಕಟ್ಟುವಿಕೆಗೆ ಸಂಬಂಧಿಸಿದಂತೆ ನಿರ್ದಿಷ್ಟ ಮಾನದಂಡಗಳ ಸಮಗ್ರ ವಿವರಗಳನ್ನು ಒಳಗೊಂಡಿದೆ. 2013ರಲ್ಲಿ, ಭಾರತ ಸರಕಾರವು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಮೂಲಕ ಮಾನವ ಅಂಗಾಂಗಗಳ ಮತ್ತು ಅಂಗಾಂಶಗಳ ಕಸಿಕಟ್ಟುವಿಕೆ ನಿಯಮಗಳು 2013 ಎಂಬ ಪರಿಷ್ಕೃತ ನಿಯಮಗಳನ್ನು ಬಿಡುಗಡೆಮಾಡಿದೆ. ರೋಗಿಗಳ ಅಗತ್ಯಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ಈ ಹಿಂದಿನ ಮಾರ್ಗದರ್ಶಿಸೂತ್ರಗಳನ್ನು ಪರಿಷ್ಕರಿಸಲಾಗಿದೆ. ಅನೇಕ ಬಗೆಯ ಭಾಗೀದಾರರು, ಕಾಳಜಿಯುಳ್ಳ ಸಂಸ್ಥೆಗಳು ಹಾಗೂ ವ್ಯಕ್ತಿಗಳು ಹಲವಾರು ವರ್ಷಗಳ ಕಾಲ ಸತತವಾಗಿ ಈ ವಿಷಯದ ಪರವಾಗಿ ಪ್ರತಿಪಾದನೆ ಮಾಡಿದ್ದರ ದೆಸೆಯಿಂದಾಗಿ ಈ ಪರಿಷ್ಕೃತ ನಿಯಮಾವಳಿ ರೂಪುಗೊಂಡಿತು. ಏಕೆಂದರೆ ಕಾಯ್ದೆಯ ಮೊದಲಿನ ಆವೃತ್ತಿಯು ಅಂಗಾಂಗಗಳ ಕಾನೂನುಬಾಹಿರ ವ್ಯವಹಾರವನ್ನು ತಡೆಗಟ್ಟುವ ಬದಲಾಗಿ, ಪ್ರಾಮಾಣಿಕವಾದ ಪ್ರಕರಣಗಳಲ್ಲಿ ಅಡೆತಡೆಗಳನ್ನು ಸೃಷ್ಟಿಸಿತು. ಇದರಿಂದಾಗಿ ದಾನ ಮತ್ತು ಕಸಿಕಟ್ಟುವ ಪ್ರಕ್ರಿಯೆಯಲ್ಲಿ ವಿಪರೀತ ವಿಳಂಬವಾಗುತ್ತಿತ್ತು.

ಒಟ್ಟಿನಲ್ಲಿ ಕಾನೂನಿನ ಚೌಕಟ್ಟು ಇದೆ. ಅದು ವ್ಯವಸ್ಥೆಯ ಪ್ರಕ್ರಿಯೆಗಳ ಬಗ್ಗೆ, ಆಡಳಿತಮಂಡಳಿಗಳ ಬಗ್ಗೆ ಮತ್ತು ಕಾನೂನು ಬದ್ಧ ಅಂಗದಾನಕ್ಕೆ ನೆರವಾಗುವ ಸೂಕ್ತ ಪ್ರಾಧಿಕಾರಗಳ ಬಗ್ಗೆ ಸ್ಪಷ್ಟವಾಗಿ ತಿಳಿಸುತ್ತದೆ. ಆದರೆ, ಭಾರತದ ಸಾಮಾಜಿಕ ಹಾಗೂ ಮಾನವ ವಿಕಾಸದ ಇತಿಹಾಸದಲ್ಲಿ ಸಾಮಾಜಿಕ ಕಾನೂನು ವ್ಯವಸ್ಥೆಯನ್ನು ಜಾರಿಗೆ ತರುವುದು ಅಸಾಧ್ಯವಲ್ಲದಿದ್ದರೂ ಕಷ್ಟಸಾಧ್ಯ. THOA ದ ಸಂದರ್ಭದಲ್ಲಿ ಅದು ಕಾನೂನುಬಾಹಿರ ವ್ಯಾಪಾರವನ್ನು ನಿಯಂತ್ರಿಸುವಲ್ಲಿ ಅಷ್ಟೇನೂ ಪರಿಣಾಮಕಾರಿಯಾಗಲಿಲ್ಲ. ಅಂತೆಯೇ ಪ್ರಾಮಾಣಿಕವಾದ ಪ್ರಕರಣಗಳಲ್ಲಿ ಅದು ತೊಂದರೆಗಳನ್ನು ಒಡ್ಡುತ್ತಲೇ ಇದೆ. ಅಂಗದಾನದ ಜೊತೆಗೆ ಕಾಯ್ದೆಯು ಮಿದುಳು ಸಾವಿನ ನಿರ್ಲಕ್ಷಿತವಾದ ಕ್ಷೇತ್ರವನ್ನೂ



ಗಮನಿಸಿದೆ. ಸುಗಮ ಅಂಗ ಕಸಿಕಟ್ಟುವಿಕೆಗೆ ಎದುರಾಗುವ ಒಂದು ಸವಾಲೆಂದರೆ ಹೃದಯವಿನ್ನೂ ಬಡಿದುಕೊಳ್ಳುವ ಆದರೆ ಮಿದುಳು ನಿಷ್ಕ್ರಿಯವಾದ ಸಂಭಾವ್ಯ ದಾನಿಯ ಹೇಳಿಕೆ. ಅಂಗ ಕಸಿಕಟ್ಟುವಿಕೆಯನ್ನು ಕೈಗೊಳ್ಳಲು ಅಧಿಕೃತವಾದ ಮಾನ್ಯತೆ ಹೊಂದಿರುವ ಆಸ್ಪತ್ರೆಗಳಲ್ಲಿ ಮಾತ್ರವೇ ಈ ಹೇಳಿಕೆಯನ್ನು ಸ್ವೀಕರಿಸಲಾಗುತ್ತದೆ. ಬಹಳಷ್ಟು ಸಲ, ಮಿದುಳು ನಿಷ್ಕ್ರಿಯಗೊಂಡಿದೆ ಎಂದು ಘೋಷಿಸಲಾದ ವ್ಯಕ್ತಿಗಳ ಹೃದಯ 48 ಗಂಟೆಗಳ ಕಾಲ ಬಡಿದುಕೊಳ್ಳುತ್ತಿರುತ್ತದೆ. ಇದು ಅಂಗದಾನ ಮಾಡುವುದಕ್ಕೆ ಅತ್ಯಂತ ನಿರ್ಣಾಯಕ ಕಾಲ. ಆದರೆ ಇಂಥ ವ್ಯಕ್ತಿಯ ದೇಹದಿಂದ ಯಾವುದೇ ಅಂಗವನ್ನು ಹೊರತೆಗೆಯುವುದು ದಯಾಮರಣಕ್ಕೆ ಸಮನೆಂದು ಆ ವ್ಯಕ್ತಿಯ ಕುಟುಂಬವರ್ಗದವರು ಹಾಗೂ ಬಂಧುಗಳು ಭಾವಿಸುತ್ತಾರೆ. ಹೀಗಾಗಿ ಈ ಹಂತದಲ್ಲಿ ಅಂಗದಾನ ಮಾಡುವುದು ಬಹಳ ಕಠಿಣ. ಆರೋಗ್ಯಶಾಲಿ ಅಂಗವನ್ನು ಪಡೆಯಬೇಕೆಂದು ಹಪಹಪಿಸುವ ರೋಗಿಯ ಕುಟುಂಬವರ್ಗದವರು ಹಾಗೂ ಪ್ರೀತಿಪಾತ್ರರ ದೃಷ್ಟಿಯಿಂದ ನೋಡಿದಾಗ ನಿಜಕ್ಕೂ ಇದೊಂದು ತ್ರಾಸದಾಯಕ ಪ್ರಕ್ರಿಯೆ. ಆದರೆ ತುರ್ತು ಅಗತ್ಯದ ದೆಸೆಯಿಂದಾಗಿ ಸಂಕೀರ್ಣತೆಯು ಸಹ್ಯವೆನಿಸುತ್ತದೆ.

ಮೊದಲಿಗೆ, ಮಾನ್ಯತೆ ಪಡೆದ ಪ್ರಾಧಿಕಾರವು ಮಿದುಳಿನ ಸಾವವನ್ನು ವಿಧಿವತ್ತಾಗಿ ಗುರುತಿಸಬೇಕು; ಆಮೇಲೆ ಮೃತ ವ್ಯಕ್ತಿಯ ಕುಟುಂಬ ಸದಸ್ಯರಿಂದ ಔಪಚಾರಿಕ ಹಾಗೂ ಪೂರ್ಣ ಒಪ್ಪಿಗೆ ಪಡೆಯಬೇಕು. ಕೊನೆಯದಾಗಿ, ರಾಜ್ಯದಲ್ಲಿರುವ ಸೂಕ್ತ ಪ್ರಾಧಿಕಾರದ ಸಮ್ಮುಖದಲ್ಲಿ, ಅಧಿಕೃತವಾಗಿ ಮಾನ್ಯತೆ ಪಡೆದ ಆಸ್ಪತ್ರೆಯಲ್ಲಿ ಕಾಗದ ಪತ್ರಗಳ ಹಾಗೂ ದಾಖಲೀಕರಣದ ಕಾರ್ಯ ಪೂರ್ಣಗೊಳ್ಳಬೇಕು. ಓರ್ವ ವ್ಯಕ್ತಿಯ ಮಿದುಳು ನಿಷ್ಕ್ರಿಯವಾಗಿದೆ ಎಂದು ಘೋಷಿಸಬೇಕಾದರೆ ನಾಲ್ಕುಮಂದಿ ತಜ್ಞ ವೈದ್ಯರ ತಂಡ (ಇವರಲ್ಲಿ ಒಬ್ಬರು ನರರೋಗ ತಜ್ಞರು) ಮಿದುಳಿನ ಸಾವನ್ನು ದೃಢೀಕರಿಸಬೇಕು. ಇದಕ್ಕೆ ಸಂಬಂಧಪಟ್ಟಂತೆ ನಡೆಸಿದ ಎಲ್ಲ ಪರೀಕ್ಷೆಗಳನ್ನು ಆರುಗಂಟೆಗಳ ಬಳಿಕ ಮರಳಿ ಕೈಗೊಳ್ಳಬೇಕು ಎಂದು ಕಾಯ್ದೆಯು ಸ್ಪಷ್ಟಪಡಿಸಿದೆ. ಈ ಕಾಲಾಂತರವೇ ಸುಗಮ ಹಾಗೂ ಯಶಸ್ವಿ ಅಂಗದಾನಕ್ಕೆ ಬಾಧಕ.

### ಜಾಗೃತಿ, ಪ್ರಚಾರ ಹಾಗೂ ಉತ್ತಮ ಆಚರಣೆಗಳು

ಅಂಗದಾನದ ಕ್ಷೇತ್ರದಲ್ಲಿ ಕಾನೂನುಬಾಹಿರ ವ್ಯವಹಾರ ಎಲ್ಲೆಲ್ಲೂ ಹಬ್ಬಿದೆ; ಅಮಾಯಕರ ಶೋಷಣೆಯಾಗುತ್ತಿದೆ. ಇದನ್ನು ತಡೆಗಟ್ಟಲು ಕಾನೂನು ಹೆಚ್ಚು ಬಿಗಿಯಾಗಿರಬೇಕು. ನಿರ್ಬಂಧನಾತ್ಮಕವಾಗಿರಬೇಕು ಎಂಬುದು ಸರಿ. ಆದರೂ ಕಾನೂನಿನ ತೊಡಕುಗಳನ್ನು ಬಿಡಿಸಿ ಅಂಗದಾನ ಪ್ರಕ್ರಿಯೆಯನ್ನು ಸುಗಮಗೊಳಿಸಬೇಕೆಂದು ಇಂದು ಹಲವಾರು ತಜ್ಞರು ಪ್ರತಿಪಾದಿಸುತ್ತಿದ್ದಾರೆ. ಪ್ರಾಮಾಣಿಕರ ಕಾಳಜಿಗಳನ್ನು ಭಾರತೀಯ ಕಾನೂನು ರಕ್ಷಿಸುತ್ತಿದೆಯಾದರೂ ಅದು ನ್ಯಾಯ ಪ್ರಕ್ರಿಯೆಯನ್ನು ಸಾಕಷ್ಟು ಮಟ್ಟಿಗೆ ಕುಂಠಿತಗೊಳಿಸುತ್ತಿದೆ. ಅಂಗದಾನ ಹಾಗೂ ಅಂಗ ಕಸಿಕಟ್ಟುವಿಕೆಯ ಕ್ಷೇತ್ರದಲ್ಲಿ ಇದೊಂದು ಗಂಭೀರ ಸವಾಲು. ಏಕೆಂದರೆ ಪರಿಣಾಮಕಾರಿ ಅಂಗ ಕಸಿಕಟ್ಟುವಿಕೆ ಮತ್ತು ವ್ಯಕ್ತಿಯ ಜೀವ ರಕ್ಷಣೆಯ ಸಂದರ್ಭಗಳು ತೀರ ಸೀಮಿತವಾಗಿವೆ. ಅಮೆರಿಕದ ಜನಸಂಖ್ಯೆ ಚಿಕ್ಕದಾದರೂ ಅಲ್ಲಿ ಮಿಲಿಯಗಟ್ಟಲೆ ಮಂದಿ ಅಂಗದಾನ ಮಾಡಲು ಮುಂದಾಗುತ್ತಾರೆ. ಭಾರತದಲ್ಲಾದರೋ 1.2 ಬಿಲಿಯ

ಜನಸಂಖ್ಯೆಯಲ್ಲಿ ಕೇವಲ ಕೆಲವೇ ಕೆಲವರು ಅಂಗದಾನ ಮಾಡಲು ಮುಂದೆ ಬರುತ್ತಾರೆ.

ಅಂಗದಾನಕ್ಕೆ ಸಂಬಂಧಪಟ್ಟಂತೆ ಇತ್ತೀಚಿನ ಯಾವುದಾದರೂ ಜನಪ್ರಿಯವಾದ ಮನಸೆಳೆಯುವ ಸಂದೇಶ ಅಥವಾ ಆಂದೋಳನ ನಿಮ್ಮ ನೆನಪಿಗೆ ಬರುತ್ತಿದೆಯಾ? ಮಾಹಿತಿ ಹಾಗೂ ಅರಿವು ಯಾವತ್ತೂ ಅತ್ಯಂತ ನಿರ್ಣಾಯಕ ಪಾತ್ರ ವಹಿಸುತ್ತದೆ. ದುರದೃಷ್ಟದ ಸಂಗತಿ ಎಂದರೆ ನಮ್ಮ ಸಾರ್ವಜನಿಕ ವಲಯದಲ್ಲಿ ಅಂಗದಾನದ ಆವಶ್ಯಕತೆ ಬಗ್ಗೆ ಯಾವುದೇ ಸಂದೇಶ ಅಥವಾ ಆಂದೋಳನ ಕಂಡುಬರುತ್ತಿಲ್ಲ. ರಕ್ತದಾನ ಮತ್ತು ನೇತ್ರದಾನ – ಈ ಎರಡು ಸಂಗತಿಗಳು ಪ್ರಾಯಃ ಜನರ ಮನಸ್ಸಿನಾಳಕ್ಕೆ ಇಳಿದು ಅವರು ಈ ಅಂಗಗಳನ್ನು ದಾನಮಾಡಲು ನಿರ್ಧಾರ ಮಾಡುತ್ತಾರೆ ಎಂದು ಅನ್ನಿಸುತ್ತಿದೆ. ಮೆದುಳು ನಿಷ್ಕ್ರಿಯವಾದ ಪ್ರೀತಿಪಾತ್ರನಾದ ಓರ್ವ ವ್ಯಕ್ತಿಯ ದೇಹದಿಂದ ಆರೋಗ್ಯಶಾಲಿ ಅಂಗಗಳನ್ನು ತೆಗೆದು ಮಾಡುವ ದಾನದ ಹಿಂದಿನ ಶಕ್ತಿ ಏನು ಎಂಬುದು ಎಷ್ಟು ಜನರಿಗೆ ನಿಜಕ್ಕೂ ತಿಳಿದಿದೆ? ಬಹಳಷ್ಟು ಜನರಿಗೆ ತಿಳಿದಿಲ್ಲ. ಜನ ತಮ್ಮ ಪರಹಿತಚಿಂತನೆ ಅಥವಾ ನಿರ್ಧಾರಗಳಿಗೆ ನಿಷ್ಠವಾಗಿರುವಂಥ ಮತ್ತು ಅವನ್ನು ಬಲಪಡಿಸುವಂಥ ಸಂದೇಶಗಳೂ ಲಭ್ಯವಿಲ್ಲ. ಅಸ್ಥಿಮಜ್ಜೆ ದಾನವು ರಕ್ತದಾನದಷ್ಟೇ ಸರಳವಾದದ್ದು ಎಂದು ಹೇಳಲಾಗುತ್ತಿದೆ; ಆದರೆ ನಿಜವಾಗಿಯೂ ನಿರ್ಧಾರ ಕೈಗೊಳ್ಳುವ ಸಮಯ ಬಂದಾಗ, ಅನೇಕ ಸಂಭಾವ್ಯದಾನಿಗಳು ಹಿಂದೇಟು ಹೊಡೆಯುತ್ತಾರೆ; ಏಕೆಂದರೆ ತಮ್ಮ ಸ್ಟೆಮ್‌ಸೆಲ್‌ಗಳನ್ನು ದಾನವಾಗಿನೀಡಿದರೆ ಗಂಭೀರ ಸ್ವರೂಪದ ಪರಿಣಾಮಗಳಾಗಬಹುದು ಎಂಬ ಭಯ ಅವರನ್ನು ಕಾಡುತ್ತದೆ. ಶವದ ಅಂಗಾಂಗಗಳ ದಾನದ ಸಂದರ್ಭದಲ್ಲಿ ದಾನಿಯ ಮೇಲೆ ಯಾವುದೇ ಪರಿಣಾಮಗಳಾಗುವುದಿಲ್ಲ. ಆದರೆ ಜೀವಂತ ವ್ಯಕ್ತಿಯ ದೇಹದಿಂದ ಜೀವಕೋಶಗಳನ್ನು ತೆಗೆದು ದಾನಮಾಡಿದಾಗ ಪರಿಣಾಮಗಳಾಗಬಹುದು. ಪೆರಿಫೆರಲ್ ರಕ್ತ ಸ್ಟೆಮ್‌ಸೆಲ್ ದಾನವು ಶಸ್ತ್ರಚಿಕಿತ್ಸೆರಹಿತವಾದ ವಿಧಾನವಾಗಿದ್ದು ದಾನಿಯು ಒಂದಕ್ಕಿಂತ ಹೆಚ್ಚುಸಲ ಆಸ್ಪತ್ರೆಗೆ ಭೇಟಿನೀಡಬೇಕಾಗುತ್ತದೆ. ಸ್ಟೆಮ್‌ಸೆಲ್‌ಗಳನ್ನು ದಾನಮಾಡುವುದಕ್ಕೆ ಮೊದಲು, ದಾನಿಯು 'ಫಿಲ್‌ಗ್ರಾಸ್ಟಿಮ್' ಎಂಬ ಪುನರ್ ಸಂಯೋಜಿತ ಡಿಎನ್‌ಎ ದಿಂದ ಉತ್ಪಾದಿಸಿದ ಔಷಧವನ್ನು ಸೇವಿಸಬೇಕಾಗುತ್ತದೆ. ಇದರಿಂದ ಸಣ್ಣಪುಟ್ಟ ಅಡ್ಡಪರಿಣಾಮಗಳು ಕಂಡುಬರಬಹುದು. ಕೆಲವು ಪ್ರಕರಣಗಳಲ್ಲಿ ಗುಲ್ಮದ ಮೇಲೆ ಗಂಭೀರ ಪರಿಣಾಮಗಳಾಗಬಹುದು. ಆದರೆ ಇಂಥ ಪ್ರಕರಣಗಳು ತೀರ ಅಲ್ಪ. ಹೀಗಾಗಿ ತಿಳುವಳಿಕೆಯು ನಿರ್ಣಾಯಕವಾದ ಅಂಶ. ಒಮ್ಮೆ ಈ ಪ್ರಕ್ರಿಯೆಗಳ ಬಗ್ಗೆ ಚೆನ್ನಾಗಿ ತಿಳಿದುಕೊಂಡರೆ ಯಾವುದೇ ಸಮಸ್ಯೆಗಳಿರುವುದಿಲ್ಲ. ಜಗತ್ತಿನಾದ್ಯಂತ ಇದನ್ನೆಲ್ಲ ಗಮನಿಸಲಾಗಿದೆ; ಆದರೆ ಈ ಎಲ್ಲದರ ಬಗ್ಗೆ ಬೃಹತ್ ಪ್ರಮಾಣದಲ್ಲಿ ಮಾಹಿತಿ, ಜ್ಞಾನ ಹಾಗೂ ಜಾಗೃತಿಯ ಆವಶ್ಯಕತೆಯಿದೆ; ಈ ಎಲ್ಲವನ್ನೂ ಜನರಿಗೆ ಒದಗಿಸಬೇಕಾದ ಅನಿವಾರ್ಯತೆಯಿದೆ.

ಅಮೆರಿಕದ ಸ್ಟಾನ್‌ಫೋರ್ಡ್ ವಿಶ್ವವಿದ್ಯಾನಿಲಯದಲ್ಲಿ ಮನೋವಿಜ್ಞಾನ ಪ್ರಾಧ್ಯಾಪಕರಾಗಿದ್ದ ಪ್ರೊ: ನಳಿನಿ ಅಂಬಾಡಿ ಅವರು ತೀವ್ರಸ್ವರೂಪದ ರಕ್ತ ಕ್ಯಾನ್ಸರ್‌ನಿಂದ (ಮೈಲೊಯ್ಡ್ ಲ್ಯುಕೇಮಿಯ) ಇತ್ತೀಚೆಗೆ ತೀರಿಕೊಂಡಾಗ ಈ ಸಮಸ್ಯೆಯ ಬಗ್ಗೆ ಜಗತ್ತಿನಾದ್ಯಂತ ವಿಶೇಷ ಗಮನಹರಿಸಲಾಯಿತು. ಭಾರತೀಯ ಸಂಜಾತ ಅಮೇರಿಕನ್ ಅಂಬಾಡಿಯವರ ಕುಟುಂಬ ಹಾಗೂ ಸ್ನೇಹಿತರು ಅವರ ದೇಹಕ್ಕೆ ಹೊಂದುವಂಥ ಸ್ಟೆಮ್‌ಸೆಲ್‌ಗಳ ಬಗ್ಗೆ ತೀವ್ರ ಸ್ವರೂಪದ ಹುಡುಕಾಟ ನಡೆಸಿದರು. ಪುನರುಜ್ಜೀವನ ಚಿಕಿತ್ಸೆಯ ಸಲುವಾಗಿ ಆರೋಗ್ಯವಂತ ರಕ್ತ ಸ್ಟೆಮ್‌ಸೆಲ್‌ಗಳನ್ನುಳ್ಳ (ಈ ಕೋಶಗಳು ಮಾನವ ದೇಹದ ಎಲ್ಲ ರಕ್ತಜೀವಕೋಶಗಳನ್ನು ಸೃಷ್ಟಿಸುತ್ತವೆ) ಅಸ್ಥಿಮಜ್ಜೆಯನ್ನು ದಾನಮಾಡಬಹುದಾದ ವ್ಯಕ್ತಿಗಾಗಿ ವ್ಯಾಪಕ ಹುಡುಕಾಟ ನಡೆಸಲಾಯಿತು. ಸ್ಟೆಮ್‌ಸೆಲ್‌ಗಳ ಕಸಿಕಟ್ಟುವಿಕೆ ಮೂಲಕ ನಡೆಯುವ ಈ ತಾಜಾ ಮತ್ತು ಆರೋಗ್ಯವಂತ ರಕ್ತಜೀವಕೋಶಗಳ ಪುನರುಜ್ಜೀವನವು ಮಾನವ ವೈದ್ಯಕೀಯದಲ್ಲಿ ಅತ್ಯಂತ ನಿರ್ಣಾಯಕವಾದ ಪ್ರಗತಿಪರಹೆಜ್ಜೆ; ಏಕೆಂದರೆ ರೋಗಗಳ ಸಂಖ್ಯೆ ಹೆಚ್ಚುತ್ತಿದೆ. ಸ್ಟೆಮ್‌ಸೆಲ್ ಚಿಕಿತ್ಸೆಯೇ ಈ ರೋಗಗಳ ನಿವಾರಣೆಗೆ ಸೂಕ್ತ ಪರಿಹಾರ. ಅಂಬಾಡಿಯವರ ಪ್ರಕರಣದಲ್ಲಿ ಇದೊಂದೇ ಪರ್ಯಾಯ ಚಿಕಿತ್ಸಾ ಕ್ರಮವಾಗಿ ಕಂಡು ಬಂದಿತ್ತು. ಆಕೆ ನಿಧನ ಹೊಂದುವುದಕ್ಕೆ ಮುನ್ನಿನ ತಿಂಗಳುಗಳಲ್ಲಿ ಹತ್ತು ಹನ್ನೆರಡು ಸಂಭಾವ್ಯ ಹೊಂದಿಕೆಗಳನ್ನು ಪತ್ತೆ ಮಾಡಲಾಯಿತು. ಆದರೆ ಇವುಗಳಲ್ಲಿ





ಅರ್ಧಾಂಶದಷ್ಟು ಆಕೆಯ ದೇಹಕ್ಕೆ ಸರಿಯಾಗಿ ಹೊಂದಿಕೆಯಾಗಲಿಲ್ಲ ಮತ್ತು ಇನ್ನುಳಿದ ಪ್ರಕರಣಗಳಲ್ಲಿ ಸಂಭಾವ್ಯ ದಾನಿಗಳು ಅಂತಿಮವಾಗಿ ದಾನಕ್ಕೆ ಒಪ್ಪಿಗೆ ನೀಡಲಿಲ್ಲ. ಅಂಬಾಡಿ ಮತ್ತು ಅವರ ಕುಟುಂಬ ವರ್ಗದವರಿಗೆ ಇದರಿಂದ ಎಷ್ಟೊಂದು ನಿರಾಶೆ ಮತ್ತು ದುಃಖವುಂಟಾಯಿತೆಂಬುದನ್ನು ಊಹಿಸಲೂ ಸಾಧ್ಯವಿಲ್ಲ. ಸದ್ಯ ಮಾನವನ ಹೆಣಗಾಟದ ಈ ಎಲ್ಲ ಅಸಾಧಾರಣ ಕಥನಗಳ ಮೂಲಕ ಏನಾದರೊಂದು ಮೂರ್ತ ಪರಿಹಾರಕಂಡುಕೊಳ್ಳಲು ಸಾಧ್ಯವೆ ಎಂದು ಆಲೋಚಿಸುವುದು ತುಂಬ ಮುಖ್ಯ. ಹುಡುಕಾಟದ ಆರಂಭ ಮತ್ತು ಅಂತ್ಯದ ನಡುವೆ ದಟ್ಟವಾದ ಎಷ್ಟೋ ಅಜ್ಞಾತ ಸಂಗತಿಗಳಿವೆ – ಅಂತಿಮ ಪರಿಣಾಮ ಏನಾಗಬಹುದೆಂದು ಹೇಳಲು ಸಾಧ್ಯವಿಲ್ಲ. ಒಂದೋ ಸಂತೋಷದ ಯಶೋಗಾಥೆ ಅಥವಾ ಪ್ರಯತ್ನಗಳೆಲ್ಲ ವಿಫಲವಾದ ಪ್ರೀತಿಪಾತ್ರರ ಮತ್ತು ಕುಟುಂಬ ವರ್ಗದವರ ಅಸಹಾಯಕ ಆಕ್ರೋಶ. ಯಾವುದು ಅಂತಿಮ ಪರಿಣಾಮ? ಅನಗತ್ಯವಾಗಿ ಮರಣಕ್ಕೆ ತುತ್ತಾಗುವ ಹಲವು ಜೀವಗಳನ್ನು ಕಾಪಾಡಲು ನಮ್ಮಿಂದ ಸಾಧ್ಯವಾಗದಿದ್ದರೆ ನಾವೇಕೆ ವ್ಯವಸ್ಥೆಗಳನ್ನು ಸೃಷ್ಟಿಸಬೇಕು? ಇಷ್ಟೆಲ್ಲ ಕಾನೂನುಗಳೇಕೆ? ಸಂಪನ್ಮೂಲಗಳನ್ನು ಸುರಿಯುವುದೇಕೆ? ಇದೆಲ್ಲ ಯಾವ ಪುರುಷಾರ್ಥ ಸಾಧನೆಗೆ? ಈ ಹೃದಯ ಕಲಕುವ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಳ್ಳಲೇಬೇಕು.

ಅಷ್ಟೇನೂ ಸಂಕೀರ್ಣವಲ್ಲದ ನೇತ್ರದಾನದ ಸಂದರ್ಭವನ್ನು ಗಮನಿಸಿ: ಅದು ಒಂದೋ ಮೃತ ವ್ಯಕ್ತಿಯ ಆಸೆಯನ್ನು ಪೂರೈಸುತ್ತದೆ ಅಥವಾ ಮೃತ ವ್ಯಕ್ತಿಯ ಕಣ್ಣುಗಳನ್ನು ದಾನಮಾಡಲು ಕುಟುಂಬದ ಸದಸ್ಯರು ತೀರ್ಮಾನಿಸುತ್ತಾರೆ. ಇದರಲ್ಲೂ ಕೂಡ ನಿರ್ಧಾರಕೈಗೊಳ್ಳುವ ಕ್ರಿಯೆ ಬಲಹೀನವಾಗುತ್ತದೆ. ಇತ್ತೀಚಿನ

ದಿನಗಳಲ್ಲಿ ಆಶಾದಾಯಕ ಒಲವುಗಳು ಕಂಡುಬರುತ್ತಿದ್ದರೂ ಭಾರಿ ದೊಡ್ಡ ಅಂತರ ವ್ಯಕ್ತವಾಗುತ್ತಿದೆ. ಕೆಲವು ವರ್ಷಗಳ ಹಿಂದೆ ಈ ಕ್ಷೇತ್ರದ ಪರಿಣತರೊಬ್ಬರು ನನ್ನಲ್ಲಿ ಹೀಗೆ ಹೇಳಿದ್ದರು. "ಅರ್ಜಿ ಫಾರಂ ಭರ್ತಿ ಮಾಡಿ, ಪ್ರತಿಜ್ಞಾವಿಧಿ ಪೂರೈಸಿ ದಾನಿ ದಾನಮಾಡಲು ಸಿದ್ಧನಾಗಿರಬಹುದು. ಆದರೆ ಅವನೊ ಅಥವಾ ಆಕೆಯೊ ಸತ್ತಾಗ, ಆ ಗಳಿಗೆಯ ದುಃಖ ಕುಟುಂಬ ಸದಸ್ಯರನ್ನು ಉತ್ಸಾಹಹೀನರನ್ನಾಗಿಸುತ್ತದೆ ಅಥವಾ ಸಂಪೂರ್ಣ ವ್ಯತಿರಿಕ್ತವಾದ ಪ್ರತಿಕ್ರಿಯೆ ಉಂಟಾಗುತ್ತದೆ. ಹೀಗಾಗಿ ಸಕಾಲಿಕವಾದ ಕಾರ್ಯಾಚರಣೆಯನ್ನು ಖಾತ್ರಿಪಡಿಸುವುದು ಕಷ್ಟ. ಇದೆಲ್ಲವೂ ವ್ಯಕ್ತಿ ತೀರಿಕೊಂಡ ಒಂದೆರಡು ಗಂಟೆಗಳೊಳಗೆ ಆಗಬೇಕಾದದ್ದು; ಇಲ್ಲವಾದರೆ ಕಾರ್ನಿಯ ನಿರುಪಯುಕ್ತವಾಗುತ್ತದೆ." ಸ್ಪಷ್ಟವೂ ವಿಶ್ವಾಸಾರ್ಹವೂ ಆದ ಮಾಹಿತಿ ದುರ್ಲಭ; ಆದರೆ ಭಾರತದಲ್ಲಿ ಸುಮಾರು 12 ಮಿಲಿಯ ಮಂದಿ ಅಂಧರಿದ್ದಾರೆ. ಇವರಲ್ಲಿ ಸುಮಾರು 2 ಮಿಲಿಯದಷ್ಟು ಜನರು ಕಾರ್ನಿಯ ಅಂಧತೆಗೆ ತುತ್ತಾಗಿದ್ದಾರೆ. ಶವದಿಂದ ಹೊರತೆಗೆದ ಆರೋಗ್ಯವಂತ ಕಣ್ಣುಗಳನ್ನು ಕಸಿಕಟ್ಟುವ ಮೂಲಕ ಇಂಥವರ ಅಂಧತೆಯನ್ನು ನಿವಾರಣೆ ಮಾಡಬಹುದು. ಈ ಎರಡು ಮಿಲಿಯ ಪ್ರಕರಣಗಳಲ್ಲಿ ಎಲ್ಲರಿಗೂ ಕಸಿಕಟ್ಟುವ ಅಗತ್ಯವಿಲ್ಲ. ಆದರೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಅಂಧತೆ ನಿಯಂತ್ರಣದ ರಾಷ್ಟ್ರೀಯ ಕಾರ್ಯಕ್ರಮದಲ್ಲಿ ಲಭ್ಯವಿರುವ ಮಾಹಿತಿಯ ಪ್ರಕಾರ 2011–2012ರಲ್ಲಿ ದೇಶದಲ್ಲಿ ಕೇವಲ 49,000 ಕಣ್ಣುಗಳನ್ನು ಸಂಗ್ರಹಿಸಲಾಯಿತು. ಮೂತ್ರಪಿಂಡ, ಯಕೃತ್ತು ಅಥವಾ ಹೃದಯ ದಾನದ ಕತೆಯೂ ಹೆಚ್ಚುಕಡಿಮೆ ಹೀಗೆಯೇ ಇದೆ.

ಮಾಮೂಲಿಯಾದ ಕೇಂದ್ರ–ರಾಜ್ಯ ಸಂಬಂಧಗಳು ಹಾಗೂ ಸಾರ್ವಜನಿಕ ಆರೋಗ್ಯ ವಲಯದಲ್ಲಿ ನಿಯಂತ್ರಕ ಕಾನೂನುಗಳನ್ನು ಮಾಡುವಾಗ ಉದ್ಭವಿಸುವ ಒತ್ತಡಗಳ ನಡುವೆಯೂ ಈ ಎಲ್ಲವೂ ಅಂಗದಾನದ ಅಗತ್ಯವಿರುವವರ ಉಪಯೋಗಕ್ಕೆ ಬರುವಂತೆ ಮಾಡಿದ ಕೆಲವು ರಾಜ್ಯಗಳ ನಿದರ್ಶನಗಳು ನಮ್ಮ ಮುಂದಿವೆ. ಈ ಕೆಲವು ವರ್ಷಗಳಲ್ಲಿ ಈ ದಿಸೆಯಲ್ಲಿ ತಮಿಳ್ನಾಡು ರಾಜ್ಯ ಮುಂಚೂಣಿಯಲ್ಲಿದೆ. ಅದು ಪ್ರಗತಿಪರ ಕಾನೂನು ರೂಪಿಸಿದೆ,




ವ್ಯಾಪಕವಾದ ಜಾಲಗಳನ್ನು ಸ್ಥಾಪಿಸಿದೆ, ವ್ಯವಸ್ಥಿತವಾದ ನೋಂದಣಿಗೆ ಅವಕಾಶ ಕಲ್ಪಿಸಿದೆ; ಉತ್ತಮ ಆರೋಗ್ಯ ನಿರ್ವಹಣೆಯ ಮೂಲತತ್ವಗಳಿಗೆ ಅನುಸಾರವಾಗಿ ಈ ಎಲ್ಲವೂ ಕಾರ್ಯನಿರ್ವಹಿಸುತ್ತಿವೆ. ವಾರ್ಷಿಕ ಒಂದು ಮಿಲಿಯ ಜನಸಂಖ್ಯೆಗೆ 0.8 ಅಂಗದಾನದ ದರವನ್ನು ಹೊಂದಿ ದೇಶಕ್ಕೆ ಮಾದರಿಯಾಗಿದೆ. ಶವಗಳಿಂದ ತೆಗೆದ ಅಂಗ ಅಥವಾ ಜೀವಂತ ವ್ಯಕ್ತಿಯಿಂದ ಅಂಗದಾನ – ಇದರಲ್ಲಿ ಯಾವುದೇ ಆಗಿರಲಿ ಸಮನ್ವಯ ಮತ್ತು ಸಂಘಟನೆ ಅತ್ಯಂತ ನಿರ್ಣಾಯಕ. ಇದನ್ನು ಮನಗಂಡಿರುವ ತಮಿಳ್ನಾಡು ಸರ್ಕಾರ ಅಂಗ ಕಸಿಕಟ್ಟುವಿಕೆಗಾಗಿ ಕಾಯುತ್ತಿರುವ ವ್ಯಕ್ತಿಗಳಿಗೆ ಅಂಗಗಳನ್ನು ಒದಗಿಸುವ ಸೂಕ್ತ ವ್ಯವಸ್ಥೆಯನ್ನು ಮಾಡಿದೆ. ಪರಿಣತರ ಜೊತೆಗಿನ ಸಮಾಲೋಚನೆ, ಕಾರ್ಯಾಗಾರಗಳು ಮತ್ತು ರಾಜ್ಯವು ಅನುಸರಿಸಬೇಕಾದ ಸೂಕ್ತ ಮಾರ್ಗದರ್ಶಿ ಸೂತ್ರಗಳ ಬಗ್ಗೆ ತೀವ್ರವಾದ ಸಂಶೋಧನೆ ಇತ್ಯಾದಿಗಳನ್ನು ನಡೆಸಿದ ಬಳಿಕ ಸರ್ಕಾರ ಅಂಗದಾನ ವ್ಯವಸ್ಥೆಗೆ ಒಂದು ಚೌಕಟ್ಟು ರೂಪಿಸಿದೆ. ಇಂದು ಶವಗಳಿಂದ ಹೊರತೆಗೆದ ಅಂಗಾಂಗಗಳ ಕಸಿಕಟ್ಟುವಿಕೆಯಲ್ಲಿ ತಮಿಳ್ನಾಡು ಸಾಕಷ್ಟು ಮುಂದಿದೆ. ಈ ನಡುವೆ ಕೇರಳದಲ್ಲಿ 2012ರಲ್ಲಿ ಹಲವಾರು ಪ್ರಗತಿಪರ ಆಜ್ಞೆಗಳನ್ನು ಸರಕಾರ ಹೊರಡಿಸಿತು. ಪರಿಣಾಮಕಾರಿ ದಾನಿ ನಿರ್ವಹಣೆ ಹಾಗೂ ಅಂಗ ಹೊರತೆಗೆವ ಕೇಂದ್ರಗಳ ಮತ್ತು ಅಂಗಕಸಿಕಟ್ಟುವ ಕೇಂದ್ರಗಳ ಸಮರ್ಪಕ ಸಮನ್ವಯವನ್ನು ಅವಲಂಬಿಸಿ ಅಂಗಕಸಿಕಟ್ಟುವಿಕೆ ಅದರಲ್ಲೂ ಶವಗಳಿಂದ ಹೊರತೆಗೆದ ಅಂಗಗಳ ಕಸಿಕಟ್ಟುವಿಕೆಯಲ್ಲಿ ಯಶಸ್ಸು ಲಭ್ಯವೆಂಬುದನ್ನು ಸರ್ಕಾರ ಮನಗಂಡಿದೆ. ಕೇರಳ ಸರ್ಕಾರವು ಅಂಗಾಂಗಗಳ ಹಂಚಿಕೆಜಾಲವನ್ನು, ಅಂಗಕಸಿಕಟ್ಟುವ ಸಲುವಾಗಿ ಶವಾಂಗದಾನ ನೋಂದಣಿ ಕೇಂದ್ರವನ್ನು ತಮಿಳ್ನಾಡು ಮಾದರಿಯಲ್ಲಿ ಸ್ಥಾಪಿಸಿದೆ.

ಒಟ್ಟಿನಲ್ಲಿ ಸಾಕಷ್ಟು ಕೆಲಸ ನಡೆದಿದೆ. ಆದರೆ ಇನ್ನೂ ಮಾಡಬೇಕಾದದ್ದು ಸಾಕಷ್ಟಿದೆ. ಇದು ತುಂಬಾ ಆದರ್ಶವಾದಿ ಎಂದು ಕಾಣಬಹುದಾದರೂ ಸಕಾಲದಲ್ಲಿ ಅಂಗಕಸಿಕಟ್ಟುವಿಕೆ ನಡೆಯದ ಕಾರಣಕ್ಕಾಗಿ ಯಾವುದೇ ವ್ಯಕ್ತಿ ಸಾಯುವ ಸ್ಥಿತಿಬರಬಾರದು ಎಂಬ ಒಂದು ರಾಷ್ಟ್ರೀಯ ಕಾಣ್ಕೆ ನಿಜಕ್ಕೂ ಉತ್ತಮವಾದುದು; ಹೀಗೆ ಕನಸುಕಾಣುವುದು ಕೂಡ ಯೋಗ್ಯವಾದುದೇ. ವ್ಯವಸ್ಥೆಗಳು, ಜಾಲಗಳು ಇವೆ; ಮಿಲಿಯಗಟ್ಟಲೆ ಜನರ ಹೃದಯಗಳಲ್ಲಿ ಪರಹಿತ ಚಿಂತನೆ ಮಿಡಿಯುತ್ತಿದೆ ಎಂದು ಹೇಳಲೇಬೇಕಾಗಿಲ್ಲ. ನಾವೀಗ ಮಾಡಬೇಕಾಗಿರುವುದಿಷ್ಟೆ: ನಮ್ಮ ವ್ಯವಸ್ಥೆ ಚೆನ್ನಾಗಿ ಕೆಲಸಮಾಡಬೇಕು.

ಅದು ಯಾವ ಸೇವೆಗಳನ್ನು ನೀಡಬೇಕೋ ಆ ಸೇವೆಗಳನ್ನು ನೀಡುವುದನ್ನು ಖಾತ್ರಿಪಡಿಸಬೇಕು. ಅಂಥ ಒಂದು ಸಾಧ್ಯತೆ ಎಂದೋ ಒಂದು ದಿನ ಸಂಭವಿಸುವ ಹಾಗಾಗದಿರಲಿ; ಒಳ್ಳೆಯ ದಿನಗಳಿಗಾಗಿ ನಾವು ಕನಸುಕಾಣುವುದು ನಿಲ್ಲದಿರಲಿ. ❑

# ಪ್ರಜಾಸತ್ತೆ ಮತ್ತು ಚುನಾವಣಾ ಸುಧಾರಣೆ

ನ್ಯಾಯಮೂರ್ತಿ ಕೋ. ಚೆನ್ನಬಸಪ್ಪ



**ನಮ್ಮ ಚುನಾವಣೆಗಳಲ್ಲಿ ಆಗುವ ಅತ್ಯಂತ ಘನ-ಘೋರವಾದ ಅಕ್ರಮ, ಅನ್ಯಾಯವೆಂದರೆ ಜಾತಿಬಲ ಮತ್ತು ಧನಬಲದ ಶಕ್ತಿ. ಜಾತಿಮೂಲಾಧಾರಿತ ಈ ನಮ್ಮ ದೇಶದಲ್ಲಿ ಜಾತೀಯತೆಯ ಮೂಲಕ ಚುನಾವಣೆಯನ್ನು ಭ್ರಷ್ಟಗೊಳಿಸುವ ಪ್ರಯತ್ನ ದಿನೇ ದಿನೇ ನಡೆಯುತ್ತಿದೆ.**

ಜನವರಿ 26, 1950 ರಂದು 'ನಾವು' ಅಂಗೀಕರಿಸಿದ ಸಂವಿಧಾನದ ಮೂಲೋದ್ದೇಶ ವಾಕ್ಯದ ಪ್ರಥಮ ಶಬ್ದಗಳು: "ಭಾರತದ ಪ್ರಜೆಗಳಾದ ನಾವು ಈ ದೇಶವನ್ನು ಸಾರ್ವಭೌಮ, ಸಮಾಜವಾದಿ, ಜಾತ್ಯತೀತ ಪ್ರಜಾಸತ್ತೆಯಾಗಿ ನಿರ್ಮಾಣ ಮಾಡಲು ತೀರ್ಮಾನಿಸಿ ಎಲ್ಲ ನಾಗರಿಕರಿಗೂ ನ್ಯಾಯ, ಸ್ವಾತಂತ್ರ್ಯ, ಸರಿಸಮಾನತೆ ಹಾಗೂ ಭ್ರಾತೃತ್ವವನ್ನು ಉಂಟುಮಾಡಲು ಈ ಸಂವಿಧಾನವನ್ನು ನಾವೇ ರಚಿಸಿ, ನಮಗೆ ನಾವೇ ಅದನ್ನು ಅರ್ಪಿಸಿಕೊಂಡಿದ್ದೇವೆ" ಎಂಬುದಾಗಿ ಲಿಖಿಸಲಾಗಿದೆ.

ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಶಬ್ದವೆಂದರೆ 'ಪ್ರಜಾಸತ್ತೆ'. ಇದನ್ನು 'ಪ್ರಜಾಪ್ರಭುತ್ವ' ಎನ್ನುವುದಕ್ಕಿಂತಲೂ 'ಪ್ರಜಾಸತ್ತೆ' ಎನ್ನುವುದು ಹೆಚ್ಚು ಉಚಿತ. ಪ್ರಜೆ ತನಗೆ ತಾನೇ ಒಡೆಯ. ಅವನು ಯಾರಿಗೂ ಅಧೀನ(subject) ಅಲ್ಲ. ಸಂವಿಧಾನದ ಈ ಮೂಲೋದ್ದೇಶ ವಾಕ್ಯದಲ್ಲಿರುವ ಇನ್ನೊಂದು ಪ್ರಮುಖವಾದ ಮಾತು 'ಸರಿಸಮಾನತೆ'(Equality). ಅಂದರೆ ಈ ಭರತ ಖಂಡದಲ್ಲಿ ವಾಸಿಸುವ ಪ್ರತಿಯೊಬ್ಬ ಪ್ರಜೆಯೂ, ಸರಿಸಮಾನರು. ಪ್ರಜೆಗಳಲ್ಲಿ ತಾರತಮ್ಯವೆಂಬುದೆ ಇಲ್ಲ. ಭಿನ್ನ ಭೇದ ಎಂಬುದೇ ಇಲ್ಲ. ಸ್ತ್ರೀ ಪುರುಷರೆಂಬ ಲಿಂಗಭೇದವೂ ಇಲ್ಲ! ಬಡವ-ಬಲ್ಲಿದರೆಂಬ ಆರ್ಥಿಕ ಅಸಮಾನತೆ ಇಲ್ಲ. ಉಚ್ಚ-ನೀಚ ಎಂಬ ಜಾತಿ ಭೇದಗಳಿಲ್ಲ. ಭಗವತ್ ಸೃಷ್ಟಿಯ ಮಾನವರೆಲ್ಲರೂ ಸರ್ವಸಮಾನರು.

ಸಂವಿಧಾನದ ಸರಿಸಮಾನತೆ ಎಂಬ ಈ ಮೂಲೋದ್ದೇಶವನ್ನು ಆರ್ಟಿಕಲ್ 14 ರಲ್ಲಿ ಠರಾಯಿಸಲಾಗಿದೆ. ಸರಿಸಮಾನತೆ ಎಂಬುದು ನಮ್ಮ ಸಂವಿಧಾನ ಸೌಧದ ಭದ್ರ ಬುನಾದಿಯ ಮೂಲೆಗಲ್ಲು (Corner Stone) ಈ ಸರಿಸಮಾನತೆಯ ಬುನಾದಿಯ ಮೇಲೆ ಕಟ್ಟಿದ ರಾಜ್ಯಾಡಳಿತೆಯ ವ್ಯವಸ್ಥೆಯೆ 'ಪ್ರಜಾಸತ್ತೆ'ಯ ಆಡಳಿತ ವ್ಯವಸ್ಥೆ. ಇಂಥ ಆಡಳಿತೆಯ ಯಂತ್ರವನ್ನು ರಚಿಸಲು ದೇಶದ ನೂರಾರು ಕೋಟಿ ಪ್ರಜೆಗಳೆ ತಮ್ಮ ಒಡೆತನವನ್ನು ಕಾರ್ಯಗತಗೊಳಿಸಲು ತಮ್ಮ ಪ್ರತಿನಿಧಿಗಳನ್ನು 'ಚುನಾವಣೆ'ಯ ಮೂಲಕ ಆಯ್ಕೆಮಾಡಿ ಪ್ರತಿಯೊಬ್ಬರಲ್ಲಿರುವ ಸಾರ್ವಭೌಮಾಧಿಕಾರವನ್ನು 'ಪ್ರಜಾಪ್ರತಿನಿಧಿ'ಗಳಿಗೆ ಕೊಡುತ್ತಾರೆ. ಆ ಪ್ರಜಾಪ್ರತಿನಿಧಿಗಳು ಪ್ರಾಮಾಣಿಕವಾಗಿ ಆಯ್ಕೆಯಾಗಿ, ಪ್ರಜೆಗಳ ಸೇವಕರಾಗಿ ರಾಜ್ಯಾಡಳಿತೆಯನ್ನು ನಡೆಸತಕ್ಕದ್ದು. ಅಂದರೆ ಪ್ರಜಾಪ್ರತಿನಿಧಿಗಳನ್ನು ಆರಿಸುವ ಪ್ರಕ್ರಿಯೆಯೆ 'ಚುನಾವಣೆ'. ಚುನಾವಣೆಗಳು ಪ್ರಜಾಪ್ರಾತಿನಿಧ್ಯ ಕಾಯ್ದೆ(1950 ಮತ್ತು 1951) ಗಳ ಪ್ರಕಾರವಾಗಿಯೆ ನಡೆಯತಕ್ಕದ್ದು. ಅಂದರೆ ಚುನಾವಣೆಗಳು ಪ್ರಜಾಸತ್ತೆಯ 'ತಾಯಿ ಬೇರು, ತಾಯಿಯ ಮೊಲೆ ಹಾಲು'. ತಾಯಿ ಬೇರು ಸರಿಯಾಗಿ ಬೇರು ಬಿಡದಿದ್ದರೆ ಪ್ರಜಾಸತ್ತೆಯ ಗಿಡ ಬೆಳೆಯಲಾರದು, ಒಣಗುತ್ತದೆ! ತಾಯಿಯ ಎದೆ ಹಾಲು ವಿಷವಾದರೆ ಮಗು ಬದುಕಲಾರದು. ಇನ್ನೊಂದು ಮಾತಿನಲ್ಲಿ- 'ಚುನಾವಣೆಗಳು ಕಲುಷಿತವಾದರೆ ಪ್ರಜಾಸತ್ತೆ ಎಂಬ ವೃಕ್ಷ ಬೆಳೆಯಲಾರದು, ಉಳಿಯಲಾರದು'. ಆದ್ದರಿಂದ ಚುನಾವಣೆಗಳಲ್ಲಿ ಮತದಾನ ಮಾಡುವ ಮತದಾರ ತನ್ನ ಪರಮಾಧಿಕಾರವನ್ನು ಮತ್ತೊಬ್ಬರಿಗೆ

ನಿವೃತ್ತ ನ್ಯಾಯಾಧೀಶರು, ಖ್ಯಾತಲೇಖಕರು.

ಹಸ್ತಾಂತರಿಸುವಾಗ ಆ ಅಧಿಕಾರವನ್ನು ಬಹಳ ಎಚ್ಚರಿಕೆಯಿಂದ ಮತದಾನ ಮಾಡಬೇಕು. ತಾನು ಚುನಾಯಿಸಲಿರುವ ಆ ವ್ಯಕ್ತಿ ತನ್ನ ಪರಮಾಧಿಕಾರವನ್ನು ಪ್ರಜೆಗಳ ಹಿತಕ್ಕಾಗಿಯೆ ವಿನಿಯೋಗಿಸುತ್ತಾನೆಯೊ ಅಥವಾ ಸ್ವಾರ್ಥಕ್ಕೊ, ಪರಪೀಡನೆಗೊ ಎಂಬುದನ್ನು ಗಾಢವಾಗಿ ಯೋಚಿಸಿ ಎಚ್ಚರಿಕೆಯಿಂದ ಮತದಾನ ಮಾಡಬೇಕು. ಮತದಾರ ಮತಿವಂತನಾಗಿರಬೇಕು. ನೋಟಿಗಾಗಿ ಓಟು ಮಾರಿಕೊಳ್ಳುವವರು ಮತಿಗೇಡಿಗಳು, ಮಾನಹೀನರು.

ಈ ಚುನಾವಣೆಗಳು ಪರಿಶುದ್ಧ (Pure) ವಾಗಿರಬೇಕು ಮತ್ತು ನ್ಯಾಯಸಮ್ಮತ (Fair) ಆಗಿರಬೇಕು. ಚುನಾವಣೆಗಳ ಪಾವಿತ್ರ್ಯ ಹಾಳಾಗುವುದಕ್ಕೆ ಇರುವ ಒಂದು ದೊಡ್ಡ ಕಂಟಕ ಮತದಾರರನ್ನು 'ಭ್ರಷ್ಟ'ಗೊಳಿಸುವುದು. ಮತದಾರರು ಭ್ರಷ್ಟರಾದರೆ ಅವರು ಆರಿಸಿ ಕಳಿಸುವ ಪ್ರತಿನಿಧಿಗಳು ತಪ್ಪದೆ ಭ್ರಷ್ಟರಾಗಿಯೆ ಇರುತ್ತಾರೆ. ಚುನಾವಣೆಗಳಲ್ಲಿ ಭ್ರಷ್ಟಚಾರವನ್ನು ತಡೆಯಲು ಪ್ರಜಾಪ್ರಾತಿನಿಧ್ಯ ಕಾಯ್ದೆಗಳಲ್ಲಿ ತಕ್ಕಮಟ್ಟಿಗೆ ಸರಿಯಾದ ಸೂತ್ರಗಳನ್ನು, ನಿಯಮಗಳನ್ನು ಅಳವಡಿಸಲಾಗಿದೆ. ಯಾರು ಮತದಾರರಾಗಿಬೇಕು, ಎಂಥವರು ಚುನಾವಣೆಗಳಲ್ಲಿ ಸ್ಪರ್ಧಿಸಬೇಕು ಎಂಬುದನ್ನು ವಿಧಿಸಲಾಗಿದೆ. ಚುನಾವಣಾ ಪ್ರಚಾರದಲ್ಲಿ ಧನಬಲ ಮತ್ತು ತೋಳ್ಬಲವನ್ನು ನಿಷೇಧಿಸಲು ಮತದಾರರಿಗೆ ಆಸೆ–ಆಮಿಷಗಳನ್ನು ಒಡ್ಡದಂತೆ, ಹೆದರಿಕೆ ಬೆದರಿಕೆ ಒಡ್ಡದಂತೆ, ಸರ್ಕಾರಿ ಯಂತ್ರವನ್ನು ದುರ್ಬಳಕೆ ಮಾಡದಂತೆ, ಸರ್ಕಾರಿ ನೌಕರರ ಸಹಾಯವನ್ನು ಪಡೆಯದಂತೆ ಆಡಳಿತದಲ್ಲಿರುವ ರಾಜಕೀಯ ಪಕ್ಷ ತಮ್ಮ ಪಕ್ಷದ ಗೆಲುವಿಗಾಗಿ ಸರ್ಕಾರದ ಸಂಪನ್ಮೂಲವನ್ನು ದುರುಪಯೋಗಿಸಿ ಕೊಳ್ಳದಂತೆ ಚುನಾವಣೆಗಳಲ್ಲಿ ಅಪಾರ ಧನ ಖರ್ಚುಮಾಡಿ ಪ್ರತಿಸ್ಪರ್ಧಿಗಳನ್ನು ಅಡಗಿಸುವ ತಂತ್ರವನ್ನು ಈ ಕಾಯ್ದೆಯ ಮೂಲಕ ನಿಯಂತ್ರಿಸಲಾಗಿದೆ.

ಪ್ರಜಾಪ್ರಾತಿನಿಧ್ಯ ಕಾಯ್ದೆಯು ಚುನಾವಣೆಗಳ ಪಾವಿತ್ರ್ಯತೆಯನ್ನು ಕಾಪಾಡಲು ಚುನಾವಣೆ ನ್ಯಾಯಸಮ್ಮತವಾಗಿ ನಡೆಯಲು ತಕ್ಕ ಶಾಸನವನ್ನು ಅದಕ್ಕೆ ಅನುಗುಣವಾದ ವಿಧಿ, ನಿಷೇಧಗಳ ನಿಯಮವನ್ನು ವಿಧಿಸಲಾಗಿದೆ. ಆದರೂ ಇಷ್ಟೆಲ್ಲ ಮುನ್ನೆಚ್ಚರಿಕೆ ವಹಿಸಿದರೂ, ನಮ್ಮೆಲ್ಲರಿಗೂ ಚೆನ್ನಾಗಿ



ಗೊತ್ತಿರುವಂತೆ ಈಗಿನ ಚುನಾವಣೆಗಳು ನಿಜವಾದ ಅರ್ಥದಲ್ಲಿ ಚುನಾವಣೆಗಳಲ್ಲ. ದುಡ್ಡಿದ್ದ ಯಾವ ಭ್ರಷ್ಟರಾದರೂ ಚುನಾವಣೆಯಲ್ಲಿ ತನ್ನ ಧನಬಲದಿಂದ ಗೆದ್ದು, ಅಧಿಕಾರವನ್ನು ಪಡೆಯುತ್ತಿದ್ದಾರೆ. ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಆರಿಸಿ ಬಂದ 530 ಲೋಕಸಭಾ ಸದಸ್ಯರಲ್ಲಿ 53 (ಶೇ. 11 ರಷ್ಟು) ಜನರ ಮೇಲೆ 'ಕ್ರಿಮಿನಲ್ ಕಟ್ಲೆಗಳು' ದಾಖಲೆಯಾಗಿವೆ. ಕೊಲೆ, ಸುಲಿಗೆ, ಡಕಾಯಿತಿ ಮುಂತಾದ ಹೀನ ಅಪಾರಾಧಗಳಲ್ಲಿ ಆರೋಪಿಗಳಾದವರು, ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಗಾಗಿರುವವರು, ಸೆರೆಮನೆವಾಸ ಅನುಭವಿಸಿದವರೂ ಚುನಾವಣೆಯಲ್ಲಿ ನಿಂತು ಗೆದ್ದುಬಂದಿದ್ದಾರೆ. ಭ್ರಷ್ಟಚಾರಿಗಳನ್ನು ಪದಚ್ಯುತಿಗೊಳಿಸಲಿಕ್ಕಾಗಿಯೆ ಚುನಾವಣೆಗೆ ನಿಂತವರು ಮತ್ತು ಗೆದ್ದುಬಂದವರು ತಾವೆ ದೊಡ್ಡ ಭ್ರಷ್ಟಚಾರಿಗಳು. ಹಾಗಾದರೆ ಈ ಪ್ರಜಾಪ್ರಾತಿನಿಧ್ಯ ಕಾಯ್ದೆಯ ಪ್ರಯೋಜನವೆ? ಅಂದರೆ ಈ ಕಾಯ್ದೆಗಳಿಂದ ನ್ಯಾಯಸಮ್ಮತವಾದ (Fair), ಪರಿಶುದ್ಧವಾದ (Pure) ಚುನಾವಣೆ ನಡೆಸಲಾಗುವುದಿಲ್ಲ ಎಂಬುದು ಪ್ರತ್ಯಕ್ಷವಾಗಿಯೂ ದಿಟವಾಗಿದೆ. ಆದ್ದರಿಂದಲೆ ಚುನಾವಣೆ ಕಾಯ್ದೆ ತಿದ್ದುಪಡಿಯಾಗಬೇಕೆಂಬ ಮಾತನ್ನು ಭ್ರಷ್ಟಚಾರದಿಂದಲೆ ಗೆದ್ದು ಬಂದವರು ಹೇಳುತ್ತಾರೆ.

ರಾಜರಿದ್ದ ಕಾಲದಲ್ಲಿ 'ಯಥಾ ರಾಜ ತಥಾ ಪ್ರಜಾ' ಎಂಬ ಒಂದು ಮಾತಿತ್ತು. ಆ ಮಾತಿನ ಅರ್ಥ 'ರಾಜರಿದ್ದಂತೆ ಪ್ರಜೆಗಳು' ಎಂದಾಗಿತ್ತು. ಈಗ ಪ್ರಜಾಸತ್ತೆಯಲ್ಲಿ ರಾಜರಿಲ್ಲ, ಪ್ರಜೆಗಳೆ ಒಡೆಯರು. ಈಗ 'ಯಥಾ ಪ್ರಜಾ ತಥಾ ಶಾಸಕ, ಮಂತ್ರಿ' ಎಂಬಂತಾಗಿದೆ. ಎಲ್ಲಿಯವರೆಗೆ ಮತದಾರ ಭ್ರಷ್ಟನಾಗಿರುತ್ತಾನೆಯೊ ಅಲ್ಲಿಯವರೆಗೆ ಆಯ್ದ ಪ್ರತಿನಿಧಿ ಒಳ್ಳೆಯನಾಗಿರುವುದು ಸಾಧ್ಯವಿಲ್ಲ. ಅಂದಮೇಲೆ ಪ್ರಜೆಗಳೆ ಮೊದಲು ಒಳ್ಳೆಯವರಾಗಿರಬೇಕು. ಅಂದರೆ ಚುನಾವಣೆ ಪರಿಶುದ್ಧವಾಗಿರಬೇಕೆಂದರೆ ಪ್ರಜೆಗಳು ಪರಿಶುದ್ಧವಾಗಿರಬೇಕು. ಯಾವುದೇ ಆಸೆ ಆಮಿಷಗಳಿಗೆ ಒಳಗಾಗಬಾರದು. ಹೆದರಿಕೆ ಬೆದರಿಕೆಗಳಿಗೆ ಬಗ್ಗಬಾರದು. ಜಾತಿ ಪಕ್ಷಪಾತ ಮತದಾರರಿಗೆ ಇರಬಾರದು. ಇಂಥ ಪರಿಶುದ್ಧವಾದ ಮತದಾರರಿದ್ದರೆ ಭ್ರಷ್ಟರಿಗೆ ಮತ ನೀಡಲಾರ. ಆದ್ದರಿಂದ ಮೊದಲನೆಯ ಸುಧಾರಣೆ ಆಗಬೇಕಾದದ್ದು ಮತದಾರನ ಮನಸ್ಸು. ಅವನು ಒಳ್ಳೆಯವನಾದರೆ ಚುನಾವಣೆಯಲ್ಲಿ ಒಳ್ಳೆಯವರನ್ನು ಆರಿಸಬಹುದು. ಮತದಾರ ಪ್ರಜ್ಞಾವಂತನಾಗಿರುವಂತೆ, ಪ್ರಾಮಾಣಿಕನಾಗಿರುವಂತೆ ಇರಲು ಏನು ಮಾಡಬೇಕು? ಆ ಮತದಾರನ ಮನಸ್ಸನ್ನು ತಿದ್ದುವ ನಿಯಮ ಯಾವುದು ಇಲ್ಲ. ಮಲಿನವಾದ ಮತ್ತು ಆಗಲಿರುವ ಮನಸ್ಸನ್ನು ನಿರ್ಮೂಲನೆ ಮಾಡುವಂಥ ಯಾವ ಶಾಸನವೂ ಇಲ್ಲ. ನಿಷೇಧಿಸಿದ ನಿಯಮೋಲ್ಲಂಘನೆ ಮಾಡಿದರೆ ಶಿಕ್ಷಿಸುವ, ಚುನಾವಣೆಯನ್ನು ರದ್ದುಪಡಿಸುವ ಶಾಸನ ಪ್ರಜಾಪ್ರಾತಿನಿಧ್ಯ ಕಾಯ್ದೆಯಲ್ಲಿದೆ. ಆದರೆ ಅದು ಅಷ್ಟೇನು ಪ್ರಾಯೋಜನಕಾರಿಯಾಗಿಲ್ಲ; ಪರಿಣಾಮಕಾರಿಯಾಗಿಲ್ಲ.

ಚುನಾವಣೆಗಳು ಮುಗಿದಮೇಲೆ ಮತ ಎಣಿಕೆಯಾದ ಕೂಡಲೆ ಗೆದ್ದ ಅಭ್ಯರ್ಥಿಗೆ ಕ್ಷೇತ್ರದ ಚುನಾವಣಾಧಿಕಾರಿ ಚುನಾವಣಾ ಫಲಿತಾಂಶವನ್ನು Form 21ಅ ನಲ್ಲಿ ಕೊಟ್ಟಮೇಲೆ ಆ ಚುನಾವಣೆ ಸಿಂಧುತ್ವವನ್ನು

ಉಚ್ಚನ್ಯಾಯಾಲಯದಲ್ಲಿಯೆ ಚುನಾವಣಾ ಅರ್ಜಿಯ ಮೂಲಕ ಮಾತ್ರ ಪ್ರಶ್ನಿಸಬಹುದು. ಪ್ರಜಾಪ್ರಾತಿನಿಧ್ಯ ಕಾಯ್ದೆ 1951 ರ ಸೆಕ್ಷನ್ 80, 81, 82, ಮತ್ತು 83 ರ ಪ್ರಕಾರ ಚುನಾವಣೆ ಮುಗಿದ 45 ದಿನಗಳೊಳಗಾಗಿ ದಾಖಲಿಸತಕ್ಕದ್ದು. ಚುನಾವಣಾ ನ್ಯಾಯಾಲಯ ಸೆಕ್ಷನ್ 98, 99 ರ ಪ್ರಕಾರ ಚುನಾವಣೆಯನ್ನು ರದ್ದುಪಡಿಸಬಹುದು. ಸೆಕ್ಷನ್ 86, ಸಬ್‌ಸೆಕ್ಷನ್ 7ರ ಪ್ರಕಾರ ಉಚ್ಚ ನ್ಯಾಯಾಲಯ ಚುನಾವಣಾ ಅರ್ಜಿ ದಾಖಲಾದ 6 ತಿಂಗಳ ಒಳಗಾಗಿ ಅಖೈರಾಗಿ ಇತ್ಯರ್ಥಮಾಡಲು ಸಾಧ್ಯವಾದಮಟ್ಟಿಗೆ ಪ್ರಯತ್ನಿಸತಕ್ಕದ್ದು ("Shall be tried as expeditiosly as possible and endeavour shall be made to conclude the trail with in the Six months") ಎಂಬುದಾಗಿ ದೇಶದ ಅತ್ಯುನ್ನತ ಶಾಸನಸಭೆ ಶಾಸನ ಮಾಡಿದೆ. ಹೀಗಿದ್ದರೂ ಚುನಾವಣಾ ಅರ್ಜಿಗಳನ್ನು 6 ತಿಂಗಳೊಳಗಾಗಿ ಯಾವ ನ್ಯಾಯಾಲಯವು ಅಖೈರಾಗಿ ಇತ್ಯರ್ಥಮಾಡಿಲ್ಲ. ನ್ಯಾಯಾಲಯದ ಈ ವಿಳಂಬ ವ್ಯಾಧಿ ಚುನಾವಣಾ ಅರ್ಜಿಯ ಪ್ರಯೋಜನವನ್ನು ಭಗ್ನಪಡಿಸಿದೆ. 2009 ರಲ್ಲಿ ಜರುಗಿದ 15ನೆ ಲೋಕಸಭೆಯ ಚುನಾವಣೆಯಲ್ಲಿ ಗೆದ್ದು ಬಂದಿದ್ದ 111 ಲೋಕಸಭಾ ಸದಸ್ಯರ ಚುನಾವಣೆಯನ್ನು ಪ್ರಶ್ನಿಸಿ ವಿವಿಧ ಉಚ್ಚ ನ್ಯಾಯಾಲಯಗಳಲ್ಲಿ ಚುನಾವಣಾ ಅರ್ಜಿಗಳನ್ನು ದಾಖಲಿಸಲಾಗಿತ್ತು. ಆ 111 ಚುನಾವಣಾ ಅರ್ಜಿಗಳಲ್ಲಿ ಶೇ. 25 (28 ಚುಣಾವಣಾ ಅರ್ಜಿಗಳು) 15ನೆ ಲೋಕಸಭಾ ಅವಧಿ ಮುಗಿದಮೇಲೆಯೂ ಇತ್ಯರ್ಥವಾಗಲಿಲ್ಲ. ಉಳಿದಿದ್ದ 83 ಅರ್ಜಿಗಳಲ್ಲಿ ಕನಿಷ್ಠ 63 ಅರ್ಜಿಗಳನ್ನು ಮೂರು ವರ್ಷಗಳೊಳಗಾಗಿ ತೀರ್ಮಾನಿಸಿರಲಿಲ್ಲ. ಇನ್ನುಳಿದ ಅರ್ಜಿಗಳಲ್ಲಿ ಶೇ. 80 ಅರ್ಜಿಗಳನ್ನು ವಜಾ ಮಾಡಲಾಗಿತ್ತು. ಈ ಅಂಕಿ ಸಂಖ್ಯೆಗಳಿಂದ ತಿಳಿಯುವ ಸತ್ಯ ಚುನಾವಣಾ ಅರ್ಜಿಗಳು ಬಹುತೇಕ ನಿರರ್ಥಕ. ಅಂದಮೇಲೆ ಸೆಕ್ಷನ್ 80 ರಿಂದ ಸೆಕ್ಷನ್ 116 ರ ವರೆಗೆ ಜನತಾ ಪ್ರಾತಿನಿಧ್ಯ ಕಾಯ್ದೆಯ ಪುಸ್ತಕದಲ್ಲಿ ಮೃತ ವಾಕ್ಯಗಳಾಗಿವೆ. ಅಂದರೆ ಗೆದ್ದು ಬಂದ ಅಭ್ಯರ್ಥಿ ಅಕ್ರಮ, ಅನ್ಯಾಯ, ಅಪ್ರಾಮಾಣಿಕ, ಭ್ರಷ್ಟಚಾರ (Corrupt practise) ದಿಂದ ಗೆದ್ದು ಬಂದಿದ್ದರೂ, ಅವರಲ್ಲಿ ಬಹುಜನರು 5 ವರ್ಷಗಳವರೆಗೆ ಲೋಕಸಭಾ ಸದಸ್ಯರಾಗಿಯೆ ಕಾರ್ಯನಿರ್ವಹಿಸಿದರು! ಅಂದರೆ ಚುನಾವಣೆ ಅರ್ಜಿಯ ಉದ್ದೇಶ ನಿರರ್ಥಕವಾಯಿತು. ಚುನಾವಣಾ ಕಾಯ್ದೆಗೆ ಪ್ರಥಮ ತಿದ್ದುಪಡಿಯಾಗಬೇಕಾಗಿರುವುದು ಈ ವಿಳಂಬ ವ್ಯಾಧಿಯನ್ನು ನಿವಾರಿಸುವುದು.



ಈ ತಿದ್ದುಪಡಿಯನ್ನು ಸೆಕ್ಷನ್ 86 ಕ್ಕೆ ಇನ್ನೊಂದು 8ನೆಯ ಉಪ ಕಲಂ ಸೇರಿಸತಕ್ಕದ್ದು. ಆ ತಿದ್ದುಪಡಿಯ ರೂಪ ನಿವೃತ್ತ ನ್ಯಾಯಮೂರ್ತಿ ವಿ.ಆರ್. ಕೃಷ್ಣ ಅಯ್ಯರ್ ಇಂದಿರಾಗಾಂಧಿ ದಾಖಲಿಸಿದ್ದ ಸೆಕ್ಷನ್ 116 ರ ಕೆಳಗೆ ಕೊಟ್ಟ ಮಧ್ಯಂತರ ತಡೆಯಾಜ್ಞೆಯ ಅಂಶಗಳನ್ನು ಒಳಗೊಂಡಿರಬೇಕು. ಇಂದಿರಾಗಾಂಧಿಯವರ ಚುನಾವಣೆಯನ್ನು ಅಲಹಾಬಾದ್ ಹೈಕೋರ್ಟ್ ರದ್ದುಪಡಿಸಿದಾಗ ಅದರ ವಿರುದ್ಧವಾಗಿ ಇಂದಿರಾಗಾಂಧಿ ಸುಪ್ರೀಂ ಕೋರ್ಟ್‌ನಲ್ಲಿ ಅಪೀಲು ದಾಖಲು ಮಾಡಿ ಅಲಹಾಬಾದ್ ಉಚ್ಚ ನ್ಯಾಯಾಲಯದ ತೀರ್ಪಿಗೆ ತಡೆಯಾಜ್ಞೆ ಕೊಡಬೇಕೆಂದು ಮಧ್ಯಂತರ ಅರ್ಜಿ(IA) ದಾಖಲೆ ಮಾಡಿದರು. ಆ ಮಧ್ಯಂತರ ಅರ್ಜಿಯ ಮೂಲಕ ಅಲಹಾಬಾದ್ ಉಚ್ಚ ನ್ಯಾಯಾಲಯದ ತೀರ್ಪನ್ನು ಜಾರಿಗೊಳಿಸದಂತೆ ತಡೆಯಾಜ್ಞೆ ಮಾಡಿದರೆ, ತಾವು ಲೋಕಸಭೆಯ ಸದಸ್ಯೆಯಾಗಿ ಮುಂದುವರೆಯುವ ಉದ್ದೇಶವಿತ್ತು. ಈ ಅರ್ಜಿಯನ್ನು ಪ್ರತಿವಾದಿ ರಾಜನಾರಾಯಣ್ ವಿರೋಧಿಸಿದರು. ಆ ಅರ್ಜಿ ರಜಾ ಕಾಲಾವಧಿಯ ನ್ಯಾಯಮೂರ್ತಿಗಳಾಗಿದ್ದ ಕೃಷ್ಣ ಅಯ್ಯರ್ ಅವರ ಮುಂದೆ ವಿಚಾರಣೆಗೆ ಬಂತು. ಆಗ ಶ್ರೀ ಅಯ್ಯರ್ ಬಹುಮಹತ್ವದ, ಬಹುಪರಿಣಾಮಕಾರಿಯಾದ ಅತ್ಯಂತ ಜಾಣತನದ ಅರೆತಡೆಯನ್ನು ಕೊಟ್ಟರು. ಆ ತಡೆಯಾಜ್ಞೆಯ ಸಾರಾಂಶ ಹೀಗಿತ್ತು, 'ಇಂದಿರಾಗಾಂಧಿ ಲೋಕಸಭಾ ಸದಸ್ಯೆಯಾಗಿ ಮುಂದುವರೆಯಬಹುದು. ಆದರೆ ಚರ್ಚೆಯಲ್ಲಿ ಭಾಗವಹಿಸಕೂಡದು. ಸಂಬಳ, ಭತ್ಯೆ, ಮುಂತಾದ ಪ್ರತಿಫಲವನ್ನು



ಪಡೆಯತಕ್ಕದ್ದಲ್ಲ. ಸಭೆಯಲ್ಲಿ ಮತ ಚಲಾವಣೆ ಮಾಡತಕ್ಕದ್ದಲ್ಲ'. ಈ ತಡೆಯಾಜ್ಞೆಯ ಪರಿಣಾಮ ಏನಾಯಿತೆಂದರೆ ಲೋಕಸಭೆಯಲ್ಲಿ ಅವರಿಗಿದ್ದ ಸ್ಥಾನ ತೆರವಾಗಲಿಲ್ಲ. ತೆರವಾಗಿದ್ದರೆ ಉಪಚುನಾವಣೆ ನಡೆಯಬೇಕಾದದ್ದು, ನಡೆಯಲಿಲ್ಲ. ಆದರೆ ಅವರು ಪ್ರಧಾನಿಯಾಗಿ ರಾಜ್ಯಭಾರ ಮಾಡುವ ಮುಕ್ತ ಅವಕಾಶವಿತ್ತು. ಹಾಗೂ ಆರಿಸಿ ಬಂದ ಕ್ಷೇತ್ರದ ಪ್ರತಿನಿಧಿಯಾಗಿ ಮುಂದುವರೆದರು. ಈ ಅರ್ಥದ 1 ತಿದ್ದುಪಡಿಯನ್ನು ಸೆಕ್ಷನ್ 86ಕ್ಕೆ ಉಪ ಕಲಂ 8 ಅನ್ನು ಸೇರಿಸಬೇಕು. ಅಂದರೆ ಚುನಾವಣಾ ಅರ್ಜಿಯನ್ನು 6 ತಿಂಗಳೊಳಗಾಗಿ ಅಖೈರಾಗಿ ಇತ್ಯರ್ಥಪಡಿಸತಕ್ಕದ್ದು. ಹಾಗೆ ಇತ್ಯರ್ಥವಾಗದಿದ್ದರೆ 7ನೆಯ ತಿಂಗಳಿಂದ ಆರಿಸಿ ಬಂದ ಲೋಕಸಭಾ ಸದಸ್ಯ ಲೋಕಸಭೆಯಲ್ಲಿ ಕುಳಿತಕೊಳ್ಳಬಹುದು. ಆದರೆ ಆತನಿಗೆ ಸಂಭಾವನೆ, ಸೌಲಭ್ಯ, ಭತ್ಯೆ, ಇತ್ಯಾದಿ ಯಾವ ಸೌಕರ್ಯಗಳು ದೊರೆಯತಕ್ಕದ್ದಲ್ಲ. ಸಭೆ, ಚರ್ಚೆಯಲ್ಲಿ ಭಾಗವಹಿಸಕೂಡದು, ಮತ ಚಲಾಯಿಸಕೂಡದು. ದೆಹಲಿಯಲ್ಲಿ ಮಾತ್ರ ವಸತಿ ನಿಲಯದ ಸೌಕರ್ಯ ಇರತಕ್ಕದ್ದು. ಅಲ್ಲಿ ವಾಸಿಸುವಾಗ ಇಂಥ ಲೋಕಸಭಾ ಸದಸ್ಯನಿಗೆ ನೀರು, ವಿದ್ಯುಚ್ಛಕ್ತಿ, ದೂರವಾಣಿ, ಸೌಕರ್ಯ ಒಂದು ಮಿತಿಯೊಳಗೆ ಸೌಲಭ್ಯವಿರಬಹುದು. ಲೋಕಸಭೆ ಅಧಿವೇಶನಕ್ಕೆ ಬಂದುಹೋಗುವ ಸಾರಿಗೆ ಸೌಲಭ್ಯ ಒಂದು ಸಾರಿ ಮಾತ್ರ ಕೊಡತಕ್ಕದ್ದು. ಒಂದು ವರ್ಷದ ನಂತರ ತಡೆಯಾಜ್ಞೆಯನ್ನು ತೆರವುಗೊಳಿಸತಕ್ಕದ್ದು. ಮರುಚುನಾವಣೆ ನಡೆಯತಕ್ಕದ್ದು.

ಚುನಾವಣೆ ಸುಧಾರಣೆ ಬಗ್ಗೆ ಕಳೆದ 20 ವರ್ಷಗಳಲ್ಲಿ ಅಪಾರ ಗ್ರಂಥ ರಾಶಿಯೆ ಸೃಷ್ಟಿಯಾಗಿದೆ. ಆ ಎಲ್ಲ ಸುಧಾರಣೆಗಳನ್ನು ಈ ಸಣ್ಣ ಲೇಖನದಲ್ಲಿ ಹೇಳಲು ಸಾಧ್ಯವಿಲ್ಲ. ಆದರೆ ಮುಖ್ಯವಾಗಿ ಮತ್ತು ಶೀಘ್ರವಾಗಿ ಮಾಡಲೇಬೇಕಾದ ಒಂದು ತಿದ್ದುಪಡಿಯನ್ನು ಇಲ್ಲಿ ಸೂಚಿಸಬಹುದು. ಅದೇನೆಂದರೆ ಸಂವಿಧಾನದ ಆರ್ಟಿಕಲ್ 324ರ ಪ್ರಕಾರ ಚುನಾವಣಾ ಆಯೋಗಕ್ಕೆ ಚುನಾವಣೆಗಳನ್ನು ನಡೆಸುವ ಮೇಲ್ವಿಚಾರಣೆಮಾಡುವ, ನಿರ್ದೇಶಿಸುವ, ನಿಯಂತ್ರಿಸುವ ಅಧಿಕಾರವನ್ನು ಕೊಡಲಾಗಿದೆ. ಈ ಆರ್ಟಿಕಲ್‌ನ ಅಧಿಕಾರವನ್ನು ಬಳಸಿ ಮುಖ್ಯ ಚುನಾವಣಾ ಆಯುಕ್ತರಾಗಿದ್ದ ಶ್ರೀ



ಶೇಷನ್ ಅನೇಕ ನಿರ್ದೇಶನಗಳನ್ನು ಜಾರಿ ಮಾಡಿದ್ದರು. ಆ ಅಧಿಕಾರದ ವ್ಯಾಪ್ತಿಯಲ್ಲಿ ಕಾಲಕಾಲಕ್ಕೆ ಚುನಾವಣಾ ಆಯೋಗವು ಮಾದರಿ ಚುನಾವಣಾ ನೀತಿ ಸಂಹಿತೆಯನ್ನು (Model code of conduct) ಅಧಿಸೂಚನೆಗಳ ಮೂಲಕ ಚುನಾವಣೆಗಳಲ್ಲಿ ಆಗಬಹುದಾದದ ಅಕ್ರಮಗಳನ್ನು ತಡೆಯಲು ಅನೇಕ ನಿಯಮಗಳನ್ನು ಜಾರಿಗೊಳಿಸಿದೆ. ಚುನಾವಣಾ ಆಯೋಗವು ಹಿಂದೆ ಕೊಟ್ಟ ಮುಂದೆ ಕೊಡುವ ಎಲ್ಲ ಆದೇಶಗಳು, ನಿರ್ದೇಶನಗಳು, ಇತ್ಯಾದಿ ಪ್ರಜಾಪ್ರಾತಿನಿಧ್ಯ ಕಾಯ್ದೆಯಲ್ಲಿ ತಿದ್ದುಪಡಿಮಾಡಬಹುದು.

ನಮ್ಮ ಚುನಾವಣೆಗಳಲ್ಲಿ ಆಗುವ ಅತ್ಯಂತ ಘನ–ಘೋರವಾದ ಅಕ್ರಮ, ಅನ್ಯಾಯವೆಂದರೆ ಜಾತಿಬಲ ಮತ್ತು ಧನಬಲದ ಶಕ್ತಿ. ಜಾತಿಮೂಲಾಧಾರಿತ ಈ ನಮ್ಮ ದೇಶದಲ್ಲಿ ಜಾತೀಯತೆಯ ಮೂಲಕ ಚುನಾವಣೆಯನ್ನು ಭ್ರಷ್ಟಗೊಳಿಸುವ ಪ್ರಯತ್ನ ದಿನೆ ದಿನೇ ನಡೆಯುತ್ತಿದೆ. ಉಮೇದುವಾರರು ಮಠಗಳು, ಮಠಾಧೀಶರು ತಮ್ಮ ಪ್ರಭಾವವನ್ನು ತಮ್ಮ ತಮ್ಮ ಜಾತಿಯವರಮೇಲೆ ಬೀರಿ, ಚುನಾವಣೆ ಪಾವಿತ್ರ್ಯತೆಯನ್ನು ಹಾಳು ಮಾಡುತ್ತಿದ್ದಾರೆ.

ಜನರನ್ನು ಭ್ರಷ್ಟಗೊಳಿಸಲು ಮಠಗಳು, ಮಠಾಧೀಶರು ಚುನಾವಣೆಗೆ ಸ್ಪರ್ಧಿಸುವ ಅಥವಾ ಸ್ಪರ್ಧಿಸಲಿರುವ ಭಾವಿ ಅಭ್ಯರ್ಥಿಗಳು ಉಚಿತ ಸಾಮೂಹಿಕ ವಿವಾಹಗಳನ್ನು, ಹಳ್ಳಿಗಳಲ್ಲಿ ಊರ ದೇವತೆಗಳ ಜಾತ್ರೆ, ಗಣೇಶೋತ್ಸವ, ಇತ್ಯಾದಿ ಇತ್ಯಾದಿ.. ಮೂಲಕ, ಜನರಿಗೆ ಆಸೆ ಆಮಿಷಗಳನ್ನು ತೋರಿಸುತ್ತಾರೆ. ಈ ಭ್ರಷ್ಟಚಾರವನ್ನು ತಡೆಯಲು ಅಥವಾ ನಿಯಂತ್ರಿಸುವುದಕ್ಕೆ ಪ್ರಜಾಪ್ರಾತಿನಿಧ್ಯ ಕಾಯ್ದೆಯಲ್ಲಿ ಸೆಕ್ಷನ್ 123ರ ಕಲಂನಲ್ಲಿ ಹೇಳಲಾಗಿದೆ. ಆದರೂ ಆ ಕಾಯ್ದೆ ಹೆಚ್ಚು ಪರಿಣಾಮಕಾರಿಯಾಗಿಲ್ಲ.

ಚುನಾವಣಾ ಆಯೋಗವು ಚುನಾವಣಾ ಫಲಿತಾಂಶದ ಪೂರ್ವ ಸಮೀಕ್ಷೆಯನ್ನು ದೂರದರ್ಶನಗಳು ಬಿತ್ತರಿಸಬಾರದೆಂದು ಕೊಟ್ಟಿರುವ ನಿರ್ದೇಶನವನ್ನು ಉಲ್ಲಂಘಿಸಲು ಸುದ್ದಿ ಮಾಧ್ಯಮಗಳು ಒಂದು ಕುಟಿಲ ಉಪಾಯವನ್ನು ಮಾಡಿಕೊಂಡಿವೆ. ಚುನಾವಣೆ ಫಲಿತಾಂಶ ಏನಾಗಬಹುದೆಂಬುದನ್ನು ಸುದ್ದಿ ಮಾಧ್ಯಮದವರು ಅಭ್ಯರ್ಥಿಗಳ ಜಾತಕದ ಆಧಾರದಮೇಲೆ ಅವರ ಗೆಲುವು–ಸೋಲುಗಳನ್ನು ಬಿತ್ತರಿಸಲು ಪ್ರಾರಂಭಿಸುತ್ತಾರೆ. ಇಂಥ ಕುಟಿಲ ಮಾರ್ಗವನ್ನು ತಡೆಯಲು ಸರಿಯಾದ ಶಾಸನವನ್ನು ರೂಪಿಸುವುದು ಅತ್ಯಗತ್ಯ ಹಾಗೂ ಚುನಾವಣಾ ಅಭ್ಯರ್ಥಿ ಎಂದರೆ ಈಗಿರುವ ಪ್ರಜಾಪ್ರಾತಿನಿಧ್ಯ ಕಾಯ್ದೆ ಪ್ರಕಾರ ಅಧಿಕೃತ ಅಭ್ಯರ್ಥಿಗಳ ಪಟ್ಟಿಯನ್ನು ಚುನಾವಣೆ ಅಧಿಕಾರಿ ಪ್ರಕಟಿಸಿದಮೇಲೆ ಚುನಾವಣೆ ಕಣದಲ್ಲಿ ಉಳಿಯುವ ಅಭ್ಯರ್ಥಿ ಮಾತ್ರ ಉಮೇದುದಾರನೆಂದು ಹೇಳಲಾಗಿದೆ. ಹಾಗೆಯೆ ರಾಜಕೀಯ ಪಕ್ಷಗಳು ವೆಚ್ಚಮಾಡುವ ಲಕ್ಷಾವಧಿ ಕೋಟಿ ಕೋಟಿ ಹಣ ಅಭ್ಯರ್ಥಿಗಳ ಚುನಾವಣಾ ವೆಚ್ಚಕ್ಕೆ ಸೇರುವುದಿಲ್ಲವೆಂದು ಇಂದಿರಾಗಾಂಧಿ ಆಡಳಿತೆಯಲ್ಲಿ ಮಾಡಿದ ಪ್ರಜಾಪ್ರಾತಿನಿಧ್ಯ ಕಾಯ್ದೆಯ ತಿದ್ದುಪಡಿಯನ್ನು ರದ್ದುಪಡಿಸತಕ್ಕದ್ದು. ಹೀಗೆ ಅನೇಕ ತಿದ್ದುಪಡಿಗಳನ್ನು ತರಬೇಕಾಗುತ್ತದೆ. ಅದಕ್ಕಾಗಿಯೆ ಕೇಂದ್ರ ಸರ್ಕಾರ ಸೂಕ್ತ ಪ್ರಕ್ರಿಯೆಗಳನ್ನು ಕೈಗೊಳ್ಳತಕ್ಕದ್ದು. ❑

# ಚುನಾವಣೆಗಳಲ್ಲಿ ನಿರಂತರ ಸುಧಾರಣೆ

ಎಂ. ಉಮಾಪತಿ



> ಚುನಾವಣಾ ಸುಧಾರಣೆಗಳ ಮೂಲಕ ನಮ್ಮ ಪ್ರತಿನಿಧಿಗಳ ಗುಣ ಹಾಗೂ ಸರ್ಕಾರಗಳ ಪ್ರಾತಿನಿಧಿತ್ವ, ಗುಣಮಟ್ಟ, ನ್ಯಾಯಪರತೆ, ಸ್ಥಿರತೆ, ಸಾಮರ್ಥ್ಯಗಳನ್ನು ವೃದ್ಧಿಸಬೇಕಾಗಿದೆ. ಚುನಾವಣೆಗಳ ಮೇಲೆ ಚುನಾವಣೆಗಳು ಬರುತ್ತಿವೆ. ಚುನಾವಣಾ ಸುಧಾರಣೆಗಳಿಗಾಗಿ ಜನರ ಎಚ್ಚರ, ಕೂಗು ಮತ್ತು ಒತ್ತಾಯಗಳು ದೊಡ್ಡದಾಗಬೇಕಾಗಿವೆ.

ಭಾರತದ 16ನೇ ಲೋಕಸಭೆಗಾಗಿ 2014ರ ಏಪ್ರಿಲ್–ಮೇ ತಿಂಗಳಲ್ಲಿ ನಡೆದ ಮಹಾ ಚುನಾವಣೆ ಒಂದು ಅಭೂತಪೂರ್ವ ಪ್ರಜಾಪ್ರಭುತ್ವೀಯ ಪ್ರಯೋಗವಾಗಿತ್ತು. ವಿಶ್ವದ ಇತಿಹಾಸದಲ್ಲೇ ಅತೀ ಬೃಹತ್ ಗಾತ್ರದ ಚುನಾವಣೆ ಇದಾಗಿತ್ತು. ಮತದಾರರ ಸಂಖ್ಯೆ 81.45 ಕೋಟಿಯಷ್ಟಿದ್ದು 55.1 ಕೋಟಿ ಅಂದರೆ ಶೇಕಡಾವಾರು 66 ಮತದಾನ ನಡೆಯಿತು. ಮತಗಟ್ಟೆಗಳು 9,30,000 ಗಳಷ್ಟಿದ್ದು 1.1 ಕೋಟಿ ಸಿಬ್ಬಂದಿ ಹಾಗೂ 14 ಲಕ್ಷ ಎಲೆಕ್ಟ್ರಾನಿಕ್ ಮತಯಂತ್ರಗಳಿದ್ದವು. ಈ ಚುನಾವಣೆಗಾಗಿ ಅಧಿಕೃತ ಕೇಂದ್ರ ಸರ್ಕಾರಿ ವೆಚ್ಚ ರೂ. 3,428 ಕೋಟಿಗಳಾಗಿದ್ದವು.

ಈ ಚುನಾವಣೆ ಯಶಸ್ವಿಯಾಗಿ ನಡೆದು ವಿಶ್ವಮಾನ್ಯತೆ ಪಡೆದಿದೆ. ಹೊಸ ಲೋಕಸಭೆ ಸಂಘಟಿತವಾಗಿ ಹೊಸ ಸರ್ಕಾರವೂ ಅಸ್ತಿತ್ವಕ್ಕೆ ಬಂದಿದೆ. ಭಾರತದ ಪ್ರಜಾಪ್ರಭುತ್ವ ಹಾಗೂ ಚುನಾವಣಾ ಆಯೋಗಕ್ಕೆ ಇದು ಹೆಮ್ಮೆ ಪಡುವ ವಿಷಯವಾಗಿರುವುದರಲ್ಲಿ ಅನುಮಾನವಿಲ್ಲ. ಆದರೂ ಹಿಂದಿನ ಚುನಾವಣೆಗಳಂತೆಯೇ ಈ 2014ರ ಚುನಾವಣೆಯಲ್ಲಿ ಹಣ ಮತ್ತು ಹೆಂಡಗಳ ಹೊಳೆ ಹರಿದಿವೆ. ತೋಳುಬಲದ ಪಾತ್ರ, ಗೂಂಡಾಗಿರಿ, ಸಾವುನೋವುಗಳು ಸಂಭವಿಸಿವೆ. ಚುನಾವಣಾ ಆಯೋಗ ಜಾರಿಗೊಳಿಸುವ ಚುನಾವಣಾ ನೀತಿ ಸಂಹಿತೆಯನ್ನು ಗಾಳಿಗೆ ತೂರಿ ಪರಸ್ಪರ ಕೀಳು ನಿಂದನೆಗಳು, ದ್ವೇಷ ದಳ್ಳುರಿಗಳನ್ನುಂಟು ಮಾಡುವ ಭಾಷಣಗಳು ಎಲ್ಲೆಮೀರಿದ ಚುನಾವಣಾ ಹೋರಾಟಗಳು ಮುಂದುವರೆದಿವೆ. ಕ್ರಿಮಿನಲ್ ಆಪಾದನೆಗೊಳಗಾದವರ ಪಾತ್ರ ಮುಂದುವರೆದಿದೆ. ಚುನಾವಣಾ ಆಯೋಗದ ಮೇಲೆ ಗೂಬೆ ಕೂರಿಸುವ ಪ್ರಯತ್ನಗಳೂ ನಡೆದಿವೆ.

ಹಣದ ವೆಚ್ಚದ ದೃಷ್ಟಿಯಿಂದ ನೋಡಿದರೆ ಭಾರತದ ಅನುಭವದಲ್ಲಿನ ಅತ್ಯಂತ ದುಬಾರಿ ಚುನಾವಣೆ ಇದಾಗಿದೆ. ಲೋಕಸಭಾ ಚುನಾವಣೆಗಳಲ್ಲಿ ಹಣದ ಪಾತ್ರ ನಿಗ್ರಹಿಸಲು ಚುನಾವಣಾ ಆಯೋಗ ಪ್ರತೀ ಚುನಾವಣಾ ಸ್ಪರ್ಧಿಯ ವೆಚ್ಚಕ್ಕೆ ರೂ. 70/– ಲಕ್ಷದ ಮಿತಿ ಹಾಕಿದೆ. ಅಲ್ಲದೆ ಪ್ರತೀ ಪಕ್ಷ ಮತ್ತು ಪ್ರತೀ ಸ್ಪರ್ಧಿಯು ಚುನಾವಣ ಹಣಕಾಸು ಲೆಕ್ಕಾಚಾರದ ಬಿಗಿ ನಿಬಂಧನೆಗಳನ್ನು ಜಾರಿಗೊಳಿಸಿ ಇದನ್ನು ಉಸ್ತುವಾರಿ ಮಾಡಲು ದೇಶದಾದ್ಯಂತ 719 ವೆಚ್ಚ ವೀಕ್ಷಕರನ್ನು ನೇಮಿಸಿತು. ಆದಾಗ್ಯೂ ತಜ್ಞರ ಅಂದಾಜಿನ ಪ್ರಕಾರ ಲೋಕಸಭಾ ಕ್ಷೇತ್ರಗಳ ಪ್ರಕೃತಿಯನ್ನು ಆಧರಿಸಿ ಪ್ರತೀ ಅಭ್ಯರ್ಥಿಯೂ ರೂ. 5 ಕೋಟಿಯಿಂದ 15 ಕೋಟಿಗಳವರೆಗೆ ಹಣಕಾಸು ವೆಚ್ಚಮಾಡಿದ್ದಾರೆಂಬ ಅಂದಾಜಾಗಿದೆ. ಒಟ್ಟಾರೆ ಈ ಚುನಾವಣೆಗಾಗಿ ಸರ್ಕಾರದ ರೂ. 3,428 ಕೋಟಿ ವೆಚ್ಚವಲ್ಲದೆ ಪಕ್ಷ ಮತ್ತು ಸ್ಪರ್ಧಿಗಳು ರೂ. 30,000 ಕೋಟಿಯಿಂದ ರೂ. 35,000 ಕೋಟಿವರೆಗೆ ವೆಚ್ಚ ಮಾಡಿದ್ದಾರೆಂಬ ಅಂದಾಜಿದೆ. ಈ ದುಬಾರಿ ವೆಚ್ಚ ಬಹುಪಾಲು ಗೌಪ್ಯವಾಗಿದ್ದು ಇದರ ಹಿಂದೆ ಕಪ್ಪು ಹಣ ಮತ್ತು ಕ್ರಿಮಿನಲ್‌ಗಳ ಪಾತ್ರ ಹೆಚ್ಚಾಗಿರುವುದರಲ್ಲಿ ಅನುಮಾನವಿಲ್ಲ. ಹೀಗೆ ಹಣದ ಪಾತ್ರ ಮಿತಿಮೀರಿರುವುದರಿಂದ ಈಗ ಚುನಾಯಿತವಾಗಿರುವ 16ನೇ ಲೋಕಸಭೆಯಲ್ಲಿ ಶೇಕಡಾವಾರು 82 ಸದಸ್ಯರು ಕೋಟ್ಯಾಧೀಶರಾಗಿದ್ದು, ಈ

ನಿವೃತ್ತ ರಾಜ್ಯಶಾಸ್ತ್ರ ಪ್ರಾಧ್ಯಾಪಕರು, ಮೈಸೂರು.

ಲೋಕಸಭೆಯು ಹಿಂದಿನ (2009 ರಲ್ಲಿ 58% ಮತ್ತು 2004 ರಲ್ಲಿ 30%) ಲೋಕಸಭೆಗಳಿಗಿಂತ ಅತ್ಯಂತ ಹೆಚ್ಚಿನ ಸಂಖ್ಯೆಯ ಶ್ರೀಮಂತರನ್ನುಳ್ಳ ಲೋಕಸಭೆಯಾಗಿದೆ.

ಮೇಲಿನದಕ್ಕೆ ಅನುರೂಪವಾಗಿ ಎಲ್ಲಿ ಸಂಪತ್ತು ಗುಡ್ಡೆಯಾಗುತ್ತದೆ ಅಲ್ಲಿ ಕ್ಷೀಣಿಸಿದ ಮಾನವ ಕಂಡುಬರುತ್ತಾನೆ ಎಂಬ ಒಬ್ಬ ಆಂಗ್ಲ ಕವಿಯ ಹೇಳಿಕೆಯಂತೆ 16ನೇ ಲೋಕಸಭೆಗೆ ಚುನಾಯಿತರಾಗಿರುವ ಸದಸ್ಯರಲ್ಲಿ ಶೇಕಡ 34 ರಷ್ಟು ಅಪರಾಧ ಕಟ್ಲೆಗಳನ್ನು ಹೊತ್ತ ಆಪಾದಿತರಾಗಿದ್ದಾರೆ. ಹೀಗಾಗಿ 16ನೇ ಲೋಕಸಭೆಯು ಹಿಂದೆಂದಿಗಿಂತಲೂ ಹೆಚ್ಚಿನ (2009) ರಲ್ಲಿ ಶೇಕಡ 30 ಮತ್ತು 2004 ರಲ್ಲಿ ಶೇಕಡ 24) ಕ್ರಿಮಿನಲ್ ಆಪಾದಿತರನ್ನು ಹೊಂದಿರುವ ಲೋಕಸಭೆಯಾಗಿದೆ. ಲೋಕಸಭೆಯಲ್ಲಿರುವ ಬಹುತೇಕ ಪಕ್ಷಗಳು ಇಂತಹ ಆಪಾದಿತ ಸದಸ್ಯರನ್ನು ಹೊಂದಿವೆ. ಇಂದಿನ ಆಡಳಿತ ಪಕ್ಷವಾದ ಭಾರತೀಯ ಜನತಾ ಪಕ್ಷದಲ್ಲಿಯೂ ಮೂರನೇ ಒಂದು ಭಾಗಕ್ಕಿಂತ ಮಿಗಿಲಿನ ಸಂಖ್ಯೆಯಲ್ಲಿ ಇಂತಹವರಿದ್ದಾರೆ.

2014ರ ಮಹಾಚುನಾವಣೆಯ ಸಂದರ್ಭದಲ್ಲಿ ಚುನಾವಣಾ ಆಯೋಗದ ಮುಖ್ಯಸ್ಥರಾದ ಶ್ರೀ ಸಂಪತ್‌ರವರ ಪ್ರಕಾರ ಚುನಾವಣೆಯಲ್ಲಿ ಹಂಚಿ ಮತಗಿಟ್ಟಿಸಲು ಕೊಂಡೊಯ್ಯುತ್ತಿದ್ದ, ರೂ. 313 ಕೋಟಿ ನಗದು ಹಣ, 2.25 ಕೋಟಿ ಲೀಟರ್ ಮದ್ಯ, 1.85 ಲಕ್ಷ ಕೆ.ಜಿ. ಮಾದಕ ದ್ರವ್ಯಗಳನ್ನು ಆಯೋಗದ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ. ಈ ಘಟನೆ ಹೊಸದಲ್ಲದಿದ್ದರೂ ಚುನಾವಣೆಗಳ ನ್ಯಾಯಯುಕ್ತತೆಯ ಬಗ್ಗೆ ಆತಂಕವನ್ನು ಹೆಚ್ಚಿಸುತ್ತದೆ ಹಾಗೂ ಮುಂದುವರೆಸುತ್ತದೆ.

ಭಾರತದಲ್ಲಿ 2014ರ ಚುನಾವಣೆ ನಂತರವೂ ಮುಂದುವರೆದಿರುವ ರಾಜಕೀಯ ಅಧೋಗತಿಗಾಗಿ ಭಾರತದ ಚುನಾವಣಾ ವ್ಯವಸ್ಥೆಯ ರೋಗಗ್ರಸ್ಥ ಸ್ಥಿತಿಗಳೆರಡರ ಚಿತ್ರ ಇದಾಗಿದೆ. ಚುನಾವಣೆಗಳಲ್ಲಿ ಅಸಹ್ಯ ಪಡುವಷ್ಟು ಹಣಶಕ್ತಿಯ ಪಾತ್ರ, ಇಡೀ ವ್ಯವಸ್ಥೆಗೆ ರೋಗತರುವಷ್ಟು ಅಪರಾಧಿಗಳ ಪಾತ್ರ, ಜಾತಿ–ಧರ್ಮ–ಲಿಂಗ ಮತ್ತೆಲ್ಲ ತರಹದ ಭ್ರಷ್ಟಾಚಾರಿಗಳ ಪ್ರಭಾವಗಳು ಚುನಾವಣೆಗಳನ್ನು ರೋಗಗ್ರಸ್ತವಾಗಿಸಿವೆ. ಚುನಾವಣೆಗಳು 'ಜನಾದೇಶ'ವಾಗುವ ಬದಲು 'ಧನಾದೇಶ'ವಾಗುತ್ತಿವೆ. ವ್ಯವಸ್ಥೆ



ಅಪರಾಧೀಕರಣಗೊಂಡ ಕಾನೂನಿನ ಶಿಕ್ಷೆಗೊಳಗಾಗ ಬೇಕಾದ ಅಪರಾಧ ಹೊತ್ತವರೇ ಕಾನೂನು ಮಾಡುವ ಸ್ಥಾನದಲ್ಲಿ ಕೂರುತ್ತಿದ್ದಾರೆ. ಚುನಾವಣೆಗಳಲ್ಲಿ ಸಮಾನಾಂತರ ಸ್ಪರ್ಧೆ ಕ್ಷೀಣಿಸಿದೆ. ಫಲಿತಾಂಶಗಳು ಭ್ರಷ್ಟವಾಗುತ್ತಿವೆ. ಪ್ರಜಾಪ್ರಭುತ್ವ ಸರ್ಕಾರಗಳ ನ್ಯಾಯಮುಕ್ತತೆ, ಸ್ಥಿರತೆ ಮತ್ತು ಸಾಮರ್ಥ್ಯಗಳು ಕೆಳಮುಖವಾಗಿವೆ. ಇಂತಹ ರೋಗಗ್ರಸ್ತ ಚುನಾವಣಾ ವ್ಯವಸ್ಥೆಯು ಇಡೀ ರಾಜಕೀಯ ವ್ಯವಸ್ಥೆಯ ಇತರ ರೋಗರುಜಿನಗಳಿಗೆ ಮೂಲವೂ ಮತ್ತು ಪೋಷಕವೂ ಆಗಿದೆ. ಈ ಕಾರಣದಿಂದ ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ನ್ಯಾಯಯುಕ್ತ, ಸ್ಥಿರ ಮತ್ತು ದಕ್ಷವಾಗಿಸಲು ಚುನಾವಣಾ ಸುಧಾರಣೆಯು ಇಂದು ಅತ್ಯಗತ್ಯವಾಗಿದೆ.

ಈ ಸಲದ ಚುನಾವಣೆಯಲ್ಲಿ ಚುನಾವಣಾ ಸುಧಾರಣೆಗೆ ಸಂಬಂಧಪಟ್ಟಂತೆ ಜನರ ಕಾತುರ, ಬೆಂಬಲ, ಮೆಚ್ಚುಗೆ ಹಾಗೂ ಅನುಕರಣೆಗಳ ಇನ್ನೊಂದು ಗಮನಾರ್ಹ ಉದಾಹರಣೆ ಇದೆ. ಹೋದ ವರ್ಷ ಅಂದರೆ 2013ರಲ್ಲಿ ಒಂದು ಚುನಾವಣಾ ಸುಧಾರಣೆಯನ್ನು ಜಾರಿಗೆ ತರಲಾಯಿತು. ಅದೆಂದರೆ 'ನೋಟಾ' ಕನ್ನಡದಲ್ಲಿ ಹೇಳುವುದಾದರೆ ಚುನಾವಣೆಯ ಕಣದಲ್ಲಿರುವ 'ಮೇಲಿನವರಲ್ಲಿಯಾರಿಗೂ ಮತವಿಲ್ಲ' ಎನ್ನುವ 'ಸಕಾರಾತ್ಮಕ' ಮತ ನೀಡುವ ಅವಕಾಶ. ಹೋದ ವರ್ಷ ಅಂದರೆ 2013ರ ನವೆಂಬರ್‌ನಲ್ಲಿ ನಡೆದ 5 ರಾಜ್ಯಗಳು ವಿಧಾನ ಸಭಾ ಚುನಾವಣೆಯಲ್ಲಿ ಇದನ್ನು ಮೊದಲ ಸಲ ಜಾರಿಗೊಳಿಸಲಾಯಿತು. 2014ರಲ್ಲಿ ಪ್ರಥಮ ಬಾರಿಗೆ ಚಾಲನೆ ತರಲಾಯಿತು. ಈ ಮಹಾಚುನಾವಣೆಯಲ್ಲಿ ರಾಷ್ಟ್ರದಾದ್ಯಂತ ಒಟ್ಟು 58,91,702 ಮತದಾರರು ಒಟ್ಟು ಮತದಾನದಲ್ಲಿ ಶೇ 1.1 ರಷ್ಟು ಈ ನೋಟಾ ಆಯ್ಕೆಯನ್ನು ತಮ್ಮದಾಗಿಸಿಕೊಂಡಿದ್ದಾರೆ. ಇದರ ಪ್ರಯೋಗ ಹೆಚ್ಚಾಗಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಮೀಸಲಾತಿ ಕ್ಷೇತ್ರಗಳಲ್ಲಿ ಕಂಡುಬಂದಿದೆ. ಅಂದರೆ ಇದು 28 ರಾಜ್ಯಗಳಲ್ಲಿ ಕಂಡುಬಂದಿದೆ.

ಮೋದಿ ಅಲೆಯಿದ್ದರೂ, ಶ್ರೀ ನರೇಂದ್ರ ಮೋದಿಯವರು ಇದರಿಂದ ತಪ್ಪಿಕೊಳ್ಳಲಾಗಲಿಲ್ಲ. ಸ್ಪರ್ಧಿಸಿದ ವಡೋದರಾ, ವಾರಣಾಸಿ 2 ಕ್ಷೇತ್ರಗಳಲ್ಲಿ ಅದ್ಭುತವಾದ 14 ಲಕ್ಷ ಮತಗಳಿಸಿ ಜಯಭೇರಿ ಹೊಡೆದಿರುವ ಶ್ರೀ ಮೋದಿಯವರು 2 ಕ್ಷೇತ್ರಗಳಲ್ಲಿ ಒಟ್ಟು ಸುಮಾರು 20,000 ನೋಟಾ ಮತಗಳನ್ನು ಎದುರಿಸಬೇಕಾದುದನ್ನು ಗಮನಿಸಬಹುದು. ಇದರಿಂದ ತಿಳಿಯುವುದೇನೆಂದರೆ ಮತದಾರರು ಚುನಾವಣಾ ಸುಧಾರಣೆಗಳನ್ನು ಬಯಸುತ್ತಿರುವುದಷ್ಟೇ ಅಲ್ಲದೆ, ಇದಕ್ಕೆ ಮೆಚ್ಚುಗೆ ಮತ್ತು ಅನುಕರಣೆಯನ್ನು ವ್ಯಕ್ತ ಮಾಡಲು ತಯಾರಿದ್ದಾರೆ ಎನ್ನುವುದು.

### ಭಾರತದ ಚುನಾವಣಾ ವ್ಯವಸ್ಥೆಯ ಮಾನ್ಯತೆಗಳು ಮತ್ತು ದುಷ್ಪರಿಣಾಮಗಳು

ಭಾರತದ ಚುನಾವಣೆಯ ನ್ಯೂನತೆಗಳು ಮತ್ತು ಸುಧಾರಣೆಗಳ ಬಗ್ಗೆ ಹಿಂದಿನಿಂದಲೂ ಚರ್ಚೆ ನಡೆದಿದೆ. ಚುನಾವಣಾ ಆಯೋಗ, ಕಾನೂನು ಆಯೋಗ, ದಿನೇಶ್ ಗೋಸ್ವಾಮಿ ಸಮಿತಿ, ತಾರಕುಂಡೆ ಸಮಿತಿ, ಆಡಳಿತ ಸುಧಾರಣಾ ಆಯೋಗ ಮುಂತಾದ ಸರ್ಕಾರಿ ಮತ್ತು ಖಾಸಗಿ ಆಯೋಗ

ಮತ್ತು ಸಮಿತಿಗಳು ಹಾಗೂ ರಾಜಕೀಯ ವ್ಯವಸ್ಥೆಯ ಅನೇಕ ವಿಶ್ಲೇಷಕರೂ ಈ ಚರ್ಚೆಯಲ್ಲಿ ಭಾಗವಹಿಸಿದ್ದಾರೆ. ಈ ಚರ್ಚೆ ಮತ್ತು ಇದರ ಸಾಹಿತ್ಯ ವ್ಯಾಪಕವಾಗಿದೆ. ಇದರಿಂದ ಮೂಡಿರುವ ಶಿಫಾರಸುಗಳ ಪಟ್ಟಿ ದೊಡ್ಡದಾಗಿದೆ. ಆದರೆ, ಆಳುವ ವರ್ಗ ಮತ್ತು ಸರ್ಕಾರಗಳು ಈ ವಿಷಯದಲ್ಲಿ ಬರೀ ಬೂಟಾಟಿಕೆಯ ಕಳಕಳಿ ಮತ್ತು ಕಾಲ ಮುಂದೂಡುವ ಮಾರ್ಗ ಅನುಸರಿಸಿಕೊಂಡು ಬಂದಿವೆ. ಈ ಹಿನ್ನೆಲೆಯಲ್ಲಿ ಪ್ರಮುಖವಾದ ನ್ಯೂನತೆಗಳನ್ನೂ ಮತ್ತು ಸುಧಾರಣೆಗಳನ್ನು ಆದ್ಯತೆಗೊಳಿಸಿ ಜನ ಹೋರಾಡಬೇಕಾಗಿದೆ. ಯಾವುದೇ ಆದ್ಯತಾಪಟ್ಟಿಯ ಬಗ್ಗೆ ಭಿನ್ನಾಭಿಪ್ರಾಯ ಸ್ವಾಭಾವಿಕವಾಗಿಯೇ ಇರುತ್ತವೆ. ಆದರೂ ಆದ್ಯತೆಗೊಳಿಸುವುದು ಅನಿವಾರ್ಯವಾಗಿದೆ. ಆದ್ದರಿಂದ ಈ ಲೇಖನದಲ್ಲಿ ಚುನಾವಣಾ ನ್ಯೂನತೆ ಮತ್ತು ಸುಧಾರಣೆಗಳ ಬಗ್ಗೆ ವ್ಯಾಪಕವಾಗಿರುವುದರಿಂದ ಈ ಕಿರು ಲೇಖನದಲ್ಲಿ ಇವುಗಳ ಬಗ್ಗೆ ಒಂದು ಪಕ್ಷಿನೋಟ ಮಾತ್ರ ಬಿಂಬಿಸಲಾಗಿದೆ. ಚುನಾವಣಾ ವ್ಯವಸ್ಥೆಯ ಬೃಹತ್ ನ್ಯೂನತೆಗಳು, ದುಷ್ಪರಿಣಾಮಗಳು ಮತ್ತು ಸುಧಾರಣೆಗಳ ಬಗ್ಗೆ ಗಮನ ಸೆಳೆಯಲಾಗಿದೆ.

### ಬೃಹತ್ ನ್ಯೂನತೆಗಳು

ಚುನಾವಣೆಯ ನ್ಯೂನತೆಗಳು ಅನೇಕವಿವೆ. ಇವುಗಳಲ್ಲಿ ಬೃಹತ್ತಾದವು–ಗಳೆಂದರೆ : 1. ಅಸಹ್ಯಪಡುವಷ್ಟಾಗಿರುವ ಕಪ್ಪು ಹಣದ ಪಾತ್ರ; 2. ಅಪರಾಧೀಕರಣ; 3. ವಿಪರೀತ ಸಂಖ್ಯೆಯ ರಾಜಕೀಯ ಪಕ್ಷಗಳು ಮತ್ತು ಅಭ್ಯರ್ಥಿಗಳು; 4. ಅಪ್ರಜಾಪ್ರಭುತ್ವೀಯವಾದ ಅಭ್ಯರ್ಥಿಗಳ ಆಯ್ಕೆ; 5. ಪಕ್ಷಗಳು ಗಳಿಸುವ ಮತಗಳು ಮತ್ತು ಸ್ಥಾನಗಳ ಸಂಖ್ಯೆಯಲ್ಲಿನ ಅಂತರ ಹಾಗೂ 6. ವಿಪರೀತ ಸಂಖ್ಯೆಯ ಮತ್ತು ಪದೇ ಪದೇ ಬರುವ ಚುನಾವಣೆಗಳು.

ಈ ಪಟ್ಟಿಯಲ್ಲಿರುವ ಎಲ್ಲಾ ನ್ಯೂನತೆಗಳನ್ನೂ ವಿಚಾರ ಮಾಡಲು ಒಂದು ಗ್ರಂಥದಷ್ಟೇ ಸ್ಥಳಾವಕಾಶ ಬೇಕಾಗುತ್ತದೆ. ಚುನಾವಣೆಗಳಲ್ಲಿ ವಿಪರೀತವಾಗಿರುವ ಹಣದ ಪಾತ್ರ ಮತ್ತು ಅಪರಾಧೀಕರಣ ಸಮಸ್ಯೆಗಳು ಮತ್ತು ಇವುಗಳನ್ನು ನಿವಾರಿಸಬಲ್ಲ ಸುಧಾರಣೆಗಳು ಮಾತ್ರ ಈ ಲೇಖನದ ವಿಷಯವಾಗಿದೆ.



### 1. ಅಸಹ್ಯಪಡುವಷ್ಟಾಗಿರುವ ಹಣದ ಪಾತ್ರ

ಇತ್ತೀಚೆಗೆ, 2012ರ ನವೆಂಬರ್‌ನಲ್ಲಿ ನಡೆದ ಅಮೆರಿಕದ ಅಧ್ಯಕ್ಷೀಯ ಹಾಗೂ ಅಲ್ಲಿನ ಸೆನೆಟ್ (ಮೇಲ್ಮನೆ) ಮತ್ತು ಹೌಸ್ ಆಫ್ ರೆಪ್ರೆಸೆಂಟಟಿವ್ಸ್ (ಕೆಳಮನೆ) ಚುನಾವಣೆಗಳಲ್ಲಿ ಎಲ್ಲಾ ಅಭ್ಯರ್ಥಿಗಳೂ ಪ್ರಚಾರಕ್ಕಾಗಿ ಖರ್ಚುಮಾಡಿದ ಒಟ್ಟು ಹಣವನ್ನು 6 ಶತಕೋಟಿ ಡಾಲರ್‌ಗಳು, ಅಂದರೆ ಸುಮಾರು 32,000 ಕೋಟಿ ರೂಪಾಯಿಗಳೆಂದು ಅಂದಾಜು ಮಾಡಲಾಗಿದೆ. ಈ ಹಣದಲ್ಲಿ ಭಾರತದಲ್ಲಿ 12 ಕೋಟಿ ಮಕ್ಕಳಿಗಾಗಿ ನಡೆಯುತ್ತಿರುವ ಮಧ್ಯಾಹ್ನದ ಊಟವನ್ನು 3 ವರ್ಷಗಳ ಕಾಲ ನಡೆಸಬಹುದೆನ್ನಲಾಗಿದೆ.

ಭಾರತದಲ್ಲಿಯೂ ಹೀಗೆಯೇ ಚುನಾವಣೆಗಳಲ್ಲಿ ಹಣದ ಹೊಳೆ ಹರಿಯುವುದರ ಬಗ್ಗೆ ಯಾರಿಗೂ ಅನುಮಾನವಿಲ್ಲ. ಚುನಾವಣಾ ಕ್ಷೇತ್ರಗಳ ಬೃಹತ್ ಗಾತ್ರ; ಬೃಹತ್ ಸಂಖ್ಯೆಯಲ್ಲಿರುವ ಮತದಾರರನ್ನು ಪ್ರಚಾರದ ಮೂಲಕ ತಲುಪುವ ಅವಶ್ಯಕತೆ; ಇದಕ್ಕಾಗಿ ಹಿರಿಯ ತಂತ್ರಜ್ಞಾನ ಮತ್ತು ದುಬಾರೀ ಖರ್ಚಿನ ಪ್ರಚಾರದ ಅವಲಂಬನೆ; ಚುನಾವಣಾ ರಾಜಕಾರಣದಲ್ಲಿ ಗೆಲವಿನಷ್ಟು ಲಾಭದಾಯಕವಾದ ವ್ಯವಹಾರ ಇನ್ನೊಂದಿಲ್ಲವೆನ್ನುವ ಪರಿಸ್ಥಿತಿ; ಆ ಕಾರಣದಿಂದ ಪಕ್ಷ ಮತ್ತು ಅಭ್ಯರ್ಥಿಗಳಲ್ಲಿರುವ ಎಷ್ಟೇ ಖರ್ಚಾಗಲೀ ಗೆಲ್ಲಲೇ ಬೇಕೆನ್ನುವ ನಿಲುವು; ಈ ಭ್ರಷ್ಟ ರಾಜಕಾರಣಿಗಳಿಂದ ಚುನಾವಣಾ ಸಮಯದಲ್ಲಿ ಆದಷ್ಟು ಗಿಟ್ಟಿಸಿಕೊಳ್ಳಬೇಕೆಂಬ ಮತದಾರರ ಮತ್ತು ಪ್ರಚಾರ ಕಾರ್ಯಕರ್ತರ ಭಾವನೆಗಳು ಚುನಾವಣೆಗಳಲ್ಲಿ ಹೆಚ್ಚು ಮತ್ತು ಹೆಚ್ಚು ಹಣದ ಖರ್ಚಿಗೆ ಕಾರಣವಾಗಿದೆ. ಅಭ್ಯರ್ಥಿಗಳು 'ಟಿಕೆಟ್' ಕೊಂಡುಕೊಳ್ಳುವುದು, ಅನಂತರ ಮತ ಕೊಂಡುಕೊಳ್ಳುವುದು ಮಾಮೂಲು ವ್ಯವಹಾರವಾಗಿದೆ. ಗೆದ್ದ ಸ್ವತಂತ್ರ ಅಭ್ಯರ್ಥಿಗಳನ್ನೂ ಪಕ್ಷಾಂತರ ಮಾಡುವ ಶಾಸಕರುಗಳನ್ನೂ ಕೊಂಡು ಸರ್ಕಾರ ರಚಿಸುವ ರಾಜಕೀಯ ಪಕ್ಷಗಳ ವ್ಯವಹಾರಗಳೂ ಸಾಮಾನ್ಯವಾಗಿದೆ.

ಯಾವ ಅಭ್ಯರ್ಥಿಯೂ ಚುನಾವಣಾ ಆಯೋಗ ನಿಗದಿಪಡಿಸಿರುವ ಮಿತಿಯಲ್ಲೇ ಖರ್ಚು ಮಾಡಿ ಗೆಲ್ಲುವುದಿಲ್ಲ. ಹಾಗೆ ಮಾಡಿದೆವೆಂಬ ಸುಳ್ಳು ಲೆಕ್ಕವನ್ನು ಮಾತ್ರ ಸಲ್ಲಿಸುತ್ತಾರೆ. ಹಣ, ಹೆಂಡ, ಸೀರೆ, ಧೋತಿ ಮಾತ್ರ ಅಲ್ಲ ಮತದಾರರನ್ನು ಒಲಿಸಿಕೊಳ್ಳಲು ಅಭ್ಯರ್ಥಿಗಳು ಹೊಸ ದಾರಿಗಳನ್ನು ಹುಡುಕುತ್ತಲೇ ಇರುತ್ತಾರೆ. ಚುನಾವಣಾ ಸಮಯದಲ್ಲಿ ಇದು ಮಾಮೂಲು. ಆದರೆ ಚುನಾವಣಾ ಸಮಯದಲ್ಲಿ ಜಾರಿಯಲ್ಲಿರುವ ಚುನಾವಣಾ ಸಂಹಿತೆ ಇದಕ್ಕೆ ಅಡ್ಡಿ ಒಡ್ಡುತ್ತದೆ. ಇದರಿಂದ ತಪ್ಪಿಸಿಕೊಳ್ಳಲು ಈಚೆಗೆ ಟಿಕೆಟ್ ಆಕಾಂಕ್ಷಿಗಳು ಚುನಾವಣೆಗಳಿಗಿಂತ

ಮೊದಲೇ ಮತದಾರರಿಗೆ ಆಮಿಷ ನೀಡಿ ಒಲಿಸಿಕೊಳ್ಳುವ ಪ್ರಯತ್ನದಲ್ಲಿ ತೊಡಗುವುದು ಕಂಡುಬರುತ್ತಿದೆ.

### 2. ಕಪ್ಪು ಹಣದ ಪಾತ್ರ

ಈ ಖರ್ಚಿಗೆ ಹಣ ಎಲ್ಲಿಂದ ಬರುತ್ತದೆ ಎನ್ನುವುದೊಂದು ಯಕ್ಷಪ್ರಶ್ನೆಯಂತೂ ಅಲ್ಲ. ಸರ್ಕಾರ ಅಭ್ಯರ್ಥಿಗಳ ಚುನಾವಣಾ ಖರ್ಚಿಗಾಗಿ ಏನೂ ಹಣ ನೀಡುತ್ತಿಲ್ಲ. ರೇಡಿಯೊ ಮತ್ತು ದೂರದರ್ಶನಗಳಲ್ಲಿ ಸ್ವಲ್ಪ ಪ್ರಚಾರ ಕಾಲಾವಕಾಶಗಳನ್ನು ಮಾತ್ರ ಮಾಡಿಕೊಡುತ್ತದೆ.

ಉಳಿದ ಚುನಾವಣಾ ಖರ್ಚೆಲ್ಲಾ ಖಾಸಗಿ ಹಣದಿಂದ ನಡೆಯುವ ಖಾಸಗಿ ವ್ಯವಹಾರವಾಗಿದೆ. ಖಾಸಗಿ ಕಂಪನಿಗಳು ಮತ್ತು ದೊಡ್ಡ ಬಿಸಿನೆಸ್ ಕುಳಗಳು ರಾಜಕೀಯ ಪಕ್ಷಗಳಿಗೆ ದೇಣಿಗೆ ನೀಡುತ್ತಿವೆ. ಈ ದೇಣಿಗೆಗಳನ್ನು ನಿಯಂತ್ರಿಸುವ ಕಾನೂನು ಒಂದು ಅರೆಪ್ರಯತ್ನವಾಗಿದ್ದು ಅಸ್ಪಷ್ಟವಾಗಿದೆ.

ದೇಣಿಗೆ ಪಡೆದಾಗ ರೂ. 20,000ಕ್ಕಿಂತ ಹೆಚ್ಚು ಕೊಟ್ಟಾಗ ಮಾತ್ರ ಅದನ್ನು ಬಹಿರಂಗ ಪಡಿಸಬೇಕಾಗುತ್ತದೆ. ಈ ಖಾಸಗಿ ದೇಣಿಗೆಗಳ ಹಿಂದಿನ ಉದ್ದೇಶವೂ ಅನುಮಾನ ಹುಟ್ಟಿಸುವಂತಿದೆ. ಆಳುವ ರಾಜಕೀಯ ಪಕ್ಷಗಳನ್ನೂ, ಸರ್ಕಾರಗಳನ್ನು ಹಾಗೂ ಅದರ ಆಡಳಿತದ ಕಾರ್ಯಾಚರಣೆಗಳನ್ನು ತಮ್ಮ ಹಿತಕ್ಕೆ ಬದ್ಧಮಾಡಿಕೊಳ್ಳುವ ಉದ್ದೇಶಗಳು ಇದರ ಹಿಂದಿರುತ್ತದೆ. ಈ ಕಾರಣಕ್ಕಾಗಿ ಅಮೆರಿಕದ ಪ್ರಜಾಪ್ರಭುತ್ವವನ್ನು ಜೋಸೆಫ್ ಸ್ಟಿಗ್‌ಲಿಟ್ಸ್ ಎಂಬ ಖ್ಯಾತ ಅರ್ಥಶಾಸ್ತ್ರಜ್ಞರು 'ಶೇಕಡ 1 ರಷ್ಟು ಜನರಿಂದ, ಶೇಕಡ 1 ರಷ್ಟು ಜನರಿಗಾಗಿರುವ, ಶೇಕಡ 1 ರಷ್ಟು ಜನರ' ಆಳ್ವಿಕೆ ಎನ್ನುತ್ತಾರೆ. ಅರ್ಥಶಾಸ್ತ್ರದಲ್ಲಿ ನೊಬೆಲ್ ಪಾರಿತೋಷಕ ಗಳಿಸಿರುವ ಪಾಲ್ ಕೃಗ್‌ಮ್ಯಾನ್ ಎಂಬ ಇನ್ನೊಬ್ಬರು ಇದನ್ನು ಪ್ರಜಾಪ್ರಭುತ್ವವಲ್ಲ 'ಧನಪ್ರಭುತ್ವ' ಎನ್ನುತ್ತಾರೆ.

ಇದೂ ಅಲ್ಲದೆ, ಬಹಿರಂಗ ದೇಣಿಗೆಗಳಿಗಿಂತ ಅಗೋಚರವಾದ ರೂ. 20,000ಗಳಿಗಿಂತ ಕಡಿಮೆ ಗಾತ್ರದಲ್ಲಿ, ಅದರಲ್ಲೂ 'ಕೂಪನ್‌ಗಳ ಮಾರಾಟ' ಎಂಬ ಶೀರ್ಷಿಕೆಯಡಿಯಲ್ಲಿ ಬರುವ ಗುಪ್ತ ಹಣವೇ ಪಕ್ಷಗಳ ಭಂಡಾರಗಳನ್ನು ಹೆಚ್ಚು ತುಂಬುತ್ತದೆ. ಅಂದರೆ, ಈ ಚುನಾವಣೆಗಳಿಗಾಗಿ ವೆಚ್ಚವಾಗುವ ಬಹುಪಾಲು ಹಣ ಕಪ್ಪು ಹಣವೇ ಆಗಿದೆ. ಇದು ಬರುವುದು ಕಾನೂನು ಮುರಿದು ಸುಲಭ ಮತ್ತು ಹೇರಳ ಹಣ ಮಾಡುವುದರಿಂದ, ಕಾಲಾಬಜಾರ್ ವ್ಯಾಪಾರಿಗಳಿಂದ, ಭ್ರಷ್ಟರಾಜಕಾರಣಿ ಮತ್ತು ಅಧಿಕಾರಿಗಳಿಂದ ಹಾಗೂ ಕ್ರಿಮಿನಲ್ ಅಪರಾಧಗಳಲ್ಲಿ ತೊಡಗಿರುವವರಿಂದ. ಈ ಕಾರಣದಿಂದ ರಾಜಕೀಯ ಪಕ್ಷಗಳು ಹೆಚ್ಚು ಹೆಚ್ಚು ಕ್ರಿಮಿನಲ್ ಅಪರಿಚಿತರಿಗೂ 'ಟಿಕೆಟ್'ಗಳನ್ನು ಹಂಚುವುದು ಹಾಗೂ ಶಾಸನ ಸಭೆಗಳ ಸದಸ್ಯರಲ್ಲಿ ಸುಮಾರು ಒಂದನೆಯ ಮೂರರಷ್ಟು ಜನ ಕ್ರಿಮಿನಲ್ ಆಪಾದನೆ ಹೊಂದಿದವರಾಗಿರುವುದೂ ಕಂಡುಬರುತ್ತದೆ. ಇಂತಹ ಕಪ್ಪು ಹಣದ ದಾಂಧಲೆಯಿಂದ ನಮ್ಮ ರಾಜಕಾರಣಿಗಳು ಚುನಾವಣೆಯಿಂದ ಚುನಾವಣೆಗೆ ಹಣ ಖರ್ಚು ಮಾಡಿ ಕಳೆದುಕೊಳ್ಳುವುದಕ್ಕಿಂತ ಕೋಟಿ ಕೋಟಿ ಹೆಚ್ಚು ಆದಾಯ ಮತ್ತು ಆಸ್ತಿಗಳನ್ನು ಗಳಿಸುತ್ತಿರುವುದೂ ಹಾಗೆ ತಮ್ಮ ಅಭ್ಯರ್ಥಿ ಪ್ರಮಾಣಪತ್ರದಲ್ಲಿ ಘೋಷಿಸುತ್ತಿರುವುದೂ ಕಂಡು ಬರುತ್ತಿದೆ.


#### ದುಷ್ಪರಿಣಾಮಗಳು

1. ಅರ್ಹ ಅಭ್ಯರ್ಥಿಗಳಿಗೆ 'ಟಿಕೆಟ್' ದೊರೆಯುವ ಬದಲು 'ಟಿಕೆಟ್' ಕೊಂಡು ಕೊಳ್ಳಲು, ಅಷ್ಟೇ ಅಲ್ಲದೆ ಪಕ್ಷದ ಚುನಾವಣಾ ನಿಧಿಗೆ ದೇಣಿಗೆ ಕೊಡಲು ಅರ್ಹರಾದ, ಸಾಮಾನ್ಯವಾಗಿ ಕಪ್ಪು ಹಣವಂತರಾದವರಿಗೆ ಅಭ್ಯರ್ಥಿಗಳಾಗುವ ಅವಕಾಶ ದೊರೆಯುತ್ತದೆ.

2. 'ಮತದಾನ' ವ್ಯಕ್ತಿಯ ಆಲೋಚಿಸಿದ ಅಭಿಮತವಾಗಿರದೆ ಕೊಂಡುಕೊಳ್ಳುವ ವ್ಯವಹಾರವಾಗುತ್ತದೆ.

3. ಚುನಾವಣಾ ಸ್ಪರ್ಧೆ ತನ್ನ ಅಭ್ಯರ್ಥಿಗಳ ನಡುವಿನ ಸಮಾನಾಂತರ ಸ್ಪರ್ಧಾಕ್ಷೇತ್ರದ (ಲೆವಲ್ ಪ್ಲೇಯಿಂಗ್ ಫೀಲ್ಡ್) ಸ್ಥಿತಿಯನ್ನು ಕಳೆದುಕೊಳ್ಳುತ್ತದೆ.

4. ಶುದ್ಧ ಮತ್ತು ಸಾರ್ವಜನಿಕ ವ್ಯವಹಾರವಾಗಿರಬೇಕಾದಂತಹ ಚುನಾವಣೆಯು ಕಪ್ಪು ಹಣ ನಿರ್ದೇಶಿತವಾಗಿದ್ದು ಖಾಸಗೀಕರಣ ಮತ್ತು ಅಪರಾಧೀಕರಣಗೊಂಡ ವ್ಯವಹಾರವಾಗುತ್ತದೆ.



5. ಚುನಾವಣಾ ಸ್ಪರ್ಧೆಯು ಹೆಚ್ಚು ಹೆಚ್ಚು ವ್ಯಕ್ತಿಗಳ ನಡುವಿನ ಸ್ಪರ್ಧೆಯಾಗುತ್ತಿದ್ದು ಸಾರ್ವಜನಿಕ ವಿಚಾರಾಸಕ್ತಿಗಳು ಗೌಣವಾಗುತ್ತವೆ.

6. ಚುನಾವಣಾ ಸ್ಪರ್ಧೆ ಮತ್ತು ಫಲಿತಾಂಶಗಳು ತಮ್ಮ ನ್ಯಾಯಯುಕ್ತತೆಯನ್ನು (ಲೆಜಿಟಿಮೆಸಿ) ಕಳೆದುಕೊಳ್ಳುತ್ತದೆ.

### 3. ಅಪರಾಧೀಕರಣಗೊಂಡ ಚುನಾವಣೆ ಮತ್ತು ರಾಜಕೀಯ

ರಾಜಕೀಯ ಮತ್ತು ಚುನಾವಣೆಗಳಲ್ಲಿ ಕಪ್ಪುಹಣದ ಪಾತ್ರ ಹೆಚ್ಚಾದಂತೆ ಇವುಗಳ ಅಪರಾಧೀಕರಣವೂ ಹೆಚ್ಚಾಗುತ್ತಿದೆ. ಕಾನೂನಿನ ಕಣ್ಣು ಮತ್ತು ಹಿಡಿತದಿಂದ ತಪ್ಪಿಸಿಕೊಳ್ಳಲು ಮೊದ ಮೊದಲು ರಾಜಕಾರಣಿಗಳಿಗೆ ಹಣ ಒದಗಿಸಿ ಸುಮ್ಮನಿರುತ್ತಿದ್ದ ಅಪರಾಧ ಕೃತ್ಯಗಳಲ್ಲಿ ತೊಡಗಿರುವ ಜನರು ಈಚೆಗೆ ಚುನಾವಣೆ ಮತ್ತು ರಾಜಕಾರಣದಲ್ಲಿ ನೇರವಾಗಿ ಭಾಗವಹಿಸುತ್ತಿದ್ದಾರೆ. ಚುನಾವಣೆಗಳಲ್ಲಿ ಗೆಲುವೇ ಸರ್ವಸ್ವವಾಗಿರುವುದರಿಂದ ಹಣಬಲ ಮತ್ತು ತೋಳ್ಬಲಗಳಿಂದ ತಮ್ಮ ಗೆಲುವನ್ನು ಭದ್ರಮಾಡಿಕೊಳ್ಳುವುದಲ್ಲದೆ, ಪಕ್ಷದ ಇತರ ಅಭ್ಯರ್ಥಿಗಳನ್ನೂ ಗೆಲ್ಲಿಸಲು ಪಕ್ಷಗಳಿಗೆ ಬೆಂಬಲ ನೀಡಬಲ್ಲ ಈ ಜನರನ್ನು ರಾಜಕೀಯ ಪಕ್ಷಗಳು ಹೆಚ್ಚು ಹೆಚ್ಚು ಅವಲಂಬಿಸುತ್ತಿವೆ ಹಾಗೂ ಅವರ ನೇರಭಾಗವಹಿಸುವಿಕೆಗೆ ಅವಕಾಶ ನೀಡುತ್ತಿವೆ.

ಚುನಾವಣೆಗಳಲ್ಲಿ ಅಪರಾಧೀ ಕಟ್ಟಳೆಗಳಿಗೆ ಒಳಗಾದ ವ್ಯಕ್ತಿಗಳಿಗೆ ಹೆಚ್ಚು ಹೆಚ್ಚು 'ಟಿಕೆಟ್' ದೊರಕುತ್ತಿರುವುದೇ ಅಲ್ಲದೆ ಅಂತಹವರು ಸಂಸತ್ತು ಮತ್ತು ವಿಧಾನ ಸಭೆಗೆ

ಸದಸ್ಯರಾಗಿಯೂ ಆಯ್ಕೆಯಾಗುತ್ತಿದ್ದಾರೆ. ಭಾರತದ ಲೋಕಸಭೆಯಲ್ಲಿ 2004ರ ಚುನಾವಣೆಯ ನಂತರ 128ರಷ್ಟಿದ್ದ ಇಂತಹವರ ಸಂಖ್ಯೆ 2009ರ ಚುನಾವಣೆಯ ಅನಂತರ 150ಕ್ಕೆ ಏರಿಕೆ ಕಂಡಿವೆ. ಇವರಲ್ಲಿ ಹೀನ ಅಪರಾಧದ ಕಟ್ಲೆಗಳನ್ನು ಹೊತ್ತ ಸಂಸದ್ ಸದಸ್ಯರ ಸಂಖ್ಯೆ 2004 ರ ಅನಂತರ 55 ಇದ್ದು 2009 ರ ಅನಂತರ 72ಕ್ಕೆ ಏರಿಕೆ ಕಂಡಿತು. ರಾಜ್ಯವಿಧಾನ ಸಭೆಗಳಲ್ಲಿ ಆಪಾದನೆಗೊಳಗಾಗಿರುವ ಸದಸ್ಯರ ಸಂಖ್ಯೆ ಒಟ್ಟು ಸಂಖ್ಯೆಯ ಸುಮಾರು ಒಂದನೆಯ ಮೂರು ಭಾಗದಷ್ಟಾಗಿದೆ.

### ದುಷ್ಪರಿಣಾಮಗಳು

(ಅ) ಈ ಅಪರಾಧೀಕರಣದಿಂದ ಚುನಾವಣೆ ಮತ್ತು ಇಡೀ ರಾಜಕೀಯದ ನ್ಯಾಯಯುಕ್ತತೆ ಮತ್ತು ನ್ಯಾಯಸಮ್ಮತಗಳು (ಫೇರ್‌ನೆಸ್) ಕ್ಷೀಣಿಸುತ್ತಿವೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಇತ್ತೀಚೆಗೆ ನಡೆದ ಒಂದು ಸಂಗತಿ ಎಲ್ಲೆ ಮೀರುವ ಸಂಗತಿಯಾಗಿದೆ. ಕೆಲವೇ ವಾರಗಳ ಹಿಂದೆ, ಅಂದರೆ ಫೆಬ್ರವರಿ 2013ರ ಕೊನೆಯ ಭಾಗದಲ್ಲಿ ನಡೆದ ನಾಗಾಲ್ಯಾಂಡ್ ವಿಧಾನ ಸಭಾ ಚುನಾವಣೆಗೆ ಒಂದು ವಾರದ ಮುಂದೆ ಅಲ್ಲಿನ ಗೃಹಮಂತ್ರಿಗಳಾದ ಇಮ್ಕಾಂಗ್ ಎಲ್ ಇಮ್ಚೆನ್ ಅವರೇ ಬಂಧನಕ್ಕೊಳಗಾದರು. ಚುನಾವಣಾ ನೀತಿ ಸಂಹಿತೆಯನ್ನು ಉಲ್ಲಂಘಿಸಿ ಇವರು ಪ್ರಯಾಣಿಸುತ್ತಿದ್ದ ಕಾರಿನಲ್ಲಿ ಕಂಡು ಬಂದ ಐದು 7.65 ಮಿ.ಮಿ. ಪಿಸ್ತುಲ್‌ಗಳೂ, ಎರಡು 303 ರೈಫಲ್‌ಗಳೂ, 180 ತೋಟಾಗಳು, 11 ಬ್ಯಾಟಲ್ ಮದ್ಯ ಹಾಗೂ 1.1. ಕೋಟಿ ರೂಪಾಯಿ ಹಣದೊಡನೆ ಅಸ್ಸಾಂ ರೈಫಲ್ಸ್ ದಳದವರು ಇವರನ್ನು ಬಂಧಿಸಿದರು. ಅಪರಾಧಕೃತ್ಯಗಳು ಚುನಾವಣೆಯ ಎಷ್ಟೊಂದು ಭಾಗವಾಗಿದೆ ಎನ್ನುವುದಕ್ಕೆ ಇದೊಂದು ಇತ್ತೀಚಿನ ಆಘಾತಕಾರೀ ಉದಾಹರಣೆಯಾಗಿದೆ.

ಆ) ಚುನಾವಣೆಗಳಲ್ಲಿ ಅಪರಾಧ ಹೊತ್ತವರು ಭಾಗವಹಿಸಲು ಅವಕಾಶ ಕೊಡುತ್ತಿರುವುದರಿಂದ ಅಪರಾಧ ಮತ್ತು ಅಪರಾಧಿಗಳಿಗೆ ಸಮಾಜದಲ್ಲಿ ಸಾರ್ವಜನಿಕ ಮೆಚ್ಚುಗೆ ಮತ್ತು ಗೌರವಗಳನ್ನು ದೊರಕಿಸಿಕೊಟ್ಟಂತಾಗುತ್ತಿದೆ.

ಈ ಮೇಲಿನ ಎರಡು ಬೃಹತ್ ಚುನಾವಣಾ ನ್ಯೂನತೆಗಳು ಮತ್ತು ಅವುಗಳ ದುಷ್ಪರಿಣಾಮಗಳೂ ಚುನಾವಣೆ ಸುಧಾರಣೆಯ ಅಗತ್ಯತೆಯನ್ನು ಕೂಡಿ ಹೇಳುತ್ತವೆ. ಈ ನ್ಯೂನತೆಗಳನ್ನು ಪರಿಹರಿಸಲು ಈ ಕೆಳಗಿನ ಚುನಾವಣಾ ಸುಧಾರಣೆಗಳನ್ನು ಸೂಚಿಸಲಾಗಿದೆ.



### ಅತ್ಯಗತ್ಯವಾದ ಚುನಾವಣಾ ಸುಧಾರಣೆಗಳು

ಅಗತ್ಯವಾಗಿರುವ ಚುನಾವಣಾ ಸುಧಾರಣೆಗಳು ಅನೇಕವಿವೆ. ಚುನಾವಣಾ ಆಯೋಗವೇ 2004ರಲ್ಲಿ 22 ಶಿಫಾರಸುಗಳ ಪಟ್ಟಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದೆ. ಅಲ್ಲಿಂದೀಚೆಗೆ ಚುನಾವಣಾ ಆಯೋಗ ಹಾಗೂ ಇತರ ಮೂಲಗಳಿಂದಲೂ ಈ ಪಟ್ಟಿ ಬೆಳೆಯುತ್ತಲೇ ಇದೆ.

### ಅತಿಯಾದ ಹಣದ ಪಾತ್ರ ನಿಯಂತ್ರಿಸಲು ಸುಧಾರಣೆ

ಈಗಿನ ಚುನಾವಣಾ ಪರಿಸ್ಥಿತಿಯಲ್ಲಿ ಅನಿಯಂತ್ರಿತ ಹಣದ ಪಾತ್ರ ಚುನಾವಣೆಯ ನೈತಿಕ ಗುಣವನ್ನು ಕ್ಷೀಣಿಸಿದೆ. ಈ ಹಿನ್ನೆಲೆಯಲ್ಲಿ ಕೆಳಗಿನ ಸುಧಾರಣೆ ಅತ್ಯಗತ್ಯವಾಗಿದೆ. ಚುನಾವಣಾ ಪ್ರಚಾರ ಪ್ರಕ್ರಿಯೆಯ ರಾಷ್ಟ್ರೀಕರಣ ಮಾಡಿ, ಅದರ ವೆಚ್ಚವನ್ನು ಇಳಿಸಿ, ಆ ವೆಚ್ಚವನ್ನು ಸರ್ಕಾರವೇ ಭರಿಸುವಂತೆ ಮಾಡುವುದು.

**ಚುನಾವಣೆಗಳಲ್ಲಿ ದುಂದು ವೆಚ್ಚ ಮತ್ತು ದುರ್ವ್ಯಯಗಳನ್ನು ತಪ್ಪಿಸಬೇಕು. ಇದಕ್ಕಾಗಿ ಈ ಕೆಳಗೆ ಕಾಣಿಸಿರುವ ಕೆಲವು ಸುಧಾರಣಾ ಕ್ರಮಗಳು ಅತ್ಯಗತ್ಯವಾಗುತ್ತವೆ :**

1. ಚುನಾವಣಾ ಪ್ರಚಾರಕ್ಕಾಗಿ, ಒಂದು ಮನೆಗೆ ಒಂದರಂತೆ, ಪ್ರತಿಕ್ಷೇತ್ರದಲ್ಲೂ ಕಣದಲ್ಲಿರುವ ಎಲ್ಲಾ ಅಭ್ಯರ್ಥಿಗಳ ಮತ್ತು ಪಕ್ಷಗಳ ಬಗ್ಗೆ ಅಧಿಕೃತವಾಗಿ ನಿಗದಿತ ಪುಟಗಳ ಮಿತಿಯಲ್ಲಿ ಅವರೇ ಒದಗಿಸಿದ ಬರಹಗಳನ್ನು ಒಂದು ಸಮಗ್ರ ಪುಸ್ತಕದ ರೂಪದಲ್ಲಿ ಮುದ್ರಿಸಿ ಹಂಚುವುದು.
2. ಎಲ್ಲಾ ಅಭ್ಯರ್ಥಿಗಳೂ ಭಾಗವಹಿಸಿ ಪ್ರಚಾರ ಮಾಡಲು ಅವಕಾಶವಿರುವ ಸಾಮಾನ್ಯ ಸಾರ್ವಜನಿಕ ಸಭೆಗಳನ್ನು ವಿವಿಧ ಕಡೆ ಸಾರ್ವಜನಿಕ ಹೊಣೆಗಾರಿಕೆಯಲ್ಲಿ ವ್ಯವಸ್ಥೆ ಮಾಡುವುದು;
3. ವೃತ್ತ ಪತ್ರಿಕೆಗಳೂ ಹಾಗೂ ಇನ್ನಿತರ ಮುದ್ರಿತ ಅಲ್ಲದೇ ರೇಡಿಯೊ, ದೂರದರ್ಶನ ಮುಂತಾದ ಮಾಧ್ಯಮಗಳಲ್ಲಿ ಪ್ರತೀ ಅಭ್ಯರ್ಥಿಗೂ ಪ್ರಚಾರಕ್ಕಾಗಿ ಸಮಾನ ಸ್ಥಳ ಮತ್ತು ಕಾಲಾವಕಾಶಗಳನ್ನು ಮಾಡಿಕೊಡುವುದು.
4. ಇಂತಹ ರಾಷ್ಟ್ರೀಕೃತ ಚುನಾವಣಾ ಪ್ರಚಾರವನ್ನು ಚುನಾವಣಾ ಆಯೋಗ ನೇಮಿಸಿ ಹಾಗೂ ಉಸ್ತುವಾರಿ ಮಾಡುವ ನಿಷ್ಪಕ್ಷವಾದ ಸಾರ್ವಜನಿಕ ಪ್ರಚಾರ ಸಮಿತಿಗಳ ಮೂಲಕ ನಡೆಸುವುದು; ಇಂತಹ ಸಮಿತಿಗಳನ್ನು ಚುನಾವಣಾ ಕ್ಷೇತ್ರ ಜಿಲ್ಲೆ, ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ರಚಿಸುವುದು.
5. ಹೀಗೆ ವ್ಯವಸ್ಥೆಗೆ ಇತಿಮಿತಿಗೊಳಿಸಿದ ಈ ಚುನಾವಣಾ ಪ್ರಚಾರದ

ಎಲ್ಲಾ ವೆಚ್ಚವನ್ನೂ ಸರ್ಕಾರವೇ ಭರಿಸುವುದು.

6. ಚುನಾವಣಾ ಪ್ರಚಾರವನ್ನು ಬಹುಪಾಲು ಈ ಮೂಲಕ ರಾಷ್ಟ್ರೀಕರಣ ಅಂದರೆ ಸಾರ್ವಜನೀಕರಣಗೊಳಿಸುವುದು ಮತ್ತು ಖಾಸಗಿ ಪ್ರಚಾರವನ್ನು ಸೀಮಿತ ಮಾಡುವುದು, ಬಿಗಿಯಾಗಿ ನಿಯಂತ್ರಿಸುವುದು, ಜವಾಬ್ದಾರಿಯನ್ನಾಗಿಸುವುದು ಹಾಗೂ ಬಹುಪಾಲು ನಿಷೇಧಿಸುವುದು.

**ಅಪರಾಧೀಕರಣ ನಿಯಂತ್ರಿಸಲು ಸುಧಾರಣೆ**

**ಚುನಾವಣೆಗಳ ಅಪರಾಧೀಕರಣ ನಿಯಂತ್ರಿಸಲು ಮುಂದಿನ ಸುಧಾರಣೆಗಳು ಅತ್ಯಗತ್ಯವಾಗಿವೆ :**

1. ಚುನಾವಣೆ ಘೋಷಣೆಗೆ ಒಂದು ವರ್ಷ ಅಥವಾ ಕನಿಷ್ಠ ಆರು ತಿಂಗಳ ಮುಂಚೆ ಕ್ರಿಮಿನಲ್ ಆಪಾದನೆಗೆ ಗುರಿಯಾದವರನ್ನು ಚುನಾವಣೆಯಿಂದ ಅನರ್ಹಗೊಳಿಸುವುದು;


2. ಒಂದು ನ್ಯಾಯಾಲಯದಿಂದ ಸಿದ್ಧಪಡಿಸಲ್ಪಟ್ಟ ಆಪಾದನಾ ಪಟ್ಟಿಗೆ ಒಳಪಟ್ಟವರನ್ನು ಚುನಾವಣೆಯಿಂದ ಅನರ್ಹಗೊಳಿಸುವುದು;

3. ಚುನಾವಣೆಗಳಲ್ಲಿ ಗೆದ್ದ ಕ್ರಿಮಿನಲ್ ಆಪಾದನೆ ಹೊತ್ತ ಶಾಸಕರ ಪ್ರಕರಣಗಳನ್ನು ವಿಶೇಷ ಚುನಾವಣಾ ಕೋರ್ಟುಗಳ ಮೂಲಕ ಆರು ತಿಂಗಳೊಳಗೆ ಇತ್ಯರ್ಥಗೊಳಿಸುವುದು ಮತ್ತು

4. ಆರೋಪಗಳು ರುಜುವಾತಾಗಿ ಶಿಕ್ಷೆಗೊಳಗಾದ ಶಾಸಕರನ್ನು ಅನರ್ಹಗೊಳಿಸಿ ಅವರ ಸ್ಥಾನಕ್ಕೆ ಚುನಾವಣೆಯಲ್ಲಿ ಅವರ ಪ್ರತಿಸ್ಪರ್ಧಿಗಳಲ್ಲಿ ಅತ್ಯಂತ ಹೆಚ್ಚು ಮತಗಳಿಸಿ ಎರಡನೆಯ ಸ್ಥಾನದಲ್ಲಿದ್ದವನನ್ನು ಅರ್ಹನೆಂದು ಘೋಷಿಸುವುದು.

**ಉಪಸಂಹಾರ**

ಅತಿಯಾದ ಹಣದ ಪಾತ್ರ ಮತ್ತು ಅಪರಾಧೀಕರಣಗಳನ್ನು ನಿಯಂತ್ರಿಸಲು ಸುಧಾರಣೆಗಳು ಅತ್ಯವಶ್ಯಕವಾಗಿವೆ. ಇವುಗಳಿಗೆ ಪೋಷಕವಾಗಿರುವ ಮತ್ತು ಅಗತ್ಯವಿರುವ ಇನ್ನೂ ಕೆಲವು ಚುನಾವಣಾ ಸುಧಾರಣೆಗಳಿವೆ. ಇಂತಹವುಗಳನ್ನು ಇಲ್ಲಿ ಹೆಚ್ಚು ವಿವರಿಸಲು ಹೋಗಿಲ್ಲ.



1. ಅತಿಯಾದ ಸಂಖ್ಯೆಯಲ್ಲಿ ಭಾಗವಹಿಸುವ ಚುನಾವಣಾ ಅಭ್ಯರ್ಥಿಗಳನ್ನೂ ಹಾಗೂ ಪಕ್ಷಗಳನ್ನೂ ನಿಯಂತ್ರಿಸುವ ಸುಧಾರಣೆಗಳು;

2. ಅಭ್ಯರ್ಥಿಗಳ ಆಯ್ಕೆಯನ್ನು ಉತ್ತಮ ಮತ್ತು ಪ್ರಜಾಪ್ರಭುತ್ವೀಕರಣಗೊಳಿಸುವ ಸುಧಾರಣೆಗಳು;

3. ಪದೇ ಪದೇ ಬರುವ ಮತ್ತ ಅನಗತ್ಯವಾದ ಅತೀ ಸಂಖ್ಯೆಯ ಚುನಾವಣೆಗಳನ್ನು ನಿಯಂತ್ರಿಸುವುದೂ ಕೂಡ ಸುಧಾರಣೆಯ ಪ್ರಮುಖ ಅಂಶ;

5. ರಾಜಕೀಯ ಪಕ್ಷಗಳು ದೇಶದಾದ್ಯಂತ ಒಟ್ಟು ಮತ ಹೆಚ್ಚಾಗಿ ಪಡೆದೂ ಕಡಿಮೆ ಸ್ಥಾನಗಳನ್ನು ಗಳಿಸುತ್ತಿರುವ ವಿಪರ್ಯಾಸವನ್ನು ಬಗೆಹರಿಸುವ ಸುಧಾರಣೆಗಳು;


6. ಮತದಾನವನ್ನು ಕಡ್ಡಾಯ ಮಾಡದೇ ಅದನ್ನು ಘೋಷಿಸುವ ಮತ್ತು ವೃದ್ಧಿಸುವ ಸುಧಾರಣೆಗಳು.

ರಾಜಕೀಯ ಮತ್ತು ರಾಜಕಾರಣದ ಬಗ್ಗೆ ಕುವೆಂಪು ಅವರಿಗೆ ಸಿಟ್ಟಿತ್ತು. ಅವರು ತಮ್ಮ 'ವಿಚಾರ ಕ್ರಾಂತಿಗೆ ಆಹ್ವಾನ' ಎಂಬ ಭಾಷಣದಲ್ಲಿ ರಾಜಕೀಯದ ಬಗ್ಗೆ ಹೀಗೆ ಹೇಳಿದ್ದರು.

'ನಮ್ಮಲ್ಲಿ ಡೆಮಾಕ್ರಸಿ ಎನ್ನುವುದು ಬರಿಯ ಅಪಹಾಸ್ಯವಾಗಿದೆ. ಕೋಟ್ಯಾಧೀಶರಲ್ಲದವರು ಚುನಾವಣೆಯಲ್ಲಿ ಗೆಲ್ಲುವುದು ಇರಲಿ ನಿಲ್ಲುವುದೂ ಕೂಡ ಅಸಾಧ್ಯವಾಗಿದೆ. ಜಾತಿ, ಮತ, ಹೆಂಡ, ದುಡ್ಡು ಇವೇ ಓಟರುಗಳಾಗಿವೆ. ಓಟು ಕೊಡುವ ಪ್ರಜೆಗಳು ಬರೀ ನಿಮಿತ್ತ ಮಾತ್ರ, ಮೂಕವಾಹನಗಳಷ್ಟೇ. ನಾಲ್ಕಾರು ಜನ ಯಾತಕ್ಕೂ ಹೇಸದ ಖದೀಮರು ಸೇರಿ ಯಾವ ಉಪಾಯದಿಂದಾರೂ ಕಾಳಸಂತೆಯ ಕಪ್ಪುಹಣವೋ ಕಳ್ಳಸಾಗಣಿಕೆಯ ಹಳದೀ ಹಣವೋ ಅಂತೂ ಹೆಚ್ಚು ಹಣ ಖರ್ಚು ಮಾಡಿದರಾಯಿತು. ಚುನಾವಣೆ ಗೆಲ್ಲಬಹುದು. ಒಮ್ಮೆ ಗೆದ್ದು ಅಧಿಕಾರ ಹಿಡಿದರಾಯಿತು. ನಾಡಿನ ಸರ್ವಪ್ರಚಾರ ಮಾರ್ಗಗಳನ್ನು ಅಧಿಕಾರದ ಭಯದಿಂದಲೋ ದುಡ್ಡಿನ ಬಲದಿಂದಲೊ ವಶಪಡಿಸಿಕೊಳ್ಳಬಹುದು. ಒಮ್ಮೆ ಜನಶಕ್ತಿ ಪ್ರತಿಭಟನೆಗೆ ನಿಂತರೂ ಪೊಲೀಸು ಸೇನೆ ಬಳಸಿ ವಿಫಲಗೊಳಿಸಬಹುದು'. ಚುನಾವಣಾ ಸುಧಾರಣೆಗಳ ಮೂಲಕ ನಮ್ಮ ಪ್ರತಿನಿಧಿಗಳ ಗುಣ ಹಾಗೂ ಸರ್ಕಾರಗಳ ಪ್ರಾತಿನಿಧಿತ್ವ, ಗುಣಮಟ್ಟ, ನ್ಯಾಯಪರತೆ, ಸ್ಥಿರತೆ, ಸಾಮರ್ಥ್ಯಗಳನ್ನು ವೃದ್ಧಿಸಬೇಕಾಗಿದೆ. ಪ್ರಜಾಪ್ರಭುತ್ವವನ್ನು ಸಾಕಾರಗೊಳಿಸಿ ಪರಿಣಾಮಕಾರಿಯನ್ನಾಗಿಸಬೇಕಾಗಿದೆ. ಚುನಾವಣೆಗಳ ಮೇಲೆ ಚುನಾವಣೆಗಳು ಬರುತ್ತಿವೆ. ಆಳುವ ಸರ್ಕಾರಗಳಿಗೆ ಚುನಾವಣಾ ಸುಧಾರಣೆಗಳಲ್ಲಿ ಆಸಕ್ತಿ ಕಾಣುತ್ತಿಲ್ಲ. ಚುನಾವಣಾ ಸುಧಾರಣೆಗಳಿಗಾಗಿ ಜನರ ಎಚ್ಚರ, ಕೂಗು ಮತ್ತು ಒತ್ತಾಯಗಳು ದೊಡ್ಡದಾಗಬೇಕಾಗಿವೆ. ❑

# ಚುನಾವಣೆಯ ಮಹತ್ವ ಮತ್ತು ಸುಧಾರಣೆ

ಪ್ರೊ. ಯಮುನಾ ಎ. ಕೋಣೇಸರ




ಚುನಾವಣಾ ಪ್ರಕ್ರಿಯೆಯು ಒಮ್ಮೆ ಪ್ರಾರಂಭವಾಯಿತೆಂದರೆ, ಚುನಾವಣಾ ಆಯೋಗದಿಂದ ಫಲಿತಾಂಶಗಳು ಘೋಷಿಸಲ್ಪಡುವವರೆಗೆ ಯಾವುದೇ ನ್ಯಾಯಾಲಯಗಳು ಮಧ್ಯ ಪ್ರವೇಶಿಸುವಂತೆ ಇಲ್ಲದಿರುವದು ಒಂದು ಸುಸ್ಥಾಪಿತ ನಡವಳಿಕೆಯಾಗಿದೆ. ಚುನಾವಣೆಗಳ ಸಂದರ್ಭದಲ್ಲಿ ಚುನಾವಣಾ ಆಯೋಗಕ್ಕೆ ಅಗಾಧ ಅಧಿಕಾರಗಳನ್ನು ನಿಯೋಜಿಸಲಾಗುತ್ತದೆ.

ಭಾರತದಂತಹ ಬೃಹತ್ ಪ್ರಜಾಪ್ರಭುತ್ವರಾಷ್ಟ್ರದಲ್ಲಿ ಸ್ವಾತಂತ್ರ್ಯ, ಸಮಾನತೆ, ಸಹೋದರತ್ವವನ್ನು ಕಾಪಾಡಿಕೊಂಡು ಜನತೆಯ ಅಭಿಪ್ರಾಯವನ್ನು ವ್ಯಕ್ತಪಡಿಸುವ ಮಾಧ್ಯಮವಾಗಿ ಚುನಾವಣೆ ನಡೆದು ಬಂದಿವೆ. ಚುನಾವಣೆ ಪ್ರಜಾಪ್ರಭುತ್ವದ ಜೀವಾಳ. ಚುನಾವಣಾ ವ್ಯವಸ್ಥೆ ಕ್ರಮಬದ್ಧವಾಗಿರಬೇಕು. ಸುಧಾರಣೆಯಾಗಬೇಕು . ಇದು ಭಾರತದಲ್ಲಿ ಸ್ವಾತಂತ್ರ್ಯ ಪೂರ್ವದಿಂದಲೂ ಇದೆ, ಜನತೆಗೆ ತಮ್ಮ ಧ್ವನಿ ಎತ್ತಲು , ಅಭಿಪ್ರಾಯ ಹೇಳಲು ವಿಶ್ವವ್ಯಾಪಿ ಬಳಸುತ್ತಿರುವ ಅಸ್ತ್ರ ಈ ಚುನಾವಣೆ. ಬ್ರಿಟಿಷ ಆಡಳಿತದಲ್ಲಿ ಇದು ಮಿತಿಯಲ್ಲಿ ಇತ್ತು. ಸ್ವಾತಂತ್ರ್ಯಾ ನಂತರದಲ್ಲಿ ಭಾರತ ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿಯನ್ನು ಅಳವಡಿಸುವ ಮೂಲಕ 18 ವರ್ಷ ಮೇಲ್ಪಟ್ಟ ಪ್ರತಿಯೊಬ್ಬ ಭಾರತೀಯ ನಾಗರಿಕನಿಗೂ ಇಲ್ಲಿ ಮತದಾನ ಎನ್ನುವ ಅಸ್ತ್ರ ನೀಡಿದೆ. ಮತದಾನ ಬಹಳ ಅಮೂಲ್ಯವಾದದ್ದು, ಚುನಾವಣೆ ಬಹಳ ಮಹತ್ವವಾದದ್ದು.

16 ನೇ ಲೋಕಸಭಾ ಚುನಾವಣೆಯನ್ನು ಮುಗಿಸಿದ ಈ ಸಂದರ್ಭದಲ್ಲಿ ಚುನಾವಣೆ ಸುಧಾರಣೆ ಮತ್ತು ಮತದಾನದ ಮಹತ್ವ ವಿಷಯ ಬಹಳ ಸೂಕ್ತವಾದದ್ದು. ಎಕೆಂದರೆ 81.45 ಕೋಟಿ ಮತದಾರರಿರುವ ಭಾರತದಲ್ಲಿ ಶೇ. 80 ರಷ್ಟು ಯುವಜನತೆಯೇ ಇರುವಾಗ ಯುವ ಜನಾಂಗಕ್ಕೆ ಚುನಾವಣಾ ಪ್ರಕ್ರಿಯೆಯ ಚುನಾವಣಾ ಸುಧಾರಣೆ, ಮತದಾನದ ಅರಿವು ಮೂಡಿಸುವಲ್ಲಿ ಇದು ಇನ್ನೂ ಸೂಕ್ತ. ಜನೆವರಿ 25 ನ್ನು ಮತದಾರರ ದಿನಾಚರಣೆಯಾಗಿ ಆಚರಿಸುವ ಮೂಲಕ ಚುಣಾವಣಾ ಆಯೋಗ ಇದರ ಬಗ್ಗೆ ಅರಿವು ಮೂಡಿಸುತ್ತಿದ್ದರೂ ಮತದಾನದ ಪ್ರಮಾಣ ನಿರೀಕ್ಷೆಯಂತೆ ಆಗುತ್ತಿಲ್ಲ. ನಮ್ಮ ದೇಶದಲ್ಲಿ ಮೂರು ವಿಧದ ಸಂಸ್ಥೆಗಳು ಪ್ರಮುಖವಾಗಿ ಕಾರ್ಯ ನಿರ್ವಹಿಸುತ್ತಿವೆ.

**1. ಸಂವಿಧಾನದತ್ತ ಸ್ವಾಯತ್ತ ಸಂಸ್ಥೆಗಳು**

ಸಂವಿಧಾನ ಮೂಲದಿಂದ ಅಸ್ತಿತ್ವಕ್ಕೆ ಬಂದಂತಹ ಆಯೋಗಗಳು / ಮಂಡಳಿಗಳು. ಉದಾ ; ಹಣಕಾಸು ಆಯೋಗ, (208ನೇವಿಧಿ) ಕೇಂದ್ರ ಲೋಕಸೇವಾ ಆಯೋಗ,(315 ನೇ ವಿಧಿ) ರಾಜ್ಯ ಲೋಕಸೇವಾ ಆಯೋಗಗಳು, ಚುನಾವಣಾ ಆಯೋಗ (324– ನೇ ವಿಧಿ) ಅಧಿಕೃತ ಭಾಷಾ ಆಯೋಗ (344– ನೇ ವಿಧಿ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಆಯೋಗ (388 – ನೇ ವಿಧಿ), ಇತ್ಯಾದಿ

**2. ಸಂಸತ್ತಿನ ಸೂಕ್ತ ಶಾಸನದ ಮೂಲಕ ಸ್ಥಾಪಿಸಿದ ಆಯೋಗಗಳು:** ಉದಾ – ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ– 1993, ರಾಷ್ಟ್ರೀಯ ಖನಿಜ ಆಯೋಗ– 1992, ರಾಷ್ಟ್ರೀಯ ಮಹಿಳಾ ಹಕ್ಕುಗಳ ಆಯೋಗ–1990 ಕೇಂದ್ರ ಜಾಗೃತಿ ಆಯೋಗ–2003, ವಿಶ್ವವಿದ್ಯಾಲಯ ಧನಸಹಾಯ ಆಯೋಗ,ಅಣುಶಕ್ತಿ ಆಯೋಗ ಇತ್ಯಾದಿ

**3. ಕ್ಯಾಬಿನೆಟ್ ಗೊತ್ತುವಳಿ ಮೂಲಕ ಅಸ್ತಿತ್ವಕ್ಕೆ ಬಂದ ಆಯೋಗಗಳು :** ಉದಾ – ಯೋಜನಾ ಆಯೋಗ – 1950, ರಾಷ್ಟ್ರೀಯ ಅಭಿವೃದ್ಧಿ ಮಂಡಳಿಗಳು–1952, ಕೇಂದ್ರ ಜಲ ಮತ್ತು ವಿದ್ಯುತ್ ಆಯೋಗ, ಕೃಮಗ್ಗ ಆಯೋಗ ಇತ್ಯಾದಿ.

ರಾಜ್ಯಶಾಸ್ತ್ರ ಪ್ರಾಧ್ಯಾಪಕಿ, ಸರ್ಕಾರಿ ಪ್ರಥಮದರ್ಜೆ ಕಾಲೇಜು, ಬಂಕಾಪುರ ,ಜಿಲ್ಲೆ: ಹಾವೇರಿ.

ಸಂವಿಧಾನದ ಅಡಿಯಲ್ಲಿ ಸೃಷ್ಟಿಸಿದ ಪ್ರಾಧಿಕಾರವಾಗಿರುವ ಭಾರತದ ಚುನಾವಣಾ ಆಯೋಗ ಸ್ವತಂತ್ರವಾಗಿದೆ. ಸಂವಿಧಾನದ 15 ನೇ ಭಾಗ 324 ರಿಂದ 329 ನೇ ಪರಿಚ್ಛೇದಗಳವರೆಗೆ ಅದರ ವಿವರಗಳಿವೆ. ಚುನಾವಣೆ ಹಿಂದಿ ಭಾಷೆಯ ಚುನಾವ್ ಎನ್ನುವ ಶಬ್ದದಿಂದ ಬಂದಿದೆ. ಚುನಾವಣೆ ಎನ್ನುವದು ಒಂದು ಔಪಚಾರಿಕ ವ್ಯವಸ್ಥೆ, ನಿರ್ಧಾರ ಮಾಡುವ ಪ್ರಕ್ರಿಯೆ. ಇದರಲ್ಲಿ ಜನಸಮೂಹ ಒಬ್ಬನನ್ನು ಸಾರ್ವಜನಿಕ ಕ್ಷೇತ್ರದ ಅಧಿಕಾರವನ್ನು ಹಿಡಿಯಲು ಮಾಡುವ ಆಯ್ಕೆ. ಚುನಾವಣೆಗಳು ಒಂದು ಸಾಧಾರಣ ಯಾಂತ್ರಿಕದಲ್ಲಿ ಆಧುನಿಕ ಪ್ರಾತಿನಿಧಿಕ ಪ್ರಜಾಪ್ರಭುತ್ವವಾಗಿ 17ನೇ ಶತಮಾನದಿಂದ ನಡೆಯುತ್ತಿದೆ. ಚುನಾವಣೆಗಳು ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗಗಳಲ್ಲಿ ಮತ್ತು ಪ್ರಾದೇಶಿಕ ಹಾಗೂ ಸ್ಥಳಿಯ ಸರ್ಕಾರಗಳಿಗೆ ಅಧಿಕಾರಸ್ಥರನ್ನೂ ತುಂಬುತ್ತದೆ. ಈ ಚುನಾವಣಾ ಪ್ರಕ್ರಿಯೆಯನ್ನು, ಖಾಸಗಿ ಮತ್ತು ವ್ಯಾಪಾರದ ಸಂಘಟನೆಗಳಲ್ಲಿ , ಕ್ಲಬ್ ಗಳಿಂದ ಹಿಡಿದು ಸೇವಾ ಸಂಘಟನೆ ಮತ್ತು ಪಾಲಿಕೆಗಳವರೆಗೂ ಬಳಸಲಾಗುತ್ತದೆ.

ಚುನಾವಣಾ ಪ್ರಕ್ರಿಯೆಯು ಒಮ್ಮೆ ಪ್ರಾರಂಭವಾಯಿತೆಂದರೆ, ಚುನಾವಣಾ ಆಯೋಗದಿಂದ ಫಲಿತಾಂಶಗಳು ಘೋಷಿಸಲ್ಪಡುವವರೆಗೆ ಯಾವುದೇ ನ್ಯಾಯಾಲಯಗಳು ಮಧ್ಯ ಪ್ರವೇಶಿಸುವಂತೆ ಇಲ್ಲದಿರುವದು ಒಂದು ಸುಸ್ಥಾಪಿತ ನಡುವಳಿಕೆಯಾಗಿದೆ. ಚುನಾವಣೆಗಳ ಸಂದರ್ಭದಲ್ಲಿ ಚುನಾವಣಾ ಆಯೋಗಕ್ಕೆ ಅಗಾಧ ಅಧಿಕಾರಗಳನ್ನು ನಿಯೋಜಿಸಲಾಗುತ್ತದೆ. ಅಗತ್ಯವಾದಲ್ಲಿ ಅದು ಒಂದು ನಾಗರಿಕ ನ್ಯಾಯಾಲಯದಂತೆ ಕಾರ್ಯನಿರ್ವಹಿಸಬಹುದಾದ ಮಟ್ಟಿಗೆ ಅವಶ್ಯ ಅಧಿಕಾರವಿರುತ್ತದೆ. ಚುನಾವಣಾ ಆಯೋಗದ ಮುಖ್ಯ ಆಯುಕ್ತ ಮತ್ತು ಇತರೆ ಆಯುಕ್ತರನ್ನು 6 ವರ್ಷದ ಅಥವಾ 65 ವರ್ಷ ವಯಸ್ಸಾಗುವವರೆಗೆ ರಾಷ್ಟ್ರಪತಿಯವರು ನೇಮಿಸುತ್ತಾರೆ. ಮುಖ್ಯ ಆಯುಕ್ತರೊಂದಿಗೆ ಚರ್ಚಿಸಿ ಇತರೇ ರಾಜ್ಯ ಚುನಾವಣಾ ಆಯುಕ್ತರನ್ನು ನೇಮಿಸಲಾಗುತ್ತದೆ. ಚುನಾವಣೆ ನಡೆಸಲು ಆಯೋಗಕ್ಕೆ ಅಗತ್ಯ ಸಿಬ್ಬಂದಿಗಳನ್ನು ರಾಜ್ಯಪಾಲರು / ರಾಷ್ಟ್ರಪತಿಗಳು ಒದಗಿಸಬೇಕು.ನ್ಯಾಯಯುತ ಮತ್ತು ಪಕ್ಷಪಾತ ಚುನಾವಣೆ ನಡೆಸಲು ಸೇವಾಭದ್ರತೆ ನೀಡಲಾಗಿದೆ.



**ಚುನಾವಣೆಯ ಅವಶ್ಯಕತೆ**

ನಾಗರಿಕರಿಗೆ ತಮ್ಮ ಪ್ರತಿನಿಧಿಗಳ ಮತ್ತು ಪಕ್ಷದ ಆಯ್ಕೆಗೆ ಚುನಾವಣೆ ಅವಶ್ಯ.

1) ಜನತೆಗೆ ಪ್ರಚಲಿತ ಸರ್ಕಾರ ಇಷ್ಟವಿಲ್ಲವಾದಾಗ, ಅಥವಾ ಕೆಲಸ ಸರಿಯಾಗದಿದ್ದಾಗ ಅಂತಹ ಸರ್ಕಾರಕ್ಕೆ ಚುನಾವಣೆಯ ಸಂದರ್ಭದಲ್ಲಿ ಇನ್ನೊಂದು ಪಕ್ಷವನ್ನು ಗೆಲ್ಲಿಸುವ ಮೂಲಕ ಶಿಕ್ಷೆ ವಿಧಿಸಲು ಇದು ಅವಶ್ಯಕ.
2) ಕಾಲಕಾಲಕ್ಕೆ ನಡೆಯುವ ಚುನಾವಣೆಗಳು ಜವಾಬ್ದಾರಿಯನ್ನು, ಹೊಣೆಗಾರಿಕೆಯನ್ನು ಹೆಚ್ಚಿಸುತ್ತದೆ.
3) ಜನತೆಗೆ ರಾಜಕೀಯ ಶಿಕ್ಷಣ ನೀಡುತ್ತದೆ.

**ಚುನಾವಣಾ ಪ್ರಚಾರ, ಪ್ರಣಾಳಿಕೆ**

ವಿವಿಧ ಪಕ್ಷಗಳು ವಿವಿಧ ರೀತಿಯಿಂದ ವಿಚಾರಗಳನ್ನು ಹೇಳಿದಾಗ ಸಹಜವಾಗಿ ಜನತೆ ಹಲವಾರು ರೀತಿಯಿಂದ ಚಿಂತನೆ ಮಾಡುವಂತಾಗುತ್ತದೆ. ಮಾಧ್ಯಮಗಳು, ಸಭೆ - ಚರ್ಚೆಗಳಲ್ಲಿ ಪಾಲ್ಗೊಳ್ಳುತ್ತವೆ.

**ಚುನಾವಣಾ ಸುಧಾರಣೆಗಳು**

1951 ರಿಂದ 2014 ರ ವರೆಗೆ 16 ಲೋಕಸಭಾ ಮತ್ತು 14 ವಿಧಾನಸಭಾ ಚುನಾವಣೆಗಳು ನಡೆದಿವೆ. ಈ ಅವಧಿಯ ಪ್ರಮುಖ ಅಂಶಗಳು ಮುಂದಿನಂತಿವೆ.

1) 1951–52 ರಲ್ಲಿ ಡಿಸೆಂಬರ–ಫೆಬ್ರುವರಿಯಲ್ಲಿ ಪ್ರಥಮ ಚುನಾವಣೆ ನಡೆಯಿತು – 17 ಕೋಟಿ ಮತದಾರರಿದ್ದರು
2) 1962 ರಿಂದ ಮತ ಚಲಾವಣೆ ಗುರುತಿಗೆ ಮಸಿ (indelible ink) ಬಳಸಲಾಯಿತು.
3) 1974 ರ ವರೆಗೆ ಸಾರ್ವತ್ರಿಕ ವಯಸ್ಕ ಮತದಾನದ ಮೂಲಕ ಮತಪೆಟ್ಟಿಗೆಯಲ್ಲಿ ಮತ ಚೀಟಿಯ ಮೂಲಕ ಮತ ಚಲಾಯಿಸುವ ಪದ್ಧತಿ ಇತ್ತು.
4) 1974 ರಲ್ಲಿ ನ್ಯಾಯಮೂರ್ತಿ ವಿ.ಎಮ್ ತಾರ್ಕುಂಡೆ ಆಯೋಗವನ್ನು ಚುನಾವಣಾ ಸುಧಾರಣೆಗಾಗಿ ನೇಮಿಸಲಾಯಿತು.
5) 1990 ರಲ್ಲಿ ದಿನೇಶ ಗೋಸ್ವಾಮಿ ಆಯೋಗ – ಚುನಾವಣಾ ಸುಧಾರಣೆ ಮಾಡಬೇಕೆಂದು ಶಿಫಾರಸ್ಸಿನಂತೆ ಗುರುತಿನ ಚೀಟಿ (Voter Identity card) ಪ್ರಾರಂಭವಾಯಿತು. –1990 ರಿಂದ1996 ರಲ್ಲಿ ಟಿ.ಎನ್ ಶೇಷನ್. ಚುನಾವಣಾ ಆಯುಕ್ತರಾಗಿದ್ದಾಗ ಚುನಾವಣಾ ಸಂದರ್ಭದಲ್ಲಿ – ವಿಶೇಷ ವೀಕ್ಷಕರನ್ನು ನೇಮಿಸುವ,



ಮತ್ತು ಚುನಾವಣಾವೆಚ್ಚ ನಿಯಂತ್ರಣ, ಮುಕ್ತ ಮತದಾನ ದಂತಹ ಸುಧಾರಣೆ ಮಾಡಲಾಯಿತು

6) ಚುನಾವಣೆಯಲ್ಲಿ ಭ್ರಷ್ಟಾಚಾರ, ಹಿಂಸಾಚಾರ ಅಧಿಕವಾಗಿತ್ತು. ಇದು ಚುನಾವಣೆಯ ದೋಷ ಮತ್ತು ಉತ್ತಮ ಸರ್ಕಾರ ರಚನೆಗೆ ತೊಡಕು. ಕಾರಣ –1991 ರಲ್ಲಿ' ವಿದ್ಯುನ್ಮಾನ ಮತ ಯಂತ್ರ (Electronic Voting Machine) ಬಳಕೆ ಪ್ರಾರಂಭಿಸಲಾಯಿತು. ಪ್ರಪಂಚದಲ್ಲೇ ಮೊದಲಬಾರಿ ವಿದ್ಯುನ್ಮಾನ ಮತ ಯಂತ್ರ (Electronic Voting Machine) ಬಳಕೆ ಮಾಡಿದ ಕೀರ್ತಿ ಭಾರತದ್ದು. ಈ ಯಂತ್ರವನ್ನು ಭಾರತ್ ಎಲೆಕ್ಟ್ರಾನಿಕ್ ಲಿಮಿಟೆಡ್, ಬೆಂಗಳೂರು ಮತ್ತು ಭಾರತ್ ಎಲೆಕ್ಟ್ರಾನಿಕ್ ಲಿಮಿಟೆಡ ಹೈದರಾಬಾದ ನಲ್ಲಿ ತಯಾರಿಸಲಾಗಿದೆ. ಇದು ಕರ್ನಾಟಕದ ಹೆಮ್ಮೆ. 16 ನೇ ಲೋಕಸಭಾ ಚುನಾವಣೆಗೆ 18 ಲಕ್ಷ ಮತಯಂತ್ರಗಳನ್ನು ಬಳಸಲಾಗಿತ್ತು ಎನ್ನಲಾಗಿದೆ.

ಒಂದು ವಿದ್ಯುನ್ಮಾನ ಮತ ಯಂತ್ರ –3840 ಮತಗಳನ್ನು ದಾಖಲಿಸುತ್ತದೆ. 16 ಜನ ಅಭ್ಯರ್ಥಿಗಳ ಹೆಸರನ್ನು ನೊಂದಾಯಿಸಬಹುದು.

7) 2002 ರ ಸುಪ್ರೀಂ ಕೋರ್ಟ್ ತೀರ್ಪಿನ ಪ್ರಕಾರ 2003 ರಿಂದ ಚುನಾವಣಾ ಅಭ್ಯರ್ಥಿಗಳ ಅಪರಾಧ ಹಿನ್ನಲೆ, ಆಸ್ತಿ, ಶೈಕ್ಷಣಿಕ ಅರ್ಹತೆಗಳವಿಚಾರದಲ್ಲಿ ಆಯೋಗ ಮಾಹಿತಿಯನ್ನು ಸಂಗ್ರಹಿಸಬೇಕೆಂದು ಶಾಸನವಾಯಿತು.

8) ಚುನಾವಣೆಯಲ್ಲಿ ಗಲಭೆ ಮಾಡಿದವರಿಗೆ 250 ರಿಂದ 1000 ರೂ ವರೆಗೆ ದಂಡ, 3 ತಿಂಗಳು ಬಂಧನದಲ್ಲಿರಿಸಲು ಅವಕಾಶವಿದೆ.

9) 2004 ರಿಂದ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸುವಾಗ ತಮ್ಮ ಆಸ್ತಿಯ ಎಲ್ಲಾ ವಿವರಗಳನ್ನು ಅಫಿಡೆವಿಟ್ ಮೂಲಕ ಸಲ್ಲಿಸಬೇಕು.

10) ಪ್ರತಿ ಚುನಾವಣೆಯಲ್ಲೂ ಅಭ್ಯರ್ಥಿಗಳ ಖರ್ಚು ವೆಚ್ಚಗಳ ಮಿತಿಯನ್ನು ಆಯೋಗ ನಿರ್ಧರಿಸುತ್ತದೆ. ಎಷ್ಟು ಹಂತಗಳಲ್ಲಿ ಚುನಾವಣೆ ಎನ್ನುವುದನ್ನೂ ನಿರ್ಧರಿಸುವುದು ಆಯೋಗವೇ

11) www.jaagore.com. ನಂಥ ಸಾಮಾಜಿಕ ಸುಸಂಬದ್ಧ ವೆಬ್‌ಸೈಟ್‌ಗಳು ಮತದಾರರ ನೊಂದಣಿ ಕುರಿತು ಮಾಹಿತಿ ಸಂಗ್ರಹಿಸುತ್ತವೆ.

12) ಮತದಾರರಿಗೆ ತಮ್ಮ ಮತದಾರರ ಗುರುತಿನ ಚೀಟಿ ಇದ್ದರಷ್ಟೇ ಸಾಲದು ಮತದಾರ ಪಟ್ಟಿಯಲ್ಲಿ ನಮ್ಮ ಹೆಸರಿರಬೇಕು. ಅದನ್ನು ಖಚಿತಪಡಿಸುವುದು. ಆಯೋಗದ ವೆಬಸೈಟ www.ceokarnataka. kar.nic. in ಅಥವಾ ಎಸ್.ಎಮ್. ಎಸ್ ಮೂಲಕ – Karepic < space > ಟೈಪ ಮಾಡಿ ತಮ್ಮಮತದಾರರ ಗುರುತಿನ ಚೀಟಿ ಸಂಖ್ಯೆ ಬರೆದು 9243355223 ಈ ನಂಬರಿಗೆ ಕಳುಹಿಸಿ ಖಚಿತಪಡಿಸುವುದು

13) ಆಯೋಗ ಸಾರ್ವಜನಿಕರ ಅನುಕೂಲಕ್ಕಾಗಿ ಸಹಾಯವಾಣಿ 1950 ನ್ನು ಅಳವಡಿಸಿದ್ದು ದೂರವಾಣಿ ಕರೆ ಮಾಡಬಹುದು

14) 16 ನೇ ಲೋಕಸಭಾ ಚುನಾವಣೆಯಲ್ಲಿ ಮತದಾನದ ಅಕ್ರಮ ತಡೆಗಟ್ಟುವುದಕ್ಕಾಗಿ, ಕ್ರಮಬದ್ಧ ಖಚಿತತೇ ಯಂತ್ರವನ್ನು ಅಳವಡಿಸಿದ್ದು ಇನ್ನೊಂದು ಸುಧಾರಣೆ.

(Voter verifiable paper Audit trial ) ಇದು ಚಲಾಯಿಸಿದ ಮತ ಮತ್ತು ಚಿಹ್ನೆಯನ್ನು ತಾಳೆ ನೋಡುವ ಯಂತ್ರ.

15) ಚುನಾವಣೆಯಾಗಿ ಒಂದು ತಿಂಗಳೊಳಗಾಗಿ ಚುನಾವಣಾ ವೆಚ್ಚದ ಅಂಕಿ ಸಂಖ್ಯೆಯನ್ನು ಅಭ್ಯರ್ಥಿಗಳು ಆಯೋಗಕ್ಕೆ ಒಪ್ಪಿಸಬೇಕು. ಇಲ್ಲದಿದ್ದರೆ ಅಭ್ಯರ್ಥಿಯನ್ನು ಅನರ್ಹಗೊಳಿಸುವ ಅಧಿಕಾರ ಆಯೋಗಕ್ಕಿದೆ. ❑

## ಯೋಜನಾ ಚಂದಾದಾರರಲ್ಲಿ ಕೋರಿಕೆ

**ಯೋಜನಾ ಪತ್ರಿಕೆಯ ಚಂದಾದಾರರು ಹಾಗೂ ಹೊಸದಾಗಿ ಚಂದಾ ಬಯಸುವವರು ಜಿಲ್ಲೆ ಹಾಗೂ ಅಂಚೆ ಪಿನ್‌ಕೋಡ್ ಸಂಖ್ಯೆ ಸೇರಿದಂತೆ ತಮ್ಮ ಸಂಪೂರ್ಣ ವಿಳಾಸವನ್ನು ನಮಗೆ ಒದಗಿಸಬೇಕು. ಈಗಾಗಲೇ ಹಣ ಸಂದಾಯ ಮಾಡಿದವರು ದೂರವಾಣಿ ಮೂಲಕವೂ ಈ ವಿವರ ನೀಡಿ ದೃಢಪಡಿಸಿಕೊಳ್ಳಬಹುದಾಗಿದೆ. ದೂರವಾಣಿ ಸಂಖ್ಯೆ : 080 25537244**

# ಸಂವಿಧಾನ ಮತ್ತು ಮಹಿಳೆ

ಎಚ್.ಆರ್. ಲಮಾಣಿ



21ನೇ ಶತಮಾನದ ಮಹಿಳೆ ಸಂವಿಧಾನಬದ್ಧವಾಗಿ ತನ್ನ ಹಕ್ಕು ಸ್ವಾತಂತ್ರ್ಯದ ಮೂಲಕ ಸಮಾನತೆ ಅವಕಾಶಗಳನ್ನು ಪಡೆದುಕೊಂಡು ಸಾಮಾಜಿಕ, ಆರ್ಥಿಕ, ರಾಜಕೀಯ ಶೈಕ್ಷಣಿಕ, ವಿಜ್ಞಾನ– ತಂತ್ರಜ್ಞಾನ ಮುಂತಾದ ಕ್ಷೇತ್ರಗಳಲ್ಲಿ ವಿಶಿಷ್ಟ ಸಾಧನೆಗೈಯುವುದರ ಮೂಲಕ ತಾನೂ ಪುರುಷ ಸಮಾನಳು, ಅಬಲೆ ಅಲ್ಲ ಸಬಲೆ ಮತ್ತು ಪ್ರಬಲೆಯಾಗಿದ್ದೇನೆಂದು ಸಾಬೀತುಪಡಿಸಿದ್ದಾಳೆ.

ಸ್ತ್ರೀ ವಿಮೋಚನೆ ಹಾಗೂ ಸಬಲೀಕರಣ ಜಾಗತಿಕ ವಿಷಯವಾಗಿದ್ದು, ಭಾರತದಲ್ಲಿ ಸ್ವಾತಂತ್ರ್ಯದ ಪೂರ್ವದಿಂದಲೂ ಚರ್ಚೆಗೆ ಬಂದ ವಿಷಯವಾಗಿದೆ. ಸಂವಿಧಾನಾತ್ಮಕವಾಗಿ ಮಹಿಳೆಯರ ಹಕ್ಕು ಸ್ವಾತಂತ್ರ್ಯದ ಪ್ರತಿಪಾದನೆ ಮತ್ತು ರಕ್ಷಣೆ ಸಮಾನ ಸ್ಥಾನಮಾನ, ಅವಕಾಶ ನೀಡುವುದೇ ಮಹಿಳಾ ವಿಮೋಚನೆಯಾಗಿದೆ. ಪ್ರಜಾಸತಾತ್ಮಕ ಪ್ರಕ್ರಿಯೆಯಲ್ಲಿ ಸ್ತ್ರೀ ವಿಮೋಚನೆ ಹಾಗೂ ಮಹಿಳಾ ಸಬಲೀಕರಣಕ್ಕೆ ಪ್ರಥಮ ಆದ್ಯತೆ ನೀಡಲಾಗಿದೆ. ಮಹಿಳೆಯರ ಅಭಿವೃದ್ಧಿ, ಸ್ವಾತಂತ್ರ್ಯ, ಸಮಾನತೆ, ಸ್ಥಾನಮಾನ ಮತ್ತು ಹಕ್ಕು ಮತ್ತು ಕರ್ತವ್ಯಗಳ ಜವಾಬ್ದಾರಿಗಳ ವಾಸ್ತವಿಕ ಅರಿವಿನ ಮೊದಲ ಹಂತವೇ ಮಹಿಳೆಯರ ವಿಮೋಚನೆಯಾಗಿದೆ. ವೇದಗಳ ಕಾಲದಲ್ಲಿ ಮಹಿಳೆ, ಪುರುಷರ ಸಮಾನ ಸ್ಥಾನಮಾನ ಪಡೆಯುತ್ತಿದ್ದಳು. ಮಹಾಕಾವ್ಯಗಳ ಕಾಲದಲ್ಲಿ ಪೂಜ್ಯನೀಯ ಸ್ಥಾನ ಪಡೆದಿದ್ದಳು, ಆದರೆ ಪುರಾಣಗಳ ಕಾಲದಲ್ಲಿ ಧರ್ಮಶಾಸ್ತ್ರಗಳ ಆಚರಣೆಯಿಂದಾಗಿ ಶೋಷಣೆಗೆ ಒಳಪಟ್ಟಳು. ಧಾರ್ಮಿಕ ಆಚರಣೆಗಳು ಸಾಮಾಜಿಕ ಪಿಡುಗುಗಳಾಗಿ ಮಹಿಳೆಯರ ಸ್ಥಿತಿಗತಿ ಸ್ಥಾನಮಾನ, ಅಂತಸ್ತು ಅಧೋಗತಿಗೆ ಇಳಿದವು. ಬಾಲ್ಯವಿವಾಹ, ವಿಧವಾ ವಿವಾಹ ನಿಷೇಧ, ಸತಿಪದ್ಧತಿ, ಪರ್ದಾ ಪದ್ಧತಿ, ದೇವದಾಸಿ ಪದ್ಧತಿ, ಅವಿಭಕ್ತ ಕುಟುಂಬ, ಜಾತಿ ಪದ್ಧತಿ, ವಿದ್ಯಾಭ್ಯಾಸ ನಿಷೇದ ಮತ್ತು ಕಟ್ಟುನಿಟ್ಟಾದ ಧಾರ್ಮಿಕ ಆಚರಣೆಗಳು, ಮಹಿಳೆಯರ ಸ್ಥಾನಮಾನವನ್ನು ದಾಸ್ಯಸ್ಥಿತಿಗೆ ತಲುಪಿಸಿದವು.

ಬ್ರಿಟಿಷರ ಆಡಳಿತಾವಧಿಯಲ್ಲಿ ಪಾಶ್ಚಿಮಾತ್ಯರ ಶೈಲಿಯ ಜೀವನ ಕ್ರಮ ಮತ್ತು ಶೈಕ್ಷಣಿಕ ಮೌಲ್ಯಗಳು ಭಾರತೀಯರ ಜೀವನ ಕ್ರಮದ ಮೇಲೆ ಪ್ರಭಾವ ಬೀರಿ ಜೀವನ ವಿಧಾನವೇ ಬದಲಾಯಿತು. ವ್ಯಕ್ತಿ ಸ್ವಾತಂತ್ರ್ಯ, ಹಕ್ಕುಬಾಧ್ಯತೆಗಳು, ಹಾಗೂ ಕಲ್ಯಾಣ ತತ್ವಗಳು ಸ್ತ್ರೀಯರ ಬಗೆಗೆಗಿನ ಮನೋಧೋರಣೆಗಳನ್ನು ಬದಲಾಯಿಸಿದವು. ಅನೇಕ ಸ್ತ್ರೀವಾದಿ ನಾಯಕರ ಸಾಮಾಜಿಕ ಸುಧಾರಣಾ ಚಳವಳಿಗಳು ನಡೆದು ಸ್ತ್ರೀಯರ ಅಸಮಾನತೆ ನಿರ್ಮೂಲನೆಗಾಗಿ ಹೋರಾಡಿ ನ್ಯಾಯ ದೊರಕಿಸಿಕೊಡಲು ಪ್ರಯತ್ನಿಸಿದರು. ಬ್ರಿಟಿಷ ಗೌರ್ನರ್‌ಜನರಲ್‌ಗಳು ಸಹಕಾರ ನೀಡಿದರು. 1919ರ ನಂತರ ಮಹಿಳೆ ರಾಜಕೀಯ ಕ್ಷೇತ್ರಕ್ಕೆ ಪ್ರವೇಶಿಸಿದಳು. ನಂತರ ಮಹಿಳೆಯರ ಸಾಮಾಜಿಕ ಸ್ಥಾನಮಾನಗಳು ಸಬಲೀಕರಣವಾಗತೊಡಗಿದವು. ಆದರೆ ಕಾಯ್ದೆಬದ್ಧವಾಗಿರಲಿಲ್ಲ.

ದ್ವಿತೀಯ ಜಾಗತಿಕ ಯುದ್ಧದ ನಂತರ ಅನೇಕ ರಾಷ್ಟ್ರಗಳು ಸ್ವತಂತ್ರ ದೇಶಗಳಾಗಿ ಗಣರಾಜ್ಯಗಳಾದವು. ಕಲ್ಯಾಣ ರಾಜ್ಯ ನಿರ್ಮಾಣದ ಪರಿಕಲ್ಪನೆ ಮೂಡಿ ದುರ್ಬಲವರ್ಗಗಳನ್ನು ಶೋಷಣೆಯಿಂದ ಮುಕ್ತಗೊಳಿಸಲು ಹಕ್ಕು ಮತ್ತು ಸ್ವಾತಂತ್ರ್ಯ ನೀಡಿ ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿಯಲು. ಪರಮೋಚ್ಚ ಕಾಯ್ದೆ ಸಂವಿಧಾನಗಳು ಜಾರಿಗೆ ಬಂದವು. ಭಾರತೀಯ ಸಂವಿಧಾನವು ದುರ್ಬಲ ವರ್ಗಗಳಲ್ಲಿ ಒಂದಾದ ಮಹಿಳೆಯರ ಶೋಷಣೆ ನಿರ್ಮೂಲನೆಗಾಗಿ, ವಿಮೋಚನೆಗಾಗಿ ಮೂಲಭೂತ ಹಕ್ಕು ಮತ್ತು ಸ್ವಾತಂತ್ರ್ಯಗಳನ್ನು ನೀಡಿ ಅವರ ಸ್ಥಾನಮಾನ ಅವಕಾಶಗಳನ್ನು ಒದಗಿಸುವಲ್ಲಿ ಹಲವಾರು ರೀತಿಯ ಸುಧಾರಣಾ ಸಂರಕ್ಷಣಾಕ್ರಮಗಳನ್ನು ಶಾಸನೀಯ ರೂಪದಲ್ಲಿ ಸಂಸತ್ತು ವ್ಯಕ್ತಪಡಿಸಿತು. ಕಾಲಕಾಲಕ್ಕೆ ಸಂವಿಧಾನಕ್ಕೆ

ಸಹಾಯಕ ಪ್ರಾಧ್ಯಾಪಕರು, ಮುಖ್ಯಸ್ಥರು, ರಾಜ್ಯ ಶಾಸ್ತ್ರ ವಿಭಾಗ, ಶ್ರೀ ಸಂಗಮೇಶ್ವರ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಚಡಚಣ.

ತಿದ್ದುಪಡಿಗಳನ್ನು ತಂದು ಸಂವಿಧಾನಾತ್ಮಕ ಕಾಯ್ದೆಗಳನ್ನು ಜಾರಿಗೊಳಿಸಿ ಮಹಿಳಾ ವಿಮೋಚನೆಗೆ ತನ್ನ ಕೊಡುಗೆಯನ್ನು ನೀಡಿದೆ.

**ಉದ್ದೇಶ**

* ಮಹಿಳೆಯರಲ್ಲಿ ಜ್ಞಾನ, ಅರಿವು, ಅಂತಸ್ತು ಮತ್ತು ಆತ್ಮಗೌರವ ಹೆಚ್ಚಿಸುವುದು.
* ಮಹಿಳೆಯರು ಶ್ರೇಷ್ಠ–ಕನಿಷ್ಠ, ಲಿಂಗತಾರತಮ್ಯ ನಿರ್ಮೂಲನೆಗಾಗಿ ಹೋರಾಡುವುದು.
* ಮಾನಸಿಕ, ಭೌದ್ಧಿಕ, ದೈಹಿಕ ಬೆಳವಣಿಗೆಗೆ ಉತ್ತಮ ಸಾಮಾಜಿಕ ವಾತಾವರಣದ ನಿರ್ಮಾಣ ಮತ್ತು ಸಾಮಾಜಿಕ ಆರ್ಥಿಕ, ರಾಜಕೀಯ, ಶೈಕ್ಷಣಿಕ, ಸಾಂಸ್ಕೃತಿಕ ಮುಕ್ತ ಸ್ವಾತಂತ್ರ್ಯ ನೀಡುವುದು.
* ಆತ್ಮ ಸ್ಥೈರ್ಯ, ಧೈರ್ಯ ತುಂಬಿ ಸ್ವಾವಲಂಬಿ ಹಾಗೂ ಸ್ವಾಭಿಮಾನಿಗಳಾಗಿಸುವುದು.
* ಆಸ್ತಿ, ಹಣಕಾಸು ಸಂಸ್ಥೆ ಮತ್ತು ಸಂಪನ್ಮೂಲಗಳನ್ನು ನಿರ್ವಹಣೆ ಮಾಡುವ ಸ್ಪರ್ಧಾ ಮನೋಭಾವನೆಯನ್ನು ಬೆಳೆಸುವುದು.

ಬ್ರಿಟಿಷ್ ವಿದ್ವಾಂಸ, ವ್ಯಕ್ತಿಸ್ವಾತಂತ್ರ್ಯದ ಹರಿಕಾರ ಜೆ.ಎಸ್. ಮಿಲ್‌ನ ಪ್ರಕಾರ ಮಹಿಳಾ ವಿಮೋಚನೆ ಮತ್ತು ಸಬಲೀಕರಣವೆಂದರೆ

* ಮಹಿಳೆಯರಿಗೆ ರಾಜಕೀಯ ಹಕ್ಕುಗಳಿರಬೇಕು.
* ಸ್ತ್ರೀ–ಪುರುಷರ ಮಧ್ಯ ಲಿಂಗ ಭೇದ ಅನರ್ಹತೆಗೆ ಕಾರಣವಾಗಬಾರದು.
* ಮಹಿಳೆಯರಿಗೆ ಆಡಳಿತದ ಪ್ರಮುಖ ಹುದ್ದೆಗಳನ್ನು ನೀಡಬೇಕು.
* ಮಹಿಳೆಯರಿಗೆ ಸಮಾನ ಅವಕಾಶ ನೀಡಿ, ಅವರ ಸಾಮರ್ಥ್ಯ, ಸತ್ವ ಹೊರಬರುವಂತೆ ಮಾಡಬೇಕು.
* ಮಹಿಳೆಯರಿಗೆ ಪುರುಷರ ವಿರುದ್ಧ ಚುನಾವಣೆಯಲ್ಲಿ ಸ್ಪರ್ಧಿಸುವ ಅವಕಾಶ ನೀಡಿದರೆ ಅವರ ಆತ್ಮಬಲ ಹೆಚ್ಚಿ ನಾವು ಪುರುಷ ಸಮಾನರು ಎಂದು ಭಾವಿಸುತ್ತಾರೆ.



* ಜನ್ಮ ಒಂದೇ ಅರ್ಹತೆ ನಿರ್ಧರಿಸುವ ಸಾಧನವಾಗಬಾರದು. ಜನ್ಮತಃ ಪ್ರತಿಯೊಬ್ಬರು ಸ್ವತಂತ್ರರು.
* ಮಹಿಳೆ ಜೀವನದಲ್ಲಿ ಕೈಕೊಳ್ಳುವ ಉದ್ಯೋಗದಲ್ಲಿ ಅರ್ಹತೆ ಪ್ರತಿಭೆ ವ್ಯಕ್ತಪಡಿಸಲು ಅವಕಾಶ ನೀಡಬೇಕು.
* ಸಂಪ್ರದಾಯದ ಹಿನ್ನೆಲೆಯಲ್ಲಿ ಮಹಿಳೆಯರನ್ನು ರಾಷ್ಟ್ರೀಯ ವಾಹಿನಿಯಿಂದ ಬೇರ್ಪಡಿಸಬಾರದು.
* ರಾಷ್ಟ್ರ ರಾಜಕಾರಣದಲ್ಲಿ ಸೇವೆ ಸಲ್ಲಿಸಲು ಮುಕ್ತ ಅವಕಾಶ ಇರಬೇಕು.

ಹೀಗೆ ಜೆ.ಎಸ್. ಮಿಲ್‌ರ ತತ್ವಗಳನ್ನು ನಮ್ಮ ಭಾರತೀಯ ಸಂವಿಧಾನ ಸಂಸದೀಯ ಕಾನೂನುಗಳ ಮೂಲಕ ಜಾರಿಗೊಳಿಸಿದೆ.

**ಭಾರತೀಯ ಸಂವಿಧಾನ ಮತ್ತು ಮಹಿಳೆಯರ ವಿಮೋಚನೆ**

ಸಂವಿಧಾನ ಮಹಿಳೆಯರ ಸಾಮಾಜಿಕ ಜೀವನದಲ್ಲಿ ಕಾಯ್ದೆಬದ್ಧವಾಗಿ ಹಕ್ಕು ಸ್ವಾತಂತ್ರ್ಯವನ್ನು ಖಾತ್ರಿಗೊಳಿಸಿ, ರಕ್ಷಣೆ ನೀಡಿರುವುದರಿಂದ ಮಹಿಳೆ ಎಲ್ಲಾ ಕ್ಷೇತ್ರಗಳಲ್ಲಿ ತನ್ನ ಸಾಧನೆಯ ಮೂಲಕ ಸಬಲೆ ಮತ್ತು ಪ್ರಬಲೆಯಾಗಿದ್ದಾಳೆ.

**ಪೂರ್ವ ಪೀಠಿಕೆ**

ಭಾರತೀಯ ಸಂವಿಧಾನದಲ್ಲಿ "ಭಾರತೀಯ ಪ್ರಜೆಗಳಾದ ನಾವು" ಎಂಬ ವಾಕ್ಯವು ಸ್ತ್ರೀ–ಪುರುಷರ ಸಮಾನತೆ ಸಹಜವಾಬ್ದಾರಿ, ಸಹಭಾಗಿತ್ವ ಮತ್ತು ಏಕನಾಗರೀಕತ್ವವನ್ನು ಎತ್ತಿಹಿಡಿಯುತ್ತದೆ.

* ನ್ಯಾಯ – ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಪುರುಷ ಸಮಾನ ನ್ಯಾಯವನ್ನು ಹೊಂದಿದ್ದಾಳೆ.
* ಸ್ವಾತಂತ್ರ್ಯ – ಚಿಂತನೆ, ಅಭಿವ್ಯಕ್ತತೆ, ನಂಬಿಕೆ, ಆರಾಧನೆ, ಉಪಾಸನೆಗಳಲ್ಲಿಯೂ ಸಮಾನ ಸಹಭಾಗಿತ್ವಳಾಗಿದ್ದಾಳೆ.
* ಸಮಾನತೆ – ಸ್ಥಾನಮಾನ ಮತ್ತು ಅವಕಾಶಗಳಲ್ಲಿಯೂ ಸಹಪಾಲುದಾರಳು.
* ಭಾತೃತ್ವ – ವ್ಯಕ್ತಿ ಗೌರವ, ರಾಷ್ಟ್ರದ ಐಕ್ಯ, ಸಮಗ್ರತೆ ಕಾಪಾಡುವಲ್ಲಿ ಹೊಣೆಗಾರಿಕೆ ಮತ್ತು ಜವಾಬ್ದಾರಿಗಳನ್ನು ಹೊಂದಿದವಳಾಗಿರುತ್ತಾಳೆ.

**ರಾಜನೀತಿ ನಿರ್ದೇಶಕ ತತ್ವಗಳು ಮತ್ತು ಮಹಿಳಾ ವಿಮೋಚನೆ:**

ರಾಜನೀತಿ ನಿರ್ದೇಶಕ ತತ್ವಗಳು ಕಲ್ಯಾಣರಾಜ್ಯ ನಿರ್ಮಾಣದ ತತ್ವಗಳಾಗಿವೆ. ಸರಕಾರಕ್ಕೆ ಆಡಳಿತ ಮಾರ್ಗದರ್ಶಿ ಸೂತ್ರಗಳಾಗಿವೆ. ದುರ್ಬಲ ವರ್ಗದವರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ರಾಜಕೀಯ ಗುರಿ ಸಾಧನೆಗಾಗಿ ಆಧಾರ ಸ್ತಂಭಗಳಾಗಿವೆ.

* 38ನೇಯ ವಿಧಿಯನ್ವಯ ಕಲ್ಯಾಣರಾಜ್ಯದ ಪರಿಕಲ್ಪನೆ ಹೊಂದಿ ದುರ್ಬಲವರ್ಗದವರ (ಮಹಿಳೆಯರ)



ಸಾಮಾಜಿಕ ಆರ್ಥಿಕ, ರಾಜಕೀಯ ನ್ಯಾಯಅನುಷ್ಠಾನಗೊಳಿಸುವುದು.

* ಸಂವಿಧಾನದ 39ನೇಯ ವಿಧಿಯನ್ವಯ ಪ್ರತಿಯೊಬ್ಬ ನಾಗರೀಕನು ಜೀವನಾವಶ್ಯಕ ಸೌಲಭ್ಯ ಹೊಂದುವ ಹಕ್ಕು. ಸ್ತ್ರೀ–ಪುರುಷರ ಸಮಾನ ಕೆಲಸಕ್ಕೆ ಸಮಾನ ವೇತನ, ಅನಾರೋಗ್ಯಕರ ದುಡಿಮೆ ನಿಷೇದ.
* 39/ಎ ವಿಧಿಯನ್ವಯ ಮಹಿಳೆಯರಿಗೆ ಉಚಿತ ಕಾನೂನಿನ ನೆರವು.
* ಸಂವಿಧಾನದ 40ನೇ ವಿಧಿಯನ್ವಯ ಸ್ಥಳೀಯ ಸರಕಾರಗಳಲ್ಲಿ ಭಾಗವಹಿಸಲು ಸಮಾನ ಅವಕಾಶ ಮತ್ತು ಮೀಸಲಾತಿ.
* ಸಂವಿಧಾನದ 41ನೇ ವಿಧಿಯನ್ವಯ ಸಾರ್ವಜನಿಕ ಉದ್ಯೋಗದ ರಕ್ಷಣೆ ಮತ್ತು ಉದ್ಯೋಗಸ್ಥ ಮಹಿಳೆಯರಿಗೆ ಹೆರಿಗೆ ಸೌಲಭ್ಯ.
* ಸಂವಿಧಾನದ 43ನೇಯ ವಿಧಿಯನ್ವಯ ಗೌರವಯುತ ಜೀವನ ನಡೆಸಲು ಜೀವನಾವಶ್ಯಕ ವೇತನ, ಸಾಮಾಜಿಕ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಅವಕಾಶ ಮತ್ತು ಪ್ರೋತ್ಸಾಹ.
* ಸಂವಿಧಾನದ 46ನೇಯ ವಿಧಿಯನ್ವಯ ಸಾಮಾಜಿಕ ನ್ಯಾಯದ ರಕ್ಷಣೆ.
* ಸಂವಿಧಾನದ 47ನೇ ವಿಧಿಯನ್ವಯ ಪೌಷ್ಟಿಕಾಂಶ ಆಹಾರ ಮತ್ತು ಉತ್ತಮ ಆರೋಗ್ಯ.
* ಸಂವಿಧಾನದ 48ನೇಯ ವಿಧಿಯನ್ವಯ ಸಣ್ಣ ಕೈಗಾರಿಕೆಗಳ ಸ್ಥಾಪನೆಗೆ ಪ್ರೋತ್ಸಾಹ ಮತ್ತು ಸಹಕಾರ ಸಂಘಗಳ ಸ್ಥಾಪನೆಗೆ ಅವಕಾಶ.

ಕೇಂದ್ರ ಮತ್ತು ರಾಜ್ಯ ಸರಕಾರಗಳು ಈ ತತ್ವಗಳ ಆಧಾರದ ಮೇಲೆ ಮಹಿಳೆಯರ ಕಲ್ಯಾಣಕ್ಕಾಗಿ ಅನೇಕ ಯೋಜನೆಗಳನ್ನು ಮತ್ತು ಶಾಸನಗಳನ್ನು ಜಾರಿಗೊಳಿಸಿವೆ.

**ಸಂವಿಧಾನಾತ್ಮಕ ಮೀಸಲಾತಿ ಮತ್ತು ಮಹಿಳಾ ವಿಮೋಚನೆ ಹಾಗೂ ಸಬಲೀಕರಣ**

ಭಾರತೀಯ ಸಂವಿಧಾನವು ಮಹಿಳೆಯರ ಸಬಲೀಕರಣಕ್ಕಾಗಿ ಮೀಸಲಾತಿ ನೀಡಿರುವುದು ಐತಿಹಾಸಿಕ ಮೈಲುಗಲ್ಲಾಗಿದೆ.

ಕೇಂದ್ರ ಮತ್ತು ರಾಜ್ಯ ಶಾಸನ ಸಭೆಗಳಲ್ಲಿ ಪ.ಜಾ. ಪ. ಪಂ. ವರ್ಗದವರು 15%– 3% ಸ್ಥಾನಗಳನ್ನು ಸ್ತ್ರೀ–ಪುರುಷರಿಗಾಗಿ ಮೀಸಲಿಡಲಾಗಿದೆ. ಆದರೆ ಸ್ತ್ರೀಯರು ಸ್ಪರ್ಧಿಸದಿರಲು ಹಲವು ಕಾರಣಗಳಿರಬಹುದು.

ಸ್ಥಳೀಯ ಸರಕಾರಗಳಲ್ಲಿ ಬಲವಂತರಾಯ ಮೆಹತಾ ಸಮೀತಿ ಪ. ಜಾ ಮತ್ತು ಪ.ಪಂ. ಅವರಿಗೆ ಮೀಸಲಾತಿ ಘೋಷಿಸಿತು. ಅಶೋಕ ಮೆಹತಾ ಸಮಿತಿ ಮಂಡಲ ಪಂಚಾಯತ ವ್ಯವಸ್ಥೆಯಲ್ಲಿ ಸದಸ್ಯರ ಸ್ಥಾನಗಳಲ್ಲಿ ಮಹಿಳೆಯರಿಗಾಗಿ 25% ಮೀಸಲಾತಿಯನ್ನು ಜಾರಿಗೆ ತಂದಿತು.

1993ರ ಪಂಚಾಯತ್ ರಾಜ್ಯ ಅಧಿನಿಯಮ ಮಹಿಳೆ ವಿಮೋಚನೆಯ ಇತಿಹಾಸದಲ್ಲಿ ದಾಖಲೆಯಾಗಿದೆ.

ಸಂವಿಧಾನದ 73 ಮತ್ತು 74ನೇ ತಿದ್ದುಪಡಿಗಳು ಮಹಿಳೆಯರ ಸಬಲೀಕರಣಕ್ಕೆ ವರದಾನವಾಗಿವೆ. ಪಂಚಾಯತ್ ರಾಜ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗಾಗಿ 33% ರ ಮೀಸಲಾತಿಯನ್ನು ಸದಸ್ಯ ಮತ್ತು ಅಧ್ಯಕ್ಷ / ಉಪಾಧ್ಯಕ್ಷರ ಸ್ಥಾನಗಳಿಗೆ ಅನ್ವಯವಾಗುವಂತೆ ಜಾರಿಗೆ ತರಲಾಯಿತು.

2010ರಲ್ಲಿ ಸಂವಿಧಾನಕ್ಕೆ 105ನೇ ತಿದ್ದುಪಡಿಯ ಮೂಲಕ 33%ರ ಮೀಸಲಾತಿಯ ಬದಲಾಗಿ 50% ಮೀಸಲಾತಿ ಜಾರಿಗೆ ತರಲಾಯಿತು. ಕರ್ನಾಟಕ ಸರಕಾರ ಈ ಕಾಯ್ದೆಯನ್ನು ಜಾರಿಗೊಳಿಸಿದ ಮೊದಲ ರಾಜ್ಯವಾಗಿದೆ. ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರಗಳು ಮಹಿಳಾ ಸಬಲೀಕರಣಕ್ಕೆ ಆದ್ಯತೆ ಕೊಟ್ಟಿದ್ದು ಸಂತಸದ ಸಂಗತಿಯಾಗಿದೆ.

* ಉದ್ಯೋಗಸ್ಥ ಮಹಿಳೆಯರಿಗಾಗಿ ವಸತಿ, ಗೃಹ ನಿರ್ಮಾಣಕ್ಕಾಗಿ ಸಹಾಯ ಧನ ಯೋಜನೆ.
* ಸ್ತ್ರೀ–ಶಕ್ತಿ ಯೋಜನೆ
* ಸಾಂತ್ವನ ಯೋಜನೆ
* ಬಾಲಕಿಯರ ವಸತಿ ನಿಲಯ ಯೋಜನೆ.
* ದೇವದಾಸಿ ವಿಧವೆಯರ ಪುನರ್‌ವಿವಾಹ ಸಹಾಯ ಧನ ಯೋಜನೆ.
* ಸಾಮಾಜಿಕ ಪಿಡುಗುಗಳ ನಿವಾರಣಾ ಘಟಕ.

* ಕರ್ನಾಟಕ ಮಹಿಳಾ ಅಭಿವೃದ್ಧಿ ಯೋಜನೆ.
* ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ ಮತ್ತು ಪುರಸ್ಕಾರ
* ಕಾಯ್ದೆ ಪದವೀಧರ ಮಹಿಳೆಯರಿಗಾಗಿ ಸಹಾಯಧನ ಯೋಜನೆ
* ಭಾಗ್ಯಲಕ್ಷ್ಮೀ ಬಾಂಡ್ ಯೋಜನೆ.
* ಉಚಿತ ಪದವಿ ಶಿಕ್ಷಣ ಮತ್ತು ಉನ್ನತ ವ್ಯಾಸಂಗ ಸಹಾಯ ಧನ ಯೋಜನೆ
* ವಿಶೇಷ ಶಿಷ್ಯವೇತನ ಯೋಜನೆಗಳು.

**ಮಹಿಳೆಗಾಗಿ ಸಂವಿಧಾನಾತ್ಮಕ ಕ್ರಮಗಳು**

* 2001ರ ಮಹಿಳೆ ಸಬಲೀಕರಣ ಯೋಜನೆ.
* 1993ರ ಮಹಿಳೆ ಸಮೃದ್ಧಿ ಯೋಜನೆ
* 1993ರ ಮಹಿಳೆ ಸಾಲ ನಿಧಿ ಯೋಜನೆ
* 1987ರ ಉದ್ಯೋಗ ಮತ್ತು ತರಬೇತಿ ಕಾರ್ಯಕ್ರಮ.
* 1961ರ ವರದಕ್ಷಿಣೆ ನಿಷೇಧ ಕಾಯ್ದೆ.
* 1956ರ ಅನೈತಿಕ ಮಾರಾಟ ನಿಷೇಧ ಕಾಯ್ದೆ.
* 1986ರ ಮಹಿಳೆ ಪ್ರತಿನಿಧಿ ಕಾಯ್ದೆ.
* 1987ರ ಸತಿ ನಿಷೇಧ ಕಾಯ್ದೆ.
* 1974ರ ವಿವಾಹಸ್ಥ ಮಹಿಳೆಯರ ಆಸ್ತಿ ಕಾಯ್ದೆ.
* 1923ರ ಉದ್ಯೋಗ ಅನುಕಂಪ ಕಾಯ್ದೆ.
* 1929ರ ಬಾಲ್ಯವಿವಾಹ ಕಾಯ್ದೆ.
* 1937ರ ಮುಸ್ಲಿಂ ವೈಯಕ್ತಿಕ ಮನವಿ ಕಾಯ್ದೆ.
* 1948ರ ರಾಜ್ಯ ಉದ್ಯೋಗಸ್ಥರ ಜೀವ ವಿಮಾ ಕಾಯ್ದೆ.
* 1936ರ ವೇತನ ಕಾಯ್ದೆ.



* 1951ರ ತೋಟಗಾರಿಕಾ ಕಾರ್ಮಿಕರ ಕಾಯ್ದೆ.
* 1954ರ ವಿಶೇಷ ಮದುವೆ ಕಾಯ್ದೆ.
* 1955ರ ಹಿಂದು ಮದುವೆ ಕಾಯ್ದೆ (1986ರಲ್ಲಿ ತಿದ್ದುಪಡಿ)
* 1955ರ ನಾಗರೀಕ ಹಕ್ಕು ರಕ್ಷಣಾ ಕಾಯ್ದೆ.
* 1956ರಲ್ಲಿ ದತ್ತು ನಿರ್ವಹಣಾ ಕಾಯ್ದೆ.
* 1956ರ ಹಿಂದೂ ಅಲ್ಪವಯಸ್ಕರ ಪೋಷಕರ ಕಾಯ್ದೆ.
* 1969ರ ವಿದೇಶಿ ಮದುವೆ ಕಾಯ್ದೆ
* 1969ರ ಭಾರತೀಯ ವರದಕ್ಷಿಣೆ ಶಿಕ್ಷಾ ಕಾಯ್ದೆ.
* 1984ರ ಕುಟುಂಬ ನ್ಯಾಯ ಕಾಯ್ದೆ.
* 1990ರ ಮಹಿಳಾ ಆಯೋಗದ ರಚನಾ ಕಾಯ್ದೆ.
* 2004ರ ಮಾನವ ಹಕ್ಕುಗಳ ಕಾಯ್ದೆ.
* 1986ರ ಮುಸ್ಲಿಂ ಮಹಿಳೆಯರ ಹಕ್ಕು ಮತ್ತು ವರದಕ್ಷಿಣೆಯ ರಕ್ಷಣಾ ಕಾಯ್ದೆ.
* 2006ರ ಗೃಹ ದೌರ್ಜನ್ಯ ನಿಷೇಧ ಕಾಯ್ದೆ.
* 2010ರ ಮಹಿಳೆಯರ ಇಚ್ಛೆವಿರುದ್ಧ ದೌರ್ಜನ್ಯ ಕಾಯ್ದೆ.

ಹೀಗೆ ಭಾರತೀಯ ಸಂವಿಧಾನ ಸಂಸದೀಯ ವಿಧಾನಗಳ ಮೂಲಕ ಹಲವು ಕಾಯ್ದೆ ಮತ್ತು ಯೋಜನೆಗಳನ್ನು ಜಾರಿಗೊಳಿಸಿ ಮಹಿಳೆಯರ ವಿಮೋಚನೆಗೆ ಆಧಾರ ಸ್ತಂಭವಾಗಿದೆ.

**ಉಪ ಸಂಹಾರ**

21ನೇ ಶತಮಾನದ ಮಹಿಳೆ ಸಂವಿಧಾನಬದ್ಧವಾಗಿ ತನ್ನ ಹಕ್ಕು ಸ್ವಾತಂತ್ರ್ಯದ ಮೂಲಕ ಸಮಾನತೆ ಅವಕಾಶಗಳನ್ನು ಪಡೆದುಕೊಂಡು ಸಾಮಾಜಿಕ, ಆರ್ಥಿಕ, ರಾಜಕೀಯ ಶೈಕ್ಷಣಿಕ, ವಿಜ್ಞಾನ–ತಂತ್ರಜ್ಞಾನ ಮುಂತಾದ ಕ್ಷೇತ್ರಗಳಲ್ಲಿ ವಿಶಿಷ್ಟ ಸಾಧನೆಗೈಯುವುದರ ಮೂಲಕ ತಾನೂ ಪುರುಷ ಸಮಾನಳು, ಅಬಲೆ ಅಲ್ಲ ಸಬಲೆ ಮತ್ತು ಪ್ರಬಲೆಯಾಗಿದ್ದೇನೆಂದು ಸಾಬೀತುಪಡಿಸಿದ್ದಾಳೆ.

ಮಹಿಳೆಗೆ ದೊರೆಯಬೇಕಾದ ಸ್ಥಾನಮಾನ ಅವಕಾಶಗಳನ್ನು ಬೆಂಬಲಿಸುತ್ತಿರುವುದರಿಂದ 21ನೇ ಶತಮಾನದಲ್ಲಿ ಮಹಿಳೆ ಸಬಲೆಯಾಗಿದ್ದಾಳೆ. ❑

ಸ್ವಾನುಭವ

# ಆಟೋ ದಕ್ಷತೆ ಹೆಚ್ಚಳದ ಕೈಚಳಕ

ಸಿಬ್ ಸಂಕರ್ ಮಂಡಲ್
ಕನ್ನಡಕ್ಕೆ : ಡಾ॥ ವಿಜಯಲಕ್ಷ್ಮಿ



'ಎಷ್ಟೋ ಪರಿಶ್ರಮಪಟ್ಟರೂ ಸಹ ಕೆಲವೊಮ್ಮೆ ಏನನ್ನೂ ಸಾಧಿಸಲು ಸಾಧ್ಯವಾಗದೆ ಇರಬಹುದು, ಇದು ಎಲ್ಲದಕ್ಕೂ ಅಂತ್ಯವೆಂದು ಪರಿಗಣಿಸದೆ, ಧೃತಿಗೆಡದೆ ಮುನ್ನಡೆಯಬೇಕು ಹಾಗೂ ಸಾಧಿಸಲು ಬಹಳಷ್ಟು ಕಾರ್ಯಗಳಿರುವ ಬಗ್ಗೆ ಗಮನ ಹರಿಸಬೇಕು'

ಸಿಬ್ ಸಂಕರ್ ಮಂಡಲ್(37) ಕೊಕ್ರಜಹರ್‌ನ ಓರ್ವ ಮೆಕಾನಿಕ್. ಪ್ರೀತಿಯಿಂದ ಅವರು ನಾರಾಯಣ ಎಂದೂ ಪ್ರಸಿದ್ಧ.

ಇವನ ತಾತ ಬಡಗಿ ಕೆಲಸಮಾಡುತ್ತಿದ್ದರು, ಇವನ ತಂದೆ ಸಂಗೀತ ವಾದ್ಯಗಳನ್ನು ರಿಪೇರಿ ಮಾಡುತ್ತಿದ್ದರು. ಇವನ ಕುಟುಂಬದಲ್ಲಿ ತಂದೆ ತಾಯಿ ಇಬ್ಬರು ಹಿರಿಯ ಅಣ್ಣಂದಿರು ಹಾಗೂ ಒಬ್ಬ ತಂಗಿ ಇದ್ದರು. ಇವರದು ಧಾರ್ಮಿಕ ಶ್ರದ್ಧೆಯ ಕುಟುಂಬ.

ಬಾಲ್ಯದಿಂದಲೂ ಸಿಬ್ ಸಂಕರ್ ಓದು ಮತ್ತು ಮಾದರಿಗಳನ್ನು ಮಾಡುವುದರಲ್ಲಿ ಆಸಕ್ತಿ ಹೊಂದಿದ್ದರು. ವಿಜ್ಞಾನ ಪ್ರದರ್ಶನಗಳಲ್ಲಿ ಎಂಡ್‌ಟರ್ಬೈನ್, ವಾಟರ್ ಪಂಪ್, ಮೋಟಾರ್ ಸೈಕಲ್ ಇನ್ನಿತರ ಮಾದರಿಗಳನ್ನು ಮಾಡಿ ಬಹುಮಾನಗಳನ್ನು ಪಡೆಯುತ್ತಿದ್ದಾರೆ. ಮನೆಯಲ್ಲಿನ ಹಣಕಾಸಿನ ಮುಗ್ಗಟ್ಟಿನಿಂದ 10ನೇಯ ತರಗತಿಯ ನಂತರ ಓದು ಮುಂದುವರಿಸಲಾಗದಿದ್ದರೂ ವಿಜ್ಞಾನ ಮಾದರಿಗಳನ್ನು ಮಾಡಲು ಮುಂದುವರಿಸಿ ಹೊಟ್ಟೆಪಾಡಿಗಾಗಿ ವಿದ್ಯುತ್, ಕೊಳಾಯಿ ದುರಸ್ತಿ ಕೆಲಸಗಳನ್ನು ಮಾಡುತ್ತಿದ್ದರು. ನಂತರದ ದಿನಗಳಲ್ಲಿ ಸಹೋದರನೊಡನೆ ಸ್ವಂತ ವರ್ಕ್ ಶಾಪ್ ಪ್ರಾರಂಭಿಸಿ ಸಣ್ಣ ಪುಟ್ಟ ರಿಪೇರಿ ಕೆಲಸಗಳನ್ನು ಮಾಡುತ್ತಿದ್ದರು. ತಾನು ಮಾಡುತ್ತಿದ್ದ ಮಾದರಿಗಳನ್ನು ಬೋಡೊ ಸಾಹಿತ್ಯ ಸಭಾ ಪ್ರದರ್ಶನ, ಕೃಷಿ ವಿಭಾಗ ಪ್ರದರ್ಶಿನಿ ಇನ್ನಿತರ ಕಡೆ ಪ್ರದರ್ಶಿಸುತ್ತಿದ್ದರು.

## ರಚನಾಕ್ರಮ

ಬಾಲ್ಯದಿಂದಲೂ ಸಿಬ್ ಸಂಕರ್ ಕಡಿಮೆ ಇಂಧನ ನಿರ್ವಹಣೆ ಮತ್ತು ಹೆಚ್ಚು ದೂರ ಚಲಿಸುವ ಬೈಕ್ ಮಾಡಲು ಇಚ್ಛಿಸುತ್ತಿದ್ದರು. ಇಂಥಹ ಮಾದರಿಯ ಬೈಕ್ ಸಿದ್ಧಪಡಿಸಲು ಬಹಳ ಶ್ರಮ ಪಟ್ಟರು ಅವರ ಪ್ರಯತ್ನ ಅವರನ್ನು ನಿರಾಸೆಗೊಳಿಸಿತ್ತು. ಅವರಲ್ಲಿನ ಅತಿಯಾದ ಆಸಕ್ತಿ ಪ್ರೇರೆಪಿಸಿದರೆ ತಾಂತ್ರಿಕ ಅಜ್ಞಾನ ಹಿನ್ನೆಡೆಸುತ್ತಿತ್ತು.

ಪ್ರಯತ್ನಗಳು ವಿಫಲವಾದಾಗ, ಎಲ್ಲವನ್ನು ಮತ್ತೆ ಪುನಃ ಪ್ರಯತ್ನ ಮಾಡಬೇಕಾಗಿತ್ತು. ಬೈಕ್‌ಗಳನ್ನು ಬಿಡಿ ಬಿಡಿಗೊಳಿಸಿರುವ ವರ್ಕ–ಶಾಪ್‌ಗಳಿಗೆ ಭೇಟಿ ನೀಡಲು ಶುರುಮಾಡಿದರು. ಎಲ್ಲವನ್ನು ವಿಶ್ಲೇಷಿಸುತ್ತಾ, ಬೈಕ್‌ಗಳ ಇಂಜಿನ್ ನಡುವಿನ ಅಂತರ, ಅದರ ಕಾರ್ಯ ಕ್ಷಮತೆಯನ್ನು ಕುಗ್ಗಿಸುವುದನ್ನು ಗಮನಿಸಿದರು.


ಹಲವಾರು ಬಾರಿ ಬದಲಾವಣೆಗಳನ್ನು ಮಾಡಿ ವ್ಯಾಲ್ವ್ ಸಿಸ್ಟಂ ಮಾರ್ಪಡಿನಿಂದಾಗಿ ಮೈಲೇಜ್‌ನ್ನು ಪ್ರತಿ ಲೀ/65 ಕಿ.ಮೀ.ನಂತೆ ಹೆಚ್ಚಿಸುವಲ್ಲಿ ಸಫಲರಾದರು. ಇಂಜಿನ್ ಕೆಲಸ ಮಾಡುವ, ಮುನ್ನವೇ ಬಿಸಿಮಾಡಿದ ಇಂಧನವು ಇಂಜಿನ್ನಲ್ಲಿ ಉತ್ತಮವಾಗಿ ದಹಿಸುವುದನ್ನು ಅರಿತರು.

ಒಂದು ದಿನ, ಟು ಸ್ಟ್ರೋಕ್ ನಡುವಿನ ಅಂತರಿಕೆಯ ವಿಷಯವನ್ನು ಓದಿದರು, ಆಟೋರಿಕ್ಷಾ ಜನರಿಗೆ ಕೈಗೆಟುಕುವ ಪ್ರಯಾಣ ಮಾಧ್ಯಮವೆಂಬ ವಿಷಯವನ್ನು ಟಿವಿ ಕಾರ್ಯಕ್ರಮದಿಂದ ತಿಳಿದರು. ಈ ಕಲ್ಪನೆ ಅವರಲ್ಲಿ ತನ್ನ ಯೋಜನೆಯನ್ನು ಆಟೋರಿಕ್ಷಾದಲ್ಲಿ ಅಳವಡಿಸಲು ಪ್ರೇರೇಪಿಸಿತು. ಈ ನಿಟ್ಟಿನಲ್ಲಿ ಅವರು ಹಲವಾರು ತಿಂಗಳುಗಳ ಕಾಲ ಪ್ರಯತ್ನವನ್ನು ಮುಂದುವರಿಸಿದರು. ಅಂತಿಮವಾಗಿ, ಶೇ 30% ಮೈಲೇಜ್ ಹೆಚ್ಚಿಸುವಲ್ಲಿ ಯಶಸ್ವಿಯಾದರು. ಈ ಆಟೋರಿಕ್ಷಾ ಕಳೆದ ಮೂರು ವರ್ಷಗಳಿಂದ ಯಶಸ್ವಿಯಾಗಿ ಚಲಿಸುತ್ತಿದೆ.

ಹವ್ಯಾಸಿ ಲೇಖಕರು.

ಸಿಬ್ ಸಂಕರ್ ತಮ್ಮ ವೃತ್ತಿ ಹಾಗೂ ಜೀವನದ ಪ್ರತಿಬಿಂಬವನ್ನು ಸ್ಮರಿಸುತ್ತಾ "ಕೆಲವೊಮ್ಮೆ ಲೇತ್ ಮಶೀನ್, ಕಟಿಂಗ್ ಯಂತ್ರ ಮುಂತಾದವುಗಳು ಅಗತ್ಯವಿದ್ದ ಸಂದರ್ಭಗಳಲ್ಲಿ ಹೊಂದಿಸಿಕೊಳ್ಳಲು ಸಾಧ್ಯವಾಗದ ಆರ್ಥಿಕ ಪರಿಸ್ಥಿತಿಯ ಬಗ್ಗೆ, ನಿರಾಸೆಗೊಂಡು ಕೆಲಸ ನಿಲ್ಲಿಸಿದ್ದು, ಆದರೆ ತನ್ನೊಳಗಿನ ಪ್ರೇರಣ ಶಕ್ತಿಯಿಂದ ಕಾರ್ಯ ಮುಂದುವರಿಸಿದ್ದು ಇನ್ನೂ ಕೆಲವೊಮ್ಮೆ ಜೀವನದಲ್ಲಿ ಹಲವಾರು ಪ್ರಯತ್ನಗಳ ನಂತರವು ಹೆಚ್ಚಿನದನ್ನು ಸಾಧಿಸದೆ ಇರುವ ವಿಷಯವನ್ನು" ಹಂಚಿಕೊಳ್ಳುತ್ತಾರೆ.

ತನ್ನ ಕುಟುಂಬವು ತನ್ನ ಎಲ್ಲ ನಿರ್ಧಾರಗಳನ್ನು ಉತ್ತೇಜಿಸಿ, ಪ್ರಯತ್ನಗಳಿಗೆ ಕೈಜೋಡಿಸಿರುವ ಬಗ್ಗೆ ಸಮಾಧಾನ ಪಡುತ್ತಾರೆ. ಅವರಿಗೆ ಹೆಚ್ಚು ಗೆಳೆಯರಿಲ್ಲ. ಕುಟುಂಬವನ್ನು ಹೊರತು ಪಡಿಸಿ ರಾಷ್ಟ್ರೀಯ ಆವಿಷ್ಕಾರ ಪ್ರತಿಷ್ಠಾನ (ಎನ್ಐಎಫ್) ನೀಡಿರುವ ಸಹಾಯವನ್ನು ಸ್ಮರಿಸುತ್ತಾರೆ.



### ಮಾರ್ಪಡಿಸಿರುವ ಆಟೋ ಇಂಜಿನ್

ಮಾರ್ಪಡಿಸಿರುವ ಆಟೋ ಇಂಜಿನ್, ಒಂದು ಹೊಸ ಆವಿಷ್ಕಾರವಾಗಿದೆ. ಒಂದು ಅಂಶ ಎಕ್ಸಾಸ್ಟ್ ಗ್ಯಾಸ್‌ಅನ್ನು ಒಳಬರುವ ಗಾಳಿಯನ್ನು ಬಿಸಿ ಮಾಡಲು ಇನ್ನುಳಿದ ಅಂಶವು ಗಾಳಿ ಮತ್ತು ಇಂಧನ ಮಿಶ್ರಣ ಇಂಜಿನ್ ಪ್ರವೇಶಿಸುವ ಮುನ್ನವೇ ಬಿಸಿ ಮಾಡಲು ಉಪಯೋಗಿಸಲಾಗುತ್ತದೆ. ಇದರಿಂದ ಇಂಧನವು ಸಂಪೂರ್ಣವಾಗಿ ದಹಿಸಿ, ಇಂಧನ ಕ್ಷಮತೆಯನ್ನು ಹೆಚ್ಚಿಸುತ್ತದೆ.

ಹೀಟ್ ಎಕ್ಸ್‌ಚೆಂಜರ್ ಮೇಲ್ಮೈಯು ಸೈಲೆನ್ಸರ್ ಪೈಪ್ ಹೊಂದಿಕೊಂಡಿದ್ದು, ಇದರ ಮೂಲಕ ಹಾದು ಒಳಬರುವ ಗಾಳಿಯನ್ನು ಎಕ್ಸಾಸ್ಟ್ ಗ್ಯಾಸ್‌ನ ಉಷ್ಣತೆಯು ಬೆಚ್ಚಗೆ ಮಾಡುತ್ತದೆ, ಇನ್ನುಳಿದ ಎಕ್ಸಾಸ್ಟ್ ಗ್ಯಾಸ್‌ನ್ನು ಕರ್ಬಟರ್ ಕಡೆಗೆ ರವಾನಿಸಿ ಗಾಳಿ ಮತ್ತು ಇಂಧನ ಮಿಶ್ರಣವನ್ನು ಬೆಚ್ಚಗಾಗಿಸಲು ಬಳಸಲಾಗುತ್ತದೆ. ಅಲ್ಲದೆ, ಗಾಳಿ ಇಂಧನ ಮಿಶ್ರಣವನ್ನು ಹೊರಬಿಡದಂತೆ, ಕೊಳವೆ ಕವಾಟವನ್ನು ಸಹ ಮಾರ್ಪಟುಗೊಳಿಸಲಾಗಿದೆ.

ಇಂಥಹ ಕ್ರಮದಿಂದ, ಅಭಿವೃದ್ಧಿಗೊಳಿಸಲಾದ ಸಂಪೂರ್ಣ ಇಂಧನ ದಹನದಿಂದ ಪರಿಸರ ಕಲುಷಿತವನ್ನು ಕಡಿಮೆಮಾಡಬಹುದಾಗಿದೆ. ಎಕ್ಸಾಸ್ಟ್ ಗ್ಯಾಸ್ ತಾಪಮಾನ ಕಡಿಮೆ ಇರುವುದರಿಂದ, ಪರಿಸರದ ತಾಪಮಾನ ಕೂಡ ಹೆಚ್ಚಾಗುವುದನ್ನು ತಡೆಗಟ್ಟುತ್ತದೆ. ಈ ಪದ್ಧತಿಯನ್ನು ಐಐಟಿ ಗುವಾಹತಿಯಲ್ಲಿ ಪರೀಕ್ಷಿಸಲಾಗಿ ಇಂಧನ ಕ್ಷಮತೆ ಬೇರೆ ಪರ್ಯಾಯ ಇಂಜಿನ್‌ಗಳಿಗೆ ಹೋಲಿಸಿದಲ್ಲಿ ಶೇ35% ಹೆಚ್ಚಾಗಿರುವ ಬಗ್ಗೆ ವರದಿಯಾಗಿದೆ.

ಈ ಹೊಸ ಪರಿಕಲ್ಪನೆ ಎಲ್ಲ ಮೂರು ಚಕ್ರ ವಾಹನಗಳಿಗೂ ಅಳವಡಿಸಬಹುದಾಗಿ ವರದಿಯಾಗಿದೆ. ಎನ್ಐಎಫ್‌ನ ಸಹಯೋಗದೊಂದಿಗೆ ಮೂಲ ಮಾದರಿಯನ್ನು ಅಭಿವೃದ್ಧಿಗೊಳಿಸಿ ಐಐಟಿ ಗುವಾಹಟಿ ತಜ್ಞರಿಂದ ಪರೀಕ್ಷಿಸಲಾಗುತ್ತಿದೆ.

ಈ ಪದ್ಧತಿಯನ್ನು ಹೊರತು ಪಡಿಸಿ, ಎರಡು ಹಂತದಲ್ಲಿ ಗಾಳಿಯ ತಾಪಮಾನವನ್ನು ಹೆಚ್ಚಿಸುವಲ್ಲಿ ಬೇರೆ ಕ್ರಮಗಳು ವಿಫಲವಾಗಿ ಕೇವಲ ದಹನ ಕವಾಟದಲ್ಲಿ ಇಂಧನ ದಹಿಸುವಲ್ಲಿ ಯಶಸ್ವಿಯಾಗಿದ್ದವು.

ಆದುದ್ದರಿಂದ ಎನ್ಐಎಫ್‌ಎಫ್ ಹೊಸತನದ ಪರಿಕಲ್ಪನೆಯನ್ನು ಪರಿಗಣಿಸಿ, ಸಿಬ್ ಸಂಕರ್ ಮಂಡಲ್ ಹೆಸರಿನಲ್ಲಿ ಪೇಟೆಂಟ್(ಹಕ್ಕು) (1811/KOL/2008) ಪಡೆಯಲು ಪ್ರಸ್ತಾವನೆ ಸಲ್ಲಿಸಿದೆ.

ಪ್ರಸ್ತುತ ಸಿಬ್ ಸಂಕರ್ ಮಂಡಲ್ ಆಟೋರಿಕ್ಷಾದಲ್ಲಿ ಈ ಪದ್ಧತಿ ಅಳವಡಿಸಿ, ಇದರ ಕಾರ್ಯ ಕ್ಷಮತೆಯಿಂದ ತೃಪ್ತರಾಗಿದ್ದಾರೆ. ಹಿಂದೆ ಎನ್ಐಎಫ್ ಸಿಬ್ ಸಂಕರ್ ಮಂಡಲ್ ರವರನ್ನು ಸತ್ಕರಿಸಿ ಮುಂಬೈನ ಟಾಟಾ ಮೋಟಾರ್ ಹಾಗೂ ಲಕ್ನೊ ಭೇಟಿ ನೀಡಿ ಉಪನ್ಯಾಸಗಳನ್ನು ನೀಡಲು ಅನುವುಮಾಡಿತ್ತು; ಎನ್ಐಎಫ್ ಮೂಲ ಮಾದರಿಯನ್ನು ಅಭಿವೃದ್ಧಿ ಪಡಿಸಿ ಐಐಟಿ ಗುವಾಹತಿಯಲ್ಲಿ ಪರೀಕ್ಷಿಸಲು ಸಹ ಆರ್ಥಿಕ ನೆರವು ನೀಡಿತ್ತು.

### ಮುಂಬರುವ ದಿನಗಳಲ್ಲಿ

ಬಾಲ್ಯದಿಂದಲು ಸಿಬ್ ಸಂಕರ್ ರವರು ಉತ್ತಮ ಆಟೋಮೊಬೈಲ್ ಸಂಸ್ಥೆಯ ಸಂಶೋಧನ ವಿಭಾಗಲ್ಲಿ ಕಾರ್ಯನಿರ್ವಹಿಸುವ ಬಗ್ಗೆ ಕನಸು ಕಂಡಿದ್ದರು. ಆದರೆ ಅಲ್ಪ ವಿದ್ಯಾಭ್ಯಾಸ ಹಾಗು ಅಲ್ಪ ತಾಂತ್ರಿಕ ಪರಿಣತೆಯ ಅರಿವು ಅವರಲ್ಲಿದೆ.

ಪ್ರಸ್ತುತ ಸ್ಪೋರ್ಟ್ಸ್ ಕಾರ್ ಅಭಿವೃದ್ಧಿ ಪಡಿಸುತ್ತಿದ್ದಾರೆ ಹಾಗೂ ಮಾರುತಿ ಫೋರ್ ಸ್ಟ್ರೋಕ್ ಇಂಜಿನ್ ಇಂಧನ ಕ್ಷಮತೆ ಹೆಚ್ಚಿಸುವಲ್ಲಿ ಪ್ರಯತ್ನಿಸುತ್ತಿದ್ದಾರೆ.

ಸಿಬ್ ಸಂಕರ್ ತನ್ನ ಸಹವರ್ತಿಗಳಿಗೆ ಕಿವಿ ಮಾತು ಹೇಳುತ್ತಾ 'ಎಷ್ಟೇ ಪರಿಶ್ರಮಪಟ್ಟರೂ ಸಹ ಕೆಲವೊಮ್ಮೆ ಏನನ್ನೂ ಸಾಧಿಸಲು ಸಾಧ್ಯವಾಗದೆ ಇರಬಹುದು, ಇದು ಎಲ್ಲದಕ್ಕೂ ಅಂತ್ಯವೆಂದು ಪರಿಗಣಿಸದೆ, ಧೃತಿಗೆಡದೆ ಮುನ್ನೆಡೆಯಬೇಕು ಹಾಗೂ ಸಾಧಿಸಲು ಬಹಳಷ್ಟು ಕಾರ್ಯಗಳಿರುವ ಬಗ್ಗೆ ಗಮನ ಹರಿಸಬೇಕು' ಎಂದು ಹೇಳುತ್ತಾರೆ. ❑

# ದೋಣಿ ದವಾಖಾನೆ : ಭರವಸೆಯ ಆಶಾಕಿರಣ

ಅಜಿರ ಪರ್ವೀನ್ ರಹಮಾನ್

ಕನ್ನಡಕ್ಕೆ : ಮಧುಶ್ರೀ ಬಿ.



ಮೊದಲು ಆರೋಗ್ಯ ಸೌಕರ್ಯಗಳು ಹಳ್ಳಿಗಳ ಜನರಿಗೆ ಸಿಗುವುದೇ ಕನಸಿನ ಮಾತಾಗಿತ್ತು. ಈಗ ದೋಣಿ ದವಾಖಾನೆಗಳ ಮೂಲಕ ಉತ್ತಮ ಜೀವನ ನಡೆಸಬಹುದೆಂಬ ಭರವಸೆ ಸಿಕ್ಕಿದೆ.

ದೋಣಿಗಳು ಅಸ್ಸಾಂನ ನದಿ ದ್ವೀಪಗಳಲ್ಲಿ ವಾಸಿಸುವ ಜನರ ದೈನಂದಿನ ಜೀವನದ ಅವಿಭಾಜ್ಯ ಅಂಗ. ದ್ವೀಪಗಳಿಂದ ಮುಖ್ಯಭೂಭಾಗಕ್ಕೆ ಇರುವ ಏಕೈಕ ಸಂಪರ್ಕ ಸಾಧನವೆಂದರೆ ದೋಣಿ. ಶಿಕ್ಷಣ ಹಾಗೂ ಅರೋಗ್ಯದಂತಹ ಅಗತ್ಯಗಳಿಗೂ ಸಹ ಈ ಜನರು ದೋಣಿಗಳನ್ನೇ ಅವಲಂಬಿಸಿದ್ದಾರೆ. ಹೀಗಿದ್ದರೂ ಕೆಲವು ವಾರಗಳಿಗೊಮ್ಮೆ ತೀರದಲ್ಲಿ ಬಂದು ನಿಲ್ಲುವ ಒಂದು ವಿಶೇಷ ದೋಣಿಯನ್ನು ಕಂಡಾಗ ದ್ವೀಪವಾಸಿಗಳ ಉತ್ಸಾಹ ಹೇಳತೀರದು. ಅದುವೇ "ದೋಣಿ ದವಾಖಾನೆ". ವೈದ್ಯರು, ಸಹಾಯಕರು, ಔಷಧಿಗಳು, ಅಷ್ಟೇ ಏಕೆ ಪ್ರಯೋಗಾಲಯವನ್ನೂ ಸಹ ಜನರ ಬಳಿಯೇ ಹೊತ್ತು ತಂದು ಅವರ ವೈದ್ಯಕೀಯ ಅವಶ್ಯಕತೆಗಳನ್ನು ಪೂರೈಸುವ ಈ ದೋಣಿ ದವಾಖಾನೆ ದ್ವೀಪವಾಸಿಗಳ ಭರವಸೆಯ ಆಶಾಕಿರಣ. ಇಂತಹ ವಿಶೇಷ ದೋಣಿಯನ್ನು ದ್ವೀಪವಾಸಿಗಳ "ಭರವಸೆಯ ದೋಣಿ" ಎಂದು ಕರೆಯುವುದರಲ್ಲಿ ಉತ್ಪ್ರೇಕ್ಷೆಯಿಲ್ಲ.

ಸರಿಯಾದ ವೈದ್ಯಕೀಯ ಸೌಲಭ್ಯಗಳು, ಸಂಪರ್ಕ ಸಾಧನಗಳು ಇಲ್ಲದೇ ದ್ವೀಪಗಳಲ್ಲಿ ರೋಗ ರುಜಿನಗಳು ಬಹಳ ಹೆಚ್ಚಾಗಿದ್ದವು. ಮಳೆಗಾಲದಲ್ಲಿ ಪ್ರವಾಹ ಹೆಚ್ಚಾಗಿ ದ್ವೀಪಗಳ ಜನರು ಪಟ್ಟ ಕಷ್ಟ ಅಷ್ಟಿಷ್ಟಲ್ಲ. ಮಹಿಳೆಯರು ಮತ್ತು ಮಕ್ಕಳಿಗಂತೂ ಆಸ್ಪತ್ರೆ ತಲುಪುವುದು ಬಹಳ ಕಷ್ಟವಾಗುತ್ತಿತ್ತು. ಹೀಗೆ ವೈದ್ಯಕೀಯ ಸೇವೆಗಳಿಂದ ವಂಚಿತರಾದ ಜನರಿಗೆ ವರದಾನವಾಗಿ ಬಂದಿದ್ದು 2005 ರಲ್ಲಿ ಆರಂಭಗೊಂಡ "ಆಶಾ" (ಅಸ್ಸಾಂ ಭಾಷೆಯಲ್ಲಿ ಆಖಾ) ಎಂಬ ಹೆಸರಿನ ದೋಣಿ. ಸೆಂಟರ್ ಫಾರ್ ನಾರ್ತ್ ಈಸ್ಟ್ ಸ್ಟಡೀಸ್ ಮತ್ತು ಪಾಲಿಸಿ ರಿಸರ್ಚ್ ಸಂಸ್ಥೆಯಿಂದ ಮೊದಲ ಬಾರಿಗೆ ಅಸ್ಸಾಂನ ದಿಬ್ರುಗಢ್ ಜಿಲ್ಲೆಯಲ್ಲಿ ಆರಂಭಗೊಂಡ ಈ ದೋಣಿ ದವಾಖಾನೆಯು "ಜನರು ಆಸ್ಪತ್ರೆಗೆ ಬರಲಾಗದಿದ್ದರೆ ಏನಾಯಿತು, ಆಸ್ಪತ್ರೆಯೇ ಜನರ ಬಳಿಗೆ ಬರಬಹುದು" ಎಂಬ ಕಲ್ಪನೆಗೆ ರೂಪ ಕೊಟ್ಟಿತು. ದೋಣಿಯಲ್ಲಿ ದ್ವೀಪಗಳಿಗೆ ಬರುವ ಈ ಆಸ್ಪತ್ರೆಯ ಯಶಸ್ಸು ರಾಷ್ಟ್ರೀಯ ಗ್ರಾಮೀಣ ಆರೋಗ್ಯ ದೀಕ್ಷಾ ದಳ ಮತ್ತು ಯುನಿಸೆಫ್ ಸಂಸ್ಥೆಗಳ ಗಮನ ಸೆಳೆಯಿತು. ಈ ಸಂಸ್ಥೆಗಳ ನೆರವಿನಿಂದ ಯೋಜನೆಯು ಸಾರ್ವಜನಿಕ ಖಾಸಗಿ ಸಹಭಾಗಿತ್ವ ಪಡೆದು ಅಸ್ಸಾಂನ 13 ಜಿಲ್ಲೆಗಳಿಗೆ ವಿಸ್ತಾರಗೊಂಡಿತು.

ಮೊದಮೊದಲು ಯೋಜನೆಯ ಉದ್ದೇಶ ಅರಿಯದ ಜನರು ಇಡೀ ಯೋಜನೆಯನ್ನು ಅನುಮಾನದ ದೃಷ್ಟಿಯಿಂದಲೇ ನೋಡಿದರು. ಆದರೆ ದೋಣಿ ದವಾಖಾನೆಯ ಕಾರ್ಯವೈಖರಿ ಜನರ ಮನೋಭಾವವನ್ನು ಬದಲಾಯಿಸಿತು. ಗುವಾಹತಿಯಿಂದ ಸುಮಾರು 70 ಕಿಲೋಮೀಟರ್ ದೂರದಲ್ಲಿರುವ ನಲ್ಬರಿ ಜಿಲ್ಲೆಯ ಬಲೆಸ್ವರ್ ಸಪೋರಿ ವಾಸಿಯಾದ ಅಮಿಯಾ ಬೇಗಂ ಹೇಳುತ್ತಾರೆ "ಆರಂಭದಲ್ಲಿ ದೋಣಿ ದವಾಖಾನೆ ಬಂದಾಗ ಅದರ ಬಗ್ಗೆ ಕುತೂಹಲವಿತ್ತು ಆದರೆ ಅದರ ಬಗ್ಗೆ ಅಷ್ಟು ನಂಬಿಕೆಯಿರಲಿಲ್ಲ. ಹಿರಿಯರ ಅಭಿಪ್ರಾಯದಲ್ಲಿ ಅದು ತಾತ್ಕಾಲಿಕ ಮತ್ತು ನಿಷ್ಪ್ರಯೋಜಕ ಯೋಜನೆಯಾಗಿತ್ತು."

ಆದರೆ ದೋಣಿ ದವಾಖಾನೆಗಳು ಔಷಧಿಗಳನ್ನು ಹೊತ್ತು ತರುವ ಕಾಯಕವನ್ನು

ಹವ್ಯಾಸಿ ಪತ್ರಕರ್ತರು.

ನಿಲ್ಲಿಸಲಿಲ್ಲ. ಅಲ್ಲಿಗೆ ಹೋದ ಜನರ ಖಾಯಿಲೆಗಳನ್ನು ಗುಣಪಡಿಸಲಾಗುತಿತ್ತು. ಇದರಿಂದ ನಿಧಾನವಾಗಿ ಜನರಲ್ಲಿ ನಂಬಿಕೆ ಬೆಳೆಯಿತು. ಈಗ ದೋಣಿ ದವಾಖಾನೆ ದ್ವೀಪಕ್ಕೆ ಬಂದೊಡನೆ ಜನರು ಸರದಿ ಸಾಲಿನಲ್ಲಿ ನಿಲ್ಲಲು ನಾ ಮುಂದು ತಾ ಮುಂದು ಎಂದು ಓಡಿ ಹೋಗುತ್ತಾರೆ" ಎಂದು ಮುಗುಳ್ನಗುತ್ತಾರೆ, ಮೂರು ಮಕ್ಕಳ ತಾಯಿಯಾದ 25 ವರ್ಷದ ಅಮಿಯಾ ಬೇಗಂ. ಅಮಿಯಾ ಅವರ ಸ್ನೇಹಿತೆ ಶಮಾ ಹೇಳುತ್ತಾರೆ "ಪುರುಷ ವೈದ್ಯರಿಂದ ಚಿಕಿತ್ಸೆ ಪಡೆಯಲು ಗರ್ಭಿಣಿ ಸ್ತ್ರೀಯರು ಹಿಂಜರಿಯುತ್ತಿದ್ದರು. ಆದರೆ ವೈದ್ಯರು ಹಾಗೂ ದಾದಿಯರ ಕಾರ್ಯಬದ್ಧತೆ ಮತ್ತು ಅವರು ಜನರಿಗೆ ತಿಳಿಹೇಳುವ ರೀತಿಯನ್ನು ನೋಡಿ ಸಂಕೋಚದ ಪರದೆ ಸರಿಯಿತು. ಎಲ್ಲಕ್ಕಿಂತ ಹೆಚ್ಚಾಗಿ, ಈಗ ನಾವು ತಪ್ಪದೇ ತಪಾಸಣೆಗೊಳಗಾಗಿ ಕಾಯಿಲೆಗಳನ್ನು ಗುಣಪಡಿಸಿಕೊಳ್ಳುತ್ತೇವೆ. ಔಷಧಿಗಳನ್ನು ಉಚಿತವಾಗಿ ನೀಡಲಾಗುತ್ತದೆ. ಇಲ್ಲದಿದ್ದರೆ ಸಮೀಪದ ಆಸ್ಪತ್ರೆಗೆ ದೋಣಿಯಲ್ಲಿ ಹೋಗಲು ಹತ್ತು ರೂಪಾಯಿ ಖರ್ಚು ಮಾಡಬೇಕು. ನಾವೆಲ್ಲಾ ಬಡವರು. ತೀರಾ ತುರ್ತು ಪರಿಸ್ಥಿತಿ ಇಲ್ಲದ ಹೊರತು ಆಸ್ಪತ್ರೆಗೆ ಹೋಗುವುದೇ ಇಲ್ಲ."

ದೋಣಿ ದವಾಖಾನೆಯು ಬಂದೊಡನೆ ವೈದ್ಯರು ದ್ವೀಪಗಳಲ್ಲಿರುವ ಹಳ್ಳಿಗಳಲ್ಲಿ ಆರೋಗ್ಯ ಶಿಬಿರಗಳನ್ನು ಆಯೋಜಿಸುತ್ತಾರೆ. ಇದರ ಬಗ್ಗೆ ಮಾಹಿತಿಯು ಆಶಾ ಕಾರ್ಯಕರ್ತೆಯರ ಮುಖಾಂತರ ಹಳ್ಳಿಗೆಲ್ಲಾ ತಿಳಿಯುತ್ತದೆ. ಸಾಮಾನ್ಯ ಆರೋಗ್ಯ ತಪಾಸಣೆಯು ಶಿಬಿರದಲ್ಲೇ ನಡೆಯುತ್ತದಾದರೂ, ಅವಶ್ಯಕತೆಯುಂಟಾದರೆ ಪರಿಣಿತ ವೈದ್ಯರಲ್ಲಿಗೆ ರೋಗಿಗಳನ್ನು ಕಳಿಸಿಕೊಡಲಾಗುತ್ತದೆ. ತಾಯಿ ಹಾಗೂ ಮಕ್ಕಳ ಆರೋಗ್ಯದ ಕಡೆ ವಿಶೇಷ ಗಮನ ಹರಿಸಲಾಗುತ್ತದೆ. ದೋಣಿ ದವಾಖಾನೆಗಳಲ್ಲಿ ಕೆಲಸ ಮಾಡುವ ನೌಕರರ ಪ್ರಕಾರ ಲಸಿಕೆಗಳನ್ನು ಹಾಕುವ ದಿನಾಂಕಗಳಿಗೆ ಸರಿಹೊಂದುವಂತೆ ದೋಣಿ ದವಾಖಾನೆಯು ದ್ವೀಪಗಳಿಗೆ ಭೇಟಿ ನೀಡುವ ವ್ಯವಸ್ಥೆ ಮಾಡಲಾಗುತ್ತದೆ.

ರಾಷ್ಟ್ರೀಯ ಗ್ರಾಮೀಣ ಆರೋಗ್ಯ ದೀಕ್ಷಾದಳದ ದಾಖಲೆಗಳ ಪ್ರಕಾರ, 2008 ರಿಂದ ಇಲ್ಲಿಯವರೆಗೂ ದೋಣಿ ದವಾಖಾನೆಗಳು 13316 ಆರೋಗ್ಯ ಶಿಬಿರಗಳನ್ನು ಆಯೋಜಿಸಿವೆ. ಹಳ್ಳಿಯ ಜನರಿಗೆ ಸಾಮಾನ್ಯ ಔಷಧೋಪಚಾರ ಮಾಡುವ ಜೊತೆಗೆ 60,085 ಗರ್ಭಿಣಿ ಸ್ತ್ರೀಯರಿಗೆ ಪ್ರಸವ ಪೂರ್ವ ಆರೈಕೆ, 15,694 ಸ್ತ್ರೀಯರಿಗೆ ಪ್ರಸವದ ನಂತರದ ಆರೈಕೆ ಹಾಗೂ 123,342 ಮಕ್ಕಳಿಗೆ ಲಸಿಕೆಗಳನ್ನು ನೀಡಲಾಗಿದೆ.



ಮಾಜೂಲಿ ಎಂಬುದು ಬ್ರಹ್ಮಪುತ್ರಾ ನದಿಯಿಂದ ಸುತ್ತುವರಿದ ಅತಿ ದೊಡ್ಡ ದ್ವೀಪ. ಇಲ್ಲಿ ಬೇರೆ ಹಳ್ಳಿಗಳಲ್ಲಿ ಇರುವಂತೆ ಸಮುದಾಯ ಆರೋಗ್ಯ ಕೇಂದ್ರದ ವ್ಯವಸ್ಥೆಯೂ ಇಲ್ಲ. ಇಲ್ಲಿನ ಜನರು ದೋಣಿಯಲ್ಲಿ ದ್ವೀಪಕ್ಕೆ ಬರುವ ಆಸ್ಪತ್ರೆಗಾಗಿ ಕಾತುರದಿಂದ ಕಾಯುತ್ತಾರೆ.

ಮಾಜೂಲಿ ದ್ವೀಪದ ಸಮುಗುರಿ ಗ್ರಾಮದ ಡೆಬೋಶ್ರೀ ದಾಸ್ ಹೇಳುವಂತೆ ಹತ್ತಿರದ ಉಪ ಆರೋಗ್ಯ ಕೇಂದ್ರಕ್ಕೆ ಹೋಗಬೇಕೆಂದರೆ ನಾಲ್ಕು ಕಿಲೋಮೀಟರ್ ನದಿಯಲ್ಲಿ ಪ್ರಯಾಣ ಮಾಡಬೇಕು. ಸುತ್ತಲಿನ 15 ಹಳ್ಳಿಗಳಿಗೆ ಲಭ್ಯವಿರುವ ಏಕೈಕ ಆರೋಗ್ಯ ಕೇಂದ್ರವೆಂದರೆ ಇದೇ. ಅದರಲ್ಲಿ 14 ಹಳ್ಳಿಗಳು ನದಿಯ ಇನ್ನೊಂದು ಬದಿಯಲ್ಲಿವೆ.

ಇಂತಹ ಪರಿಸ್ಥಿತಿಯಲ್ಲಿ ದೋಣಿ ದವಾಖಾನೆಗಳು ಹಳ್ಳಿಗಳ ಸಮೀಪವೇ ಬರುವುದರಿಂದ ಜನರಿಗೆ ಬಹಳ ಅನುಕೂಲಕರವಾಗಿದೆ. ವಿಶೇಷವಾಗಿ ಮಳೆಗಾಲದಲ್ಲಿ ನದಿಯ ನೀರಿನ ಮಟ್ಟ ಹೆಚ್ಚಾದಾಗ ದೋಣಿ ದವಾಖಾನೆಗಳು ದ್ವೀಪದ ಜನರಿಗೆ ವರದಾನವಾಗಿ ಪರಿಣಮಿಸುತ್ತವೆ.

ಜೋರ್ಹಾಟ್ ಜಿಲ್ಲೆಯಲ್ಲಿ ದೋಣಿ ದವಾಖಾನೆಯ ಜವಾಬ್ದಾರಿ ಹೊತ್ತಿರುವ ಸೆಂಟರ್ ಫಾರ್ ನಾರ್ತ್ ಈಸ್ಟ್ ಸ್ಟಡೀಸ್ ಮತ್ತು ಪಾಲಿಸಿ ರಿಸರ್ಚ್ ಸಂಸ್ಥೆಯ ರಿತುರೇಖಾ ಬರೂಹ ಹೇಳುತ್ತಾರೆ "ತಂಡವು ಹೆರಿಗೆಯ ಸಮಯದಲ್ಲಿಯೂ ಹಳ್ಳಿಗರಿಗೆ ತನ್ನ ನೆರವು ನೀಡುತ್ತದೆ. ಸಪೋರಿ ದ್ವೀಪಗಳೊಂದಿಗೆ ಸಂಪರ್ಕ ಸಾಧಿಸುವುದು ತುಂಬಾ ಕಷ್ಟದ ಕೆಲಸ. ಬಹಳಷ್ಟು ಸಾರಿ ಗರ್ಭಿಣಿ ಸ್ತ್ರೀಯರಿಗೆ ಹೆರಿಗೆಗಾಗಿ ಆಸ್ಪತ್ರೆಗೆ ಹೋಗುವುದು ಸಾಧ್ಯವಾಗುವುದಿಲ್ಲ. ಅಂತಹ ಸಮಯದಲ್ಲಿ ನಾವು ನೆರವಾಗಿದ್ದೇವೆ." ಅಸ್ಸಾಂ ರಾಜ್ಯದಲ್ಲಿ ಪ್ರತಿ 100,000 ಮಕ್ಕಳ ಜನನದಲ್ಲಿ 328 ತಾಯಂದಿರು ಮರಣ ಹೊಂದುತ್ತಾರೆ. ಇದು ಭಾರತದಲ್ಲಿಯೇ ಅತಿ ಹೆಚ್ಚು ತಾಯಂದಿರ ಮರಣದ ಅನುಪಾತವಾಗಿದೆ.

ದೋಣಿಯಲ್ಲಿ ಬರುವ ಆಸ್ಪತ್ರೆಯು ಕುಟುಂಬ ಯೋಜನೆಯನ್ನು ಸಹ ಪ್ರೋತ್ಸಾಹಿಸುತ್ತದೆ. ದ್ವೀಪವಾಸಿಗಳ ಅನಕ್ಷರತೆ ಹಾಗೂ ಮೂಢನಂಬಿಕೆ ಈ ಕೆಲಸವನ್ನು ಕಠಿಣಗೊಳಿಸುತ್ತವೆ. ದೋಣಿ ದವಾಖಾನೆಯಲ್ಲಿ ವೈದ್ಯರಾಗಿರುವ ಮಿನ್ಹಜುದ್ದೀನ್ ಅಹಮದ್ ಹೇಳುತ್ತಾರೆ

(51ನೇ ಪುಟಕ್ಕೆ)

# ನಿಮಗಿದು ತಿಳಿದಿದೆಯೇ?

## ಯುರೊ ಕ್ಲಿಯರ್

ಅಂತಾರಾಷ್ಟ್ರೀಯ ವ್ಯಾಪಾರ ದೇಶೀಯ ಭದ್ರತೆ ಆಧರಿಸಿದ, ವ್ಯಾಪಾರ, ವಹಿವಾಟು ಅದರಲ್ಲಿಯೂ ವಿಶೇಷವಾಗಿ ಯುರೊ ಬಾಂಡ್ ಮಾರುಕಟ್ಟೆ ವಹಿವಾಟಿಗೆ ಸಂಬಂಧಿಸಿದ ಪ್ರಕರಣಗಳನ್ನು ಇತ್ಯರ್ಥಪಡಿಸಲು ಯುರೊಕ್ಲಿಯರ್ ಸ್ಥಾಪಿಸಲಾಯಿತು. 1968ರಲ್ಲಿ ಬೆಲ್ಜಿಯಂನಲ್ಲಿ ಅಸ್ತಿತ್ವಕ್ಕೆ ಬಂದ ಈ ಹಣಕಾಸು ಸೇವಾ ಕಂಪನಿ, ಸಂಪತ್ತು ಸೇವೆ ಹಾಗೂ ಭದ್ರತಾ ವಹಿವಾಟುಗಳಲ್ಲಿ ಕಂಡುಬರುವ ಸಮಸ್ಯೆಗಳನ್ನು ನಿವಾರಿಸುತ್ತದೆ.

90ಕ್ಕೂ ಹೆಚ್ಚು ದೇಶಗಳಲ್ಲಿ ಈ ಕಂಪನಿಯ ಸೇವೆಗಳಿವೆ. ಇದು ಜಗತ್ತಿನ ಅತಿ ದೊಡ್ಡ ಅಂತಾರಾಷ್ಟ್ರೀಯ ಕೇಂದ್ರೀಯ ಭದ್ರತಾ – ಸಂಗ್ರಹವಾಗಿದೆ. ಯುರೊಕ್ಲಿಯರ್ ಕಂಪನಿಯ ವಾರ್ಷಿಕ ವಹಿವಾಟು 500 ಟ್ರಿಲಿಯನ್ ಯುರೊಗಳಾಗಿದ್ದು, ಗ್ರಾಹಕರಿಗಾಗಿ ಹಿಡಿದಿಡಲಾಗಿರುವ ಮೊತ್ತ 23 ಟ್ರಿಲಿಯನ್ ಯುರೊಗಳಾಗಿವೆ.

ವಿದೇಶಿ ಬಂಡವಾಳ ಹೂಡಿಕೆ ಆಕರ್ಷಿಸುವ ನಿಟ್ಟಿನಲ್ಲಿ ಭಾರತ 2012ರಲ್ಲಿ ಯುರೊಕ್ಲಿಯರ್ ಸೇರಿಕೊಳ್ಳುವ ಬಗ್ಗೆ ಚಿಂತನೆ ನಡೆಸಿತು.

ಯುರೊಕ್ಲಿಯರ್ ಅತಿ ಬಲಿಷ್ಠ ಅಂತಾರಾಷ್ಟ್ರೀಯ ಬಂಡವಾಳ ಹೂಡಿಕೆದಾರರೊಂದಿಗೆ ಸಂಪರ್ಕ ಹೊಂದಿದ್ದು, ಭಾರತ ಯುರೊಕ್ಲಿಯರ್ ಆಶ್ರಯಕ್ಕೆ ಮುಂದಾದರೆ, ಯುರೊಕ್ಲಿಯರ್ ಮೂಲಕವೇ ಉತ್ಪನ್ನಗಳ ವಹಿವಾಟು ಆಗಬೇಕಾಗುತ್ತದೆ ಎನ್ನುವುದು ಆರ್ಥಿಕ ಮಾರುಕಟ್ಟೆ ತಜ್ಞರ ಅಭಿಪ್ರಾಯ.

## ಕ್ರೌಡ್ ಸೋರ್ಸಿಂಗ್

ಸಾಂಪ್ರದಾಯಿಕವಾಗಿ ಗೊತ್ತಿರುವ ಪೂರೈಕೆದಾರರ ಬದಲಾಗಿ ಇಂಟರ್‌ನೆಟ್ ಅಥವಾ ಆನ್‌ಲೈನ್ ಸಮುದಾಯಗಳ ಮೂಲಕ ಜನರಿಂದ, ದೇಣಿಗೆ, ನಿಧಿ, ಸೇವೆ, ವಿಚಾರಧಾರೆ, ಚಿತ್ರ, ಮಾಹಿತಿಗಳನ್ನು ಪಡೆಯುವ ಪ್ರಕ್ರಿಯೆಗೆ ಕ್ರೌಡ್ ಸೋರ್ಸಿಂಗ್ ಎನ್ನುತ್ತಾರೆ.

ಒಬ್ಬರಿಗಿಂತ ಹತ್ತು ಜನ ಸೇರಿ ವಿಚಾರ ಮಥನ ನಡೆಸಿದರೆ, ಉತ್ತಮ ಮಾರ್ಗ ಕಂಡುಕೊಳ್ಳಬಹುದೆಂಬುದು ಈ ಕ್ರಮದ ಉದ್ದೇಶ.

ವ್ಯಾಪಕ ಮಾಹಿತಿ, ಅಪೂರ್ವ ಕೌಶಲ್ಯಗಳು ಮಿತ ಬೆಲೆಯಲ್ಲಿ, ಅನೇಕ ಬಾರಿ ಖರ್ಚಿಲ್ಲದೆ ದೊರೆಯುವ ಕಾರಣ, ಅನೇಕ ಕಂಪನಿಗಳು ಈ ಸೌಲಭ್ಯಕ್ಕೆ ಪದೇ ಪದೇ ಮೊರೆ ಹೋಗುತ್ತವೆ.

ಈ ವ್ಯವಸ್ಥೆಯಲ್ಲಿ ಹವ್ಯಾಸಿಗಳು, ತಜ್ಞರು, ಅರೆಕಾಲಿಕ ಕೆಲಸಗಾರರು, ನಿಪುಣರು ಒಟ್ಟಾಗಿ ವಿಚಾರ ವಿನಿಮಯ ನಡೆಸುವ ಕಾರಣ, ಸರ್ವರಿಗೂ ಒಪ್ಪಿಗೆಯಾಗುವ ಫಲಿತಾಂಶ ಒದಗುವುದೆಂಬುದು ಕಂಪನಿಗಳ ನಿರೀಕ್ಷೆ. ಇದರಲ್ಲಿ ಕೆಲಸ, ವೇಗವಾಗಿ ನಡೆಯುವುದಲ್ಲದೆ. ಕಡಿಮೆ ತಪ್ಪುಗಳಾಗುತ್ತವೆ ಎನ್ನುವುದು ಅನುಭವ ವೇದ್ಯ.

ಕೆಲಸ ನಿರ್ವಹಿಸಿದವರಿಗೆ ದೊರಕುವುದು ಪ್ರಶಂಸೆ ಮಾತ್ರ. ಕೆಲವೊಮ್ಮೆ ಗೌರವಧನ, ಪ್ರಶಸ್ತಿಗಳೂ ದೊರಕುವುದುಂಟು. ❑

(50ನೇ ಪುಟದಿಂದ)

## ದೋಣಿ ದವಾಖಾನೆಗಳು

"ಕುಟುಂಬ ಯೋಜನೆಯ ವಿಚಾರದಲ್ಲಿ ಹಳ್ಳಿ ಜನರ ಮನೋಭಾವವನ್ನು ಬದಲಾಯಿಸಿ, ಅವರ ತಪ್ಪು ತಿಳಿವಳಿಕೆಗಳನ್ನು ಹೋಗಲಾಡಿಸಿ, ಅವರಲ್ಲಿ ನಂಬಿಕೆ ಮೂಡುವಂತೆ ಮಾಡಲು ನಾವು ನಮ್ಮ ಸಾಮರ್ಥ್ಯ ಮೀರಿ ಕೆಲಸ ಮಾಡಬೇಕಾಗುತ್ತದೆ. ನಾವು ಹೆಣ್ಣುಮಕ್ಕಳು ಅತಿ ಚಿಕ್ಕ ವಯಸ್ಸಿನಲ್ಲಿ ಮದುವೆಯಾಗುವುದನ್ನು ತಡೆಯುವ ಪ್ರಯತ್ನ ಹಾಗೂ ಎರಡು ಮಕ್ಕಳ ಜನನದ ನಡುವೆ ಅಂತರ ಕೊಡುವುದರ ಬಗ್ಗೆ ತಿಳಿವಳಿಕೆ ನೀಡುವ ಕೆಲಸ ಸಹ ಮಾಡುತ್ತೇವೆ."

ದ್ವೀಪವಾಸಿಗಳಲ್ಲಿ ಹೆಚ್ಚಾಗಿ ನೀರಿನಿಂದ ಹರಡುವ ರೋಗಗಳು ಹಾಗೂ ಚರ್ಮದ ಸೋಂಕುಗಳು ಕಾಣಿಸಿಕೊಳ್ಳುತ್ತವೆ. ಅಸ್ಸಾಂನಲ್ಲಿ ಬ್ರಹ್ಮಪುತ್ರಾ ನದಿಯ ದ್ವೀಪಗಳಲ್ಲಿ ವಾಸಿಸುವ ಸುಮಾರು 30 ಲಕ್ಷ ಜನರ ಜೀವನ ಎಲ್ಲರಿಗಿಂತ ಭಿನ್ನ ಹಾಗೂ ಕಷ್ಟಕರ ಎಂಬುದರಲ್ಲಿ ಸಂದೇಹವೇ ಇಲ್ಲ. ಅಂತೆಯೇ ದೋಣಿ ದವಾಖಾನೆ ಸಹ ದ್ವೀಪ ಸಮುದಾಯವನ್ನು ತಲುಪುವುದು ದೊಡ್ಡ ಸವಾಲಾಗಿದೆ.

ಸೆಂಟರ್ ಫಾರ್ ನಾರ್ತ್ ಈಸ್ಟ್ ಸ್ಟಡೀಸ್ ಮತ್ತು ಪಾಲಿಸಿ ರಿಸರ್ಚ್ ಸಂಸ್ಥೆಯ ಸಿಇಓ ದೀಪಂಕರ್ ದಾಸ್ ಅವರ ಪ್ರಕಾರ ಸಮಸ್ಯೆಗಳು ವರ್ಷದ ಎಲ್ಲಾ ಕಾಲದಲ್ಲಿಯೂ ಇದ್ದೇ ಇರುತ್ತವೆ. ಮೋಟಾರ್ ದೋಣಿಯು ನೀರಿನಲ್ಲಿ ಚಲಿಸಲು ನೀರಿನ ಕನಿಷ್ಠ ಮಟ್ಟ ನಾಲ್ಕು ಅಡಿಗಳು ಇರಲೇಬೇಕು. ಬೇಸಿಗೆಕಾಲದಲ್ಲಿ ನೀರಿನ ಮಟ್ಟ ಕಡಿಮೆಯಾಗುವುದರಿಂದ ತಂಡವು ನಡೆದೇ ದ್ವೀಪಗಳನ್ನು ತಲುಪಬೇಕಾಗುತ್ತದೆ. ಒಂದು ಸಾರಿಯಂತೂ ಹಳ್ಳಿಯನ್ನು ತಲುಪಲು 10 ಕಿಲೋಮೀಟರ್ ಕಾಲ್ನಡಿಗೆಯಲ್ಲಿ ಹೋಗಬೇಕಾಯಿತು. ಮಳೆಗಾಲದಲ್ಲಿ ಬಿರುಗಾಳಿ ಹಾಗೂ ಪ್ರವಾಹಕ್ಕೆ ಸಿಲುಕಿದ ದೋಣಿಯನ್ನು ಪರಿಣಿತ ರಕ್ಷಣಾ ತಂಡವು ರಕ್ಷಿಸಿ ದಡಕ್ಕೆ ಕರೆತಂದ ಉದಾಹರಣೆಗಳೂ ಇವೆ.

ಮೊದಲು ಆರೋಗ್ಯ ಸೌಕರ್ಯಗಳು ಹಳ್ಳಿಗಳ ಜನರಿಗೆ ಸಿಗುವುದೇ ಕನಸಿನ ಮಾತಾಗಿತ್ತು. ಈಗ ದೋಣಿ ದವಾಖಾನೆಗಳ ಮೂಲಕ ಉತ್ತಮ ಜೀವನ ನಡೆಸಬಹುದೆಂಬ ಭರವಸೆ ಸಿಕ್ಕಿದೆ." ಎಂದು ಸಂತಸದಿಂದ ಹೇಳುತ್ತಾರೆ ದಿಬ್ರುಗರ್ ಜಿಲ್ಲೆಯ ದ್ವೀಪವಾಸಿ ಅಂಜನ ದಾಸ್. ❑

# ವಾರ್ತಾ ವಿಶೇಷ

ಮುಂಗಾರು ಮಳೆ ಅಭಾವದಿಂದ ದೇಶದಲ್ಲಿ ಉದ್ಭವಿಸಿರುವ ಬರಗಾಲ ಸ್ಥಿತಿಯನ್ನು ಸಮರ್ಥವಾಗಿ ನಿರ್ವಹಿಸಲು ಸಿದ್ಧತೆ ನಡೆಸಿರುವ ಕೇಂದ್ರ ಸರ್ಕಾರವು ಕುಡಿಯುವ ನೀರಿನ ಲಭ್ಯತೆ ಹಾಗೂ ಪೂರೈಕೆ ಕುರಿತು ತುರ್ತು ಯೋಜನೆ ಸಿದ್ಧಪಡಿಸುವಂತೆ ರಾಜ್ಯ ಸರ್ಕಾರಗಳಿಗೆ ಸೂಚಿಸಿದೆ. ಮುಂಗಾರು ವಿಳಂಬದಿಂದ ದೇಶದ ಕೆಲವು ರಾಜ್ಯಗಳಲ್ಲಿ ತೀವ್ರ ನೀರಿನ ಅಭಾವ ಎದುರಾಗಬಹುದು ಎಂಬ ವರದಿಗಳ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಈ ಸೂಚನೆ ನೀಡಿದೆ. ಹವಾಮಾನ ಮುನ್ಸೂಚನೆ ನೀಡುವ ಖಾಸಗಿ ಸಂಸ್ಥೆಗಳ ವರದಿ ಪ್ರಕಾರ ದೇಶದಲ್ಲಿ ಜೂನ್ ತಿಂಗಳಲ್ಲಿ ವಾಡಿಕೆಗಿಂತ ಶೇ. 42 ರಷ್ಟು ಕಡಿಮೆ ಮಳೆಯಾಗಿದೆ. ಕಳೆದ ನೂರು ವರ್ಷಗಳಲ್ಲಿ ಇಂತಹ ಪರಿಸ್ಥಿತಿ ನಿರ್ಮಾಣವಾಗುತ್ತಿರುವುದು ಇದು 12ನೇ ಸಲ. ಈ ಸಂದರ್ಭಗಳಲ್ಲಿ ಮಳೆಯ ಕೊರತೆ ಪ್ರಮಾಣ ಶೇ. 30ಕ್ಕಿಂತ ಹೆಚ್ಚಿತ್ತು. ನೀರಿನ ಸಮಸ್ಯೆ ಪರಿಹಾರಕ್ಕೆ ಮೊದಲ ಆದ್ಯತೆ ನೀಡುವಂತೆ ಎಲ್ಲ ರಾಜ್ಯಗಳಿಗೆ ಸೂಚನೆ ನೀಡಲಾಗಿದ್ದು, ಈ ಕುರಿತಾದ ಸಮಗ್ರ ಅಂಕಿ, ಅಂಶ ಹಾಗೂ ಮಾಹಿತಿ ವೆಬ್‌ಸೈಟ್‌ನಲ್ಲಿ ಸಾರ್ವಜನಿಕರಿಗೆ ಲಭ್ಯವಾಗಲಿದೆ.

* * *

ಭಾರತದಲ್ಲಿ ಚೀನಾ ಕೈಗಾರಿಕಾ ವಲಯ ಸ್ಥಾಪಿಸುವುದು ಸೇರಿದಂತೆ ಮೂರು ಒಪ್ಪಂದಗಳಿಗೆ ಭಾರತ ಮತ್ತು ಚೀನಾ ಸಹಿ ಹಾಕಿವೆ. ಉಪರಾಷ್ಟ್ರಪತಿ ಶ್ರೀ ಹಮೀದ್ ಅನ್ಸಾರಿ ಮತ್ತು ಚೀನಾ ಉಪಾಧ್ಯಕ್ಷ ಶ್ರೀ ಲಿ ಯುವಾಂಚೊ ಅವರೊಂದಿಗೆ ಸುದೀರ್ಘ ಮಾತುಕತೆ ನಡೆದ ಬಳಿಕ ಚೀನಾದಲ್ಲಿ ಈ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಭಾರತದಲ್ಲಿ ಚೀನಾ ಕೈಗಾರಿಕಾ ವಲಯ ಸ್ಥಾಪನೆಗೆ ಅವಕಾಶ ನೀಡಲು ಸಚಿವ ಸಂಪುಟ ಕಳೆದ ವಾರವಷ್ಟೇ ಅನುಮೋದನೆ ನೀಡಿತ್ತು. ಕೈಗಾರಿಕಾ ವಲಯದ ಸ್ಥಾಪನೆಗೆ ನೀಡುವ ಸಹಕಾರವು ಭಾರತದಲ್ಲಿ ಚೀನಾದ ಹೂಡಿಕೆ ಹೆಚ್ಚಿಸಲು ಉತ್ತೇಜನ ನೀಡುತ್ತದೆ

* * *

ದೇಶದ ಪ್ರತಿಷ್ಠಿತ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ – ಇಸ್ರೊ, ಪಿ.ಎಸ್.ಎಲ್.ವಿ.ಸಿ23 ಉಡ್ಡಯನ ವಾಹಕದ ಮೂಲಕ ಐದು ವಿದೇಶಿ ಉಪಗ್ರಹಗಳನ್ನು ಯಶಸ್ವಿಯಾಗಿ ಹಾರಿಬಿಟ್ಟಿದೆ. ಜೂನ್ 30 ರಂದು ಶ್ರೀ ಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಉಡ್ಡಯನ ಕೇಂದ್ರದಿಂದ ಫ್ರಾನ್ಸ್, ಜರ್ಮನಿ, ಸಿಂಗಪುರ ದೇಶಗಳ ತಲಾ ಒಂದು ಹಾಗೂ ಕೆನಡಾದ ಎರಡು ಉಪಗ್ರಹಗಳನ್ನು ನಿಖರವಾಗಿ ಹಾರಿಬಿಡಲಾಗಿದ್ದು ದೇಶದ ಉಡ್ಡಯನ ಸಾಮರ್ಥ್ಯಕ್ಕೆ ಹಿಡಿದ ಕೈಗನ್ನಡಿಯಾಗಿದೆ.

ಈ ಯಶಸ್ವಿ ಉಡ್ಡಯನವನ್ನು ವೀಕ್ಷಿಸಿದ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು, ಬಾಹ್ಯಾಕಾಶ ಯೋಜನೆಗಳು ಮಾನವಕುಲದ ಕಲ್ಯಾಣದ ಸಾಧನಗಳು ಮತ್ತು ಸೇವಾ ತತ್ಪರತೆಯ ದ್ಯೋತಕಗಳೇ ಹೊರತು ಶಕ್ತಿ ಪ್ರದರ್ಶನದ ಪ್ರತಿಷ್ಠೆಯಲ್ಲ ಅತ್ಯಾಧುನಿಕ ತಂತ್ರಜ್ಞಾನದ ಲಾಭವನ್ನು ಹೊಂದಲು ಸಾಧ್ಯವಿಲ್ಲದವರೊಂದಿಗೆ ಹಂಚಿಕೊಳ್ಳಬೇಕು ಎಂದರು. ❑


## Subscription Coupon

**[For New membership /Renewal/Change of Address]**

I want to subscribe to :

Yojana / Kurukshetra / Ajkal / : 1 yr. Rs.100/-; 2 yrs, Rs.180/- ; 3 yrs, Rs.250/-

Bal Bharati : 1 yr. Rs.80/-; 2 yrs, Rs.150/- ; 3 yrs, Rs.200/-

**(Circle the magazine of your choice and the period of subscription)**

DD/PO/MO No.______________________ date ____________

Name (in block letters) : ______________________

Subscriber's profile : Student / Academician / Institution / Others

Address : ______________________

______________________

PIN : ______________

The amount may kindly be sent in the form of D.D. It should be drawn in favour of ADG (I/C), Publications Division, Min. of I & B, GOI and payable at New Delhi. The D.D. along with duly filled cupon may kindly be sent to The Business Manager (Journals), Publications Division, East Block-IV, Level-7, R.K.Puram, New Delhi – 110066. Ph : 011-26100207, 26105590


Please allow us 4 to 6 weeks for the dispatch of the first issue.


P.S. : For Renewal / change in address, please quote your subscription number


# JEWELS


FROM


## PUBLICATIONS DIVISION








**For further Details Please Contact:**
**Yojana (Kannada)**
**1st Floor, 'F' Wing, Kendriya Sadana, Koramangala,**
**BANGALORE - 560 034**
**Ph.: 080-25537244 E-mail : yojanakannada@yahoo.com**

PUBLICATIONS DIVISION
MINISTRY OF INFORMATION & BROADCASTING
GOVERNMENT OF INDIA

e-mail : dpd@sb.nic.in, dpd@hub.nic.in
website : publicationsdivision.nic.in

ಜ್ಞಾನಾರ್ಜನೆಗಾಗಿ...
ಯೋಜನಾ – ಕನ್ನಡ ಮಾಸ ಪತ್ರಿಕೆ
ಚಂದಾದಾರರಾಗಿ




ವಿಳಾಸ
**ಯೋಜನಾ – ಕನ್ನಡ**
ಮೊದಲನೆ ಅಂತಸ್ತು,
'ಎಫ್' ವಿಂಗ್, ಕೇಂದ್ರೀಯ ಸದನ,
ಕೋರಮಂಗಲ, ಬೆಂಗಳೂರು – 560 034.
✆ : 25537244
e-mail : yojanakannada@yahoo.com

ಪತ್ರಿಕೆ ಸರಿಯಾಗಿ ತಲುಪಲು
ಚಂದಾದಾರರು, ಅಂಚೆ ಪಿನ್‌ಕೋಡ್ ಒಳಗೊಂಡ
ತಮ್ಮ ಪೂರ್ಣ ವಿಳಾಸ ಒದಗಿಸಬೇಕು.

**ಚಂದಾ ವಿವರ**

| | |
|---|---|
| ಒಂದು ವರ್ಷಕ್ಕೆ | ರೂ. 100/- |
| ಎರಡು ವರ್ಷಗಳಿಗೆ | ರೂ. 180/- |
| ಮೂರು ವರ್ಷಗಳಿಗೆ | ರೂ. 250/- |

ಚಂದಾ ಹಣವನ್ನು ಮನಿ ಆರ್ಡರ್- ಎಂ ಓ ಮೂಲಕವೇ ನಮ್ಮ ವಿಳಾಸಕ್ಕೆ ಕಳಿಸಿದರೆ ಉತ್ತಮ. ಎಂ ಓ ಕಳಿಸಿದ ಒಂದು ವಾರದ ಒಳಗೆ ನಮ್ಮ ಕಚೇರಿಯನ್ನು ಸಂಪರ್ಕಿಸಿ ನಿಮ್ಮ ವಿಳಾಸ-ವಿವರಗಳನ್ನು ದೃಢೀಕರಿಸಿಕೊಳ್ಳಬೇಕಾಗಿ ಕೋರಲಾಗಿದೆ.